ಅಭಿಪ್ರಾಯಕ್ಕೆ ಬಂದುದರಿಂದ, ೭೭ ಅಡಿ ಪೈಪ್‌ಗೆ ಆರ್ಡರ್ ಆಗಿದೆ, ಕೆಲಸ ಆಗುತ್ತಿದೆ, ಹೆಡ್ ಫಾಲ್ ಏನೂ ಅಷ್ಟು ಆಗುವುದಿಲ್ಲ. ಇದು ಟೆಕ್ನಿಕಲ್ ನಮಗೂ ನಿಮಗೂ ಅರ್ಥವಾಗುವುದಿಲ್ಲ.

ಶ್ರೀ ಪಿ. ರಾಂದೇವ್.—ಅಧ್ಯಕ್ಷರೇ, ಇದು ಸಾರ್ವಜನಿಕರ ಆಸ್ತಿ. ಸಾರ್ವಜನಿಕರ ಆಸ್ತಿಯಲ್ಲಿ ಪೈಪ್ ತೆಗೆದುಕೊಂಡರೆ ಯಾರಿಗೂ ಏನೂ ತೊಂದರೆಯಾಗುವುದು ಇರಲಿಲ್ಲ. ಇದು ಏನಾದರೂ ರಾಜಭವನ ಹೊಡೆದು ಹೋಗುವಂತ ಪರಿಸ್ಥಿತಿಗೆ ಬಂದಿದ್ದರೆ ಅದನ್ನು ಒಪ್ಪಿಕೊಳ್ಳುತ್ತೇನೆ. ಇದು ಏನಾಗಿದೆ ಎಂದರೆ ಈ ಹಟಮಾರಿತನದಿಂದ ನಾವು ೩೫ ಲಕ್ಷ ಜನ ನೀರು ಇಲ್ಲದೆ ತೊಂದರೆಗೆ ಒಳಗಾಗಿದ್ದೇವೆ. ತಾವು ನಮ್ಮನ್ನು ರಾಜ್ಯಪಾಲರ ಬಳಿ ಕರೆದುಕೊಂಡುಹೋಗಿ, ಬೆಂಗಳೂರು ನಗರದ ಶಾಸಕರೆಲ್ಲರೂ ಬರುತ್ತೇವೆ ಅವರಿಗೆ ನಮಸ್ಕಾರ ಮಾಡುತ್ತೇವೆ. ಇವತ್ತು ಪೈಪು ಮಾಡತಕ್ಕ ಫ್ಯಾಕ್ಟರಿ ಮುಚ್ಚಿದ್ದಾರೆ, ದಯಮಾಡಿ ಮಾನ್ಯ ಚಂದ್ರಶೇಖರ್ ಅವರು ನಮ್ಮನೆಲ್ಲಾ ರಾಜ್ಯಪಾಲರ ಬಳಿ ಕರೆದುಕೊಂಡು ಹೋದರೆ ಕೈ ಮುಗಿದು ಕೇಳಿಕೊಳ್ಳುತ್ತೇವೆ. ಇಲ್ಲದೇ ಹೋದರೆ ರಾಜ್ಯಪಾಲರಿಗೆ ಮುತ್ತಿಗೆ ಹಾಕತಕ್ಕ ಕ್ರಮ ಹಾಕಿಕೊಳ್ಳಬೇಕಾಗುತ್ತದೆ. ಎಂದು ಮಾನ್ಯ ಮಂತ್ರಿಗಳಿಗೆ ತಿಳಿಸಲಿಕ್ಕೆ ಇಷ್ಟಪಡುತ್ತೇನೆ.

ANNOUNCEMENT

MR. SPEAKER.—I have received a recommendation from the Governor for introduction of the Karnataka Mator Vehicles Taxation (Amendment)Bill, 1983.

ಶಾಸನ ರಚನೆ ಕಾರ್ಯಕಲಾಪಗಳು

ಕರ್ನಾಟಕ ರಾಜ್ಯದ ಮೋಟಾರು ವಾಹನಗಳ ತೆರಿಗೆ(ತಿದ್ದುಪಡಿ) ವಿಧೇಯಕ, ೧೯೮೩ ಮಂಡನೆ ಕೋರುವ ಪ್ರಸ್ತಾವ.

ಶ್ರೀ ಎ. ಲಕ್ಷ್ಮೀಸಾಗರ್ —(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) ಅಧ್ಯಕ್ಷರೇ, ಮಾನ್ಯ ಸಾರಿಗೆ ಸಚಿವರ ಪರವಾಗಿ, ಈ ಕೆಳಕಂಡ ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ಅನುಮತಿಯನ್ನು ಕೋರುತ್ತೇನೆ.

ಕರ್ನಾಟಕ ರಾಜ್ಯದ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ)ವಿಧೇಯಕ ೧೯೮೩.

ಅಧ್ಯಕ್ಷರು.—ಪ್ರಸ್ತಾವವು ಹೀಗಿದೆ,—

ಕರ್ನಾಟಕ ರಾಜ್ಯದ ಮೋಟಾರು ವಾಹನಗಳ ತೆರಿಗೆ(ತಿದ್ದುಪಡಿ)ವಿಧೇಯಕ ೧೯೮೩, ಮಂಡಿಸಲು ಅನುಮತಿಯನ್ನು ನೀಡುವುದು.

ಪ್ರಸ್ತಾವವು ಅಂಗೀಕೃತವಾಯಿತು.

ಶ್ರೀ ಎ ಲಕ್ಷ್ಮೀಸಾಗರ್.—ಕರ್ನಾಟಕ ರಾಜ್ಯದ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕ ೧೯೮೩, ಮುಂಡಿಸುತ್ತೇನೆ.

ಅಧ್ಯಕ್ಷರು.—ವಿಧೇಯಕವನ್ನು ಮಂಡಿಸಲಾಗಿದೆ.*

ಕರ್ನಾಟಕ ರಾಜ್ಯದ ಶಿಕ್ಷಣ ಸಂಸ್ಥೆಗಳ(ವ್ಯಕ್ತಿಪರ ಶುಲ್ಕ ನಿಷೇದಿಸುವ)ವಿಧೇಯಕ ೧೯೮೩.

ಅಧ್ಯಕ್ಷರು.—ಅಪೂರ್ಣ ಚರ್ಚೆ, ಶ್ರೀಮಾನ್ ವೀರಪ್ಪ ಮೊಯಿಲಿಯವರು ಮುಂದುವರಿಸಬಹುದು.

ಶ್ರೀ ಎಂ, ವೀರಪ್ಪ ಮೊಯಿಲಿ.—ಅಧ್ಯಕ್ಷರೇ, ಮಾನ್ಯ ಆರೋಗ್ಯ ಸಚಿವರು, ವಿದ್ಯಾ ಸಚಿವರು ಇದ್ದರೆ ಚೆನ್ನಾಗಿರುತ್ತಿತ್ತು.

ಅಧ್ಯಕ್ಷರು.—ಉತ್ತರವನ್ನು ಆರೋಗ್ಯ ಸಚಿವರೇ ಕೊಡುತ್ತಾರೆ.

---

* ಅನುಬಂಧ

ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೇ, ವಿದ್ಯಾ ಸಚಿವರಿಗೆ ಆರೋಗ್ಯ ಸ್ವಲ್ಪ ಸರಿಯಾಗಿಲ್ಲ. ಮಾನ್ಯ ಆರೋಗ್ಯ ಸಚಿವರು ಮೇಲ್ಮನೆಗೆ ಹೋಗಿದ್ದಾರೆ ಅವರಿಗೆ ನಾನು ಬರಲಿಕ್ಕೆ ಹೇಳಿಕಳಿಸುತ್ತೇನೆ.

(ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಸ್ಥಾನವನ್ನಲಂಕರಿಸಿದರು)

† ಶ್ರೀ ಎಂ. ವೀರಪ್ಪ ಮೊಯ್ಲಿ (ಕಾರ್ಕಳ).—ಸನ್ಮಾನ್ಯ ಅಧ್ಯಕ್ಷರೆ ಕಾಪಿಟೇಷನ್ ಫೀಸ್‌ನ ರದ್ದತಿ ಬಗ್ಗೆ ಸರ್ಕಾರದವರು ಒಂದು ಸುಗ್ರೀವಾಜ್ಞೆಯನ್ನು ಹೊರಡಿಸಿದ್ದಾರೆ. ಅದೇ ಪ್ರಕಾರ ಆದಕ್ಕೆ ಅನ್ವಯವಾಗಿ "ಪ್ರೊಹಿಬಿಷನ್ ಆಫ್ ಕ್ಯಾಪಿಟೇಷನ್ ಫೀ ಬಿಲ್" ಎಂದು ಈ ಸದನದಮುಂದೆ ತಂದಿದ್ದಾರೆ. ಈ ಸರ್ಕಾರ ಅಧಿಕಾರಕ್ಕೆ ಬಂದಕೂಡಲೇ ಈ ಕ್ಯಾಪಿಟೇಷನ್ ಫೀಸನ್ನು ತಕ್ಷಣ ರದ್ದುಮಾಡುತ್ತಾರೆಂದು ನಾವು ಬಹಳವಾಗಿ ನಿರೀಕ್ಷೆ ಮಾಡಿದ್ದೆವು ಇವರ ಮ್ಯಾನಿಫೆಸ್ಟೋದಲ್ಲಿ ...

ಶ್ರೀ ಎ. ಲಕ್ಷ್ಮೀಸಾಗರ್.—ತಕ್ಷಣ ಎಂದು ನಮ್ಮ ಮ್ಯಾನಿಫೆಸ್ಟೋನಲ್ಲಿ ಎಲ್ಲೂ ಹೇಳಿಲ್ಲ.

ಶ್ರೀ ಎಂ. ವೀರಪ್ಪ ಮೊಯ್ಲಿ.—ನಾವು ನಿರೀಕ್ಷೆ ಮಾಡಿದ್ದರಲ್ಲಿ ಏನು ತಪ್ಪಿದೆ? ಈ ಸರ್ಕಾರ ಇದನ್ನು ರದ್ದುಮಾಡಿ ತನ್ಮೂಲಕ ಕರ್ನಾಟಕ ರಾಜ್ಯದಲ್ಲಿ ಕ್ಯಾಪಿಟೇಷನ್ ಫೀಸ್‌ನ ದೊಡ್ಡ ಪಿಡುಗನ್ನು ಆರ್ಥಿಕವಾಗಿ, ಸಾಮಾಜಿಕವಾಗಿ ಹೋಗಲಾಡಿಸುತ್ತದೆಂದು ನಾವು ಕಾದು ನಿಂತಿದ್ದೆವು. ಇದು ಒಂದು ಪಕ್ಷದ ಪ್ರಶ್ನೆಯಲ್ಲ. ಈ ಕ್ಯಾಪಿಟೇಷನ್ ಫೀಸ್‌ನ ರದ್ದತಿಯನ್ನು ಎಲ್ಲರೂ ಒಪ್ಪಿಕೊಂಡಿದ್ದಾರೆ. ಈ ಪ್ರಶ್ನೆ ಸಾಮಾಜಿಕ ಮತ್ತು ಆರ್ಥಿಕ ಪಿಡುಗಾಗಿ ಇಡೀ ವಿದ್ಯಾ ಕ್ಷೇತ್ರಕ್ಕೇ ಅಪಮಾನ ಮಾಡಿ ದೊಡ್ಡ ಕಳಂಕವನ್ನೇ ತಂದಿಟ್ಟಿದೆ. ಇದು ನಿಲ್ಲುವುದಿಲ್ಲ. ಇದು ಜನರಮೇಲೆ ಪರಿಣಾಮವನ್ನು ಬೀರುತ್ತದೆ. ಇವತ್ತು ಸಮಾಜದ ಜನರಲ್ಲಿರತಕ್ಕ ಏರುಪೇರುಗಳನ್ನು ಹೋಗಲಾಡಿಸಿ ಸಮಾನತೆಯನ್ನು ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯವಾಗಿ ಉಂಟುಮಾಡಬೇಕು. ಪ್ರಜಾಪ್ರಭುತ್ವದಲ್ಲಿ ಪ್ರಜೆಗಳಿಗೆರತಕ್ಕ ಹಕ್ಕುಗಳನ್ನು ಸರಿಸಮಾನವಾಗಿ ಹಂಚಿಕೊಳ್ಳುವಾಗ ಅಡ್ಡಿ ಬರತಕ್ಕ ತೊಡಕುಗಳನ್ನು ನಿವಾರಣೆಮಾಡಿ ಆ ಹಕ್ಕು ಜನರಿಗೆ ಸಿಕ್ಕುವಂತೆ ಮಾಡಬೇಕು. ಇವತ್ತಿನದಿವಸ ಕ್ಯಾಪಿಟೇಷನ್ ಫೀಸ್‌ನ ಪಿಡುಗು ಇರುವುದರಿಂದ ಮೊದಲನೆಯದಾಗಿ ಸಮಾಜದ ಬಡ ಮಕ್ಕಳು ವಿದ್ಯಾಭ್ಯಾಸವನ್ನು ಸರಿಸಮಾನವಾಗಿ ಪಡೆಯಲು ಸಾಧ್ಯವಿಲ್ಲವಾಗಿದೆ. ಯಾರು ಹೆಚ್ಚು ಹಣವುಳ್ಳವರಾಗಿರುತ್ತಾರೆ ಅಂಥವರು ಮಾತ್ರ ಕಾಲೇಜುಗಳಿಗೆ, ಅಂದರೆ ಮೆಡಿಕಲ್ ಕಾಲೇಜಿಗೆ, ಇಂಜಿನಿಯರಿಂಗ್ ಕಾಲೇಜಿಗೆ ಹೋಗುವುದಕ್ಕೆ ಅವಕಾಶ ಇದೆ. ಅಂದರೆ ಬಡ ಮಕ್ಕಳ ಪಾಲಿಗೆ ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳು ಮುಚ್ಚಿದಂತಾಗಿವೆ. ಈ ಅನ್ಯಾಯ ಹೋಗಬೇಕು. ಸಮಾಜದಲ್ಲಿರತಕ್ಕ ಏರುಪೇರುತೊಲಗಬೇಕು. ತಮಗೆಲ್ಲಾ ಗೊತ್ತಿರುವಂತೆ ವರದಕ್ಷಿಣೆ ಒಂದು ದೊಡ್ಡ ಪಿಡುಗಾಗಿದೆ. ಇದರಿಂದ ಏನೇನು ಅನಾಹುತಗಳಾಗುತ್ತಿವೆ ಎಂಬುದನ್ನು ನಾವು ದಿನನಿತ್ಯ ಪತ್ರಿಕೆಗಳಲ್ಲಿ ನೋಡುತ್ತಿದ್ದೇವೆ. ಒಬ್ಬ ವಿದ್ಯಾರ್ಥಿ ಕ್ಯಾಪಿಟೇಷನ್ ಫೀಸ್ ಕೊಟ್ಟು ಮೆಡಿಕಲ್ ಓದಿದರೆ ಅವನಿಗೆ ಮುಂದೆ ೪೦–೫೦ ಲಕ್ಷ ರೂಪಾಯಿ ವರದಕ್ಷಿಣೆಯನ್ನು ಕೊಡುತ್ತಾರೆ. ನನಗೆ ಗೊತ್ತಿರುವಂತೆ ಒಬ್ಬ ವಿದ್ಯಾರ್ಥಿ ಮೆಡಿಕಲ್ ಓದಬೇಕಾದರೆ ೭ ಲಕ್ಷ, ಇಂಜಿನಿಯರಿಂಗ್ ಓದಬೇಕಾದರೆ ೩ ಲಕ್ಷ ರೂಪಾಯಿ ಖರ್ಚುಮಾಡಿರುತ್ತಾನೆ. ಅವನು ಮುಂದೆ ಕೆಲಸಕ್ಕೆ ಸೇರಿದರೆ ನಿಷ್ಠೆ, ನಿಸ್ವಾರ್ಥತೆಯಿಂದ ಕೆಲಸಮಾಡಲು ಸಾಧ್ಯವೆ ಎಂಬುದನ್ನು ಯೋಚಿಸಬೇಕು. ಅವನು ಸಮಾಜದಲ್ಲಿ ಸುಲಿಗೆ ಮಾಡಲು ತೊಡಗುತ್ತಾನೆ; ಇಂಥ ವ್ಯಾಪಕವಾದ ಪಿಡುಗನ್ನು ಹೋಗಲಾಡಿಸುವುದಾಗಿ ಚುನಾವಣೆಯ ಸಂದರ್ಭದಲ್ಲಿ ಜನತಾ ಪಕ್ಷದವರು ತಮ್ಮ ಮ್ಯಾನಿಫೆಸ್ಟೊದಲ್ಲಿ ಹಾಕಿದರು ಆದರೆ ಈಗ ಏನು ಹೇಳುತ್ತಿದ್ದಾರೆ ಎಂದರೆ ಇನ್ನು ೫ ವರ್ಷ ಆದಮೇಲೆ ಮತ್ತೆ ಚುನಾಯಿತರಾಗಿ ಬಂದಾಗ ಈ ಕ್ಯಾಪಿಟೇಷನ್‌ನ್ನು ರದ್ದುಮಾಡುತ್ತೇವೆ ಎಂದು. ಅದು ಬೇಡ ಜನತೆಗೆ ನೀಡಿರತಕ್ಕ ಆಶ್ವಾಸನೆಯನ್ನು ಇವರು ಈಡೇರಿಸಲೇಬೇಕು. ಮುಂದಿನ ವರ್ಷ ರದ್ದುಮಾಡುತ್ತೇವೆ, ಅಥವಾ ಈ ೫ ವರ್ಷದಲ್ಲಿ ರದ್ದುಮಾಡುತ್ತೇವೆ ಎಂದು ಹೇಳುವುದು ಬೇಡ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ. ಮಾನ್ಯ ವಿರೋಧಪಕ್ಷದ ನಾಯಕರಾದ ಮೊಯ್ಲಿಯವರು ರೈತರ ಬಗ್ಗೆ ಬಹಳ ಅನುಕಂಪವುಳ್ಳವರು. ಅವರದು ರಾಜಕೀಯ ಪಕ್ಷ. ನಾವು ಗರೀಬಿ ಹಟಾವೋ ಮಾಡುತ್ತೇವೆಂದು ದೊಡ್ಡದಾಗಿ ಬಹುಶಃ ೧೯೭೦–೭೧ರಲ್ಲಿ ಘೋಷಣೆ ಮಾಡಿದರು. ಅದು ಈಗ ಯಾವ ಹಂತದಲ್ಲಿದೆ? ಯಾವಾಗ ಈ ಕೆಲಸವನ್ನು ಮಾಡುತ್ತಾರೆ? ಏಕೆಂದರೆ, ಇವರ ಪಕ್ಷವೇ ಕೇಂದ್ರದಲ್ಲಿ ಆಡಳಿತ ನಡೆಸುತ್ತಿದೆ......

ಶ್ರೀ ಎಂ. ವೀರಪ್ಪಮೊಯ್ಲಿ.—ಈ ದೇಶದಲ್ಲಿ ಗರೀಬಿ ಹಠಾವೋಗೆ ಬದಲಾಗಿ ಗರೀಬರನ್ನು ಹಠಾವ್ ಮಾಡಬೇಕು ಅಷ್ಟೆ. ಅದು ಇರಲಿ. ಈಗ ಕ್ಯಾಪಿಟೇಷನ್ ಫೀಸನ್ನು ರದ್ದುಮಾಡುವುದಾಗಿ ತಮ್ಮದೇ ಆದ, ನಿರ್ದಿಷ್ಟವಾದ ಕಾರ್ಯಕ್ರಮಗಳನ್ನು ತಮ್ಮ ಮ್ಯಾನಿಫೆಸ್ಟೋದಲ್ಲಿ ತೋರಿಸಿದ್ದೀರಿ. ನಾನು ತಮ್ಮನ್ನು ಕೇಳುತ್ತೇನೆ, ಯಾವರೀತಿ ಇದನ್ನು ರದ್ದುಮಾಡುತ್ತೀರಿ ? ಈಗ ನೋಡಿದರೆ ಇನ್ನು ೫ ವರ್ಷದಲ್ಲಿ ರದ್ದುಮಾಡುತ್ತೇವೆಂದು ಹೇಳುತ್ತಿದ್ದೀರಿ. ನಿಮ್ಮ ಈ ಕಾನೂನು ಇನ್ನು ೨ ತಿಂಗಳಲ್ಲಿ ಜಾರಿಗೆ ಬರುತ್ತದೆ. ತಮ್ಮ ಮ್ಯಾನಿಫೆಸ್ಟೋದಲ್ಲಿ ಏನು ಹೇಳಿದ್ದೀರಿ ಎಂದರೆ :

"May by Order sp cify so however that such peried shall not in any case extend beyond 5 years from such date".

ಈ ಕಾನೂನು ಯಾವಾಗ ಫೋರ್ಸ್‌ಗೆ ಬರುತ್ತದೆ ? ಮೊದಲು ಇಲ್ಲಿ ಅಂಗೀಕಾರವಾದಮೇಲೆ ಮೇಲ್ಮನೆಯಲ್ಲಿ ಅಂಗೀಕಾರವಾಗಿ ಆಮೇಲೆ ರಾಜ್ಯಪಾಲರ ಅಂಗೀಕಾರವಾಗಿ ಅನಂತರ ಜಾರಿಗೆ ಬರುತ್ತದೆ. ಆದರೆ ಬಹುಶಃ ಅಕ್ಟೋಬರ್ ತಿಂಗಳಿಂದ ಜಾರಿಗೆ ಬರುತ್ತದೆ. ಇದ. ನಿಮ್ಮ ಚುನಾವಣಾ ಜಾಣ್ಮೆಯಾಗಿದೆ. ಇದರ ಅರ್ಥ ಈ ಸಾರಿ ಕಾಪಿಟೇಷನ್ ಫೀಸನ್ನು ಮುಂದುವರಿಸಿ ಇನ್ನೊಂದು ಚುನಾವಣೆಯಲ್ಲಿ ಗೆದ್ದುಬಂದಮೇಲೆ ರದ್ದುಮಾಡುತ್ತೇವೆಂದು ಹೇಳಿದಂತಾಯಿತು.

ಶ್ರೀ ಎ. ಲಕ್ಷ್ಮೀಸಾಗರ್.—ನೀವು ಹೇಳಿದಂತೆ ನಾವು ಮಾಡುವುದಿಲ್ಲ. ಮತ್ತು ನೀವು ಗರೀಬಿ ಹಠಾವೋ ಏನು ಮಾಡಿದಿರಿ ಆರೀತಿ ನಾವು ಮಾಡುವುದಕ್ಕೆ ಹೋಗುವುದಿಲ್ಲ.

ಶ್ರೀ ಎಂ. ವೀರಪ್ಪಮೊಯ್ಲಿ.—ತಾವು ತಿಳಿದವರು, ವಿದ್ಯಾವಂತರು; ಐ. ಆರ್. ಡಿ. ಪಿ., ಕಾರ್ಯಕ್ರಮ......

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದ ಒಂದು ಮಾತನ್ನು ನಾವು ಒಪ್ಪುತ್ತೇವೆ. ಅವರಂತೆ ನಾವು ಮಾಡುವುದಿಲ್ಲ. ನಾವು ಚುನಾವಣೆ ಕಾಲದಲ್ಲಿ ಜನತೆಗೆ ನೀಡಿದ ವಚನವನ್ನು ಉಳಿಸಿಕೊಳ್ಳುವುದಕ್ಕೆ ಪ್ರಯತ್ನಮಾಡುತ್ತೇವೆ

ಶ್ರೀ ಎಂ. ವೀರಪ್ಪಮೊಯ್ಲಿ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಹೇಳಿದರು, ಚುನಾವಣಾ ಪ್ರಣಾಳಿಕೆಯಲ್ಲಿ ತಾವು ಹೇಳಿರುವುದನ್ನು ಕಾರ್ಯಗತ ಮಾಡುತ್ತೇವೆ ಎಂದು. ಅವರು ತಮ್ಮ ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿರುವುದು ಕ್ಯಾಪಿಟೇಷನ್ ಫೀಸ್‌ನ್ನು ಸಂಪೂರ್ಣವಾಗಿ ರದ್ದು ಮಾಡುತ್ತೇವೆ..... ...

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಅಧ್ಯಕ್ಷರೆ, ನಾವು ಈ ಮಸೂದೆಯನ್ನು ಸಭೆಯ ಮುಂದಿಡುವಾಗ ಬಹಳ ಗಂಭೀರವಾಗಿ ಯೋಚನೆಮಾಡಿ ಮುಂದಿಟ್ಟಿದ್ದೇವೆ. ಇದು ನಮ್ಮ ಮೊದಲನೇ ಹೆಜ್ಜೆ. ಆದರೆ, ಕ್ಯಾಪಿಟೇಷನ್ ಫೀಸನ್ನು ಸಂಪೂರ್ಣವಾಗಿ ರದ್ದು ಮಾಡುತ್ತೇವೆ, ಇದು ಈಗಲೇ ಆಗಿಹೋಯಿತು ಎಂದು ನಾವು ಹೇಳುವುದಿಲ್ಲ......

ಶ್ರೀ ಎಂ. ವೀರಪ್ಪಮೊಯ್ಲಿ.—ಮಾನ್ಯ ಅಧ್ಯಕ್ಷರೆ, ನಾನು ಅಪ್ರಸ್ತುತ ವಿಚಾರಕ್ಕೆ ಹೋಗುವುದಿಲ್ಲ ನಮ್ಮ ಸರ್ಕಾರ ಗರೀಬಿ ಹಠಾವೋ ಬಗ್ಗೆ ಏನು ಕ್ರಮವನ್ನು ತೆಗೆದುಕೊಂಡಿದೆ ಎಂಬುದನ್ನು ನಾನು ಈಗ ಹೇಳುವುದಕ್ಕೆ ಹೋಗುವುದಿಲ್ಲ. ಈಗ ಸಭೆಯ ಮುಂದಿರತಕ್ಕ ವಿಷಯಕ್ಕೆ ಸೀಮಿತವಾಗಿ ಹೇಳುವುದಾದರೆ ಇನ್ನೂ ೫ ವರ್ಷದಲ್ಲಿ ಕ್ಯಾಪಿಟೇಷನ್ ಶುಲ್ಕವನ್ನು ರದ್ದುಮಾಡುತ್ತೇವೆಂದು ಹೇಳುವುದಾದರೆ ಇದು ತಮ್ಮ ಪ್ರಾಮಾಣಿಕತೆಯನ್ನು ಎತ್ತಿ ತೋರಿಸುತ್ತದೆ. ನೀವು ಇದನ್ನು ಕ್ರಮೇಣ ರದ್ದುಮಾಡುವ ಮನಸ್ಸಿದ್ದಿದ್ದರೆ ಇನ್ನು ೩-೪ ವರ್ಷದಲ್ಲಿ ರದ್ದು ಮಾಡುತ್ತೀರೆಂದು ಹೇಳುತ್ತೀರಿ.

ಶ್ರೀ ಎಸ್. ಬಂಗಾರಪ್ಪ.—ಈ ಶುಲ್ಕವನ್ನು ರದ್ದುಮಾಡುತ್ತೇವೆಂದು ತಾವೂ ಕೂಡ ಹೇಳಿದ್ದಿರಿ. ಆದರೆ ನೀವು ಮಾಡಲಿಲ್ಲ. ಆಗ ನೀವು ಹೇಳಿದ್ದನ್ನೇ ಈಗ ಇವರು ರಿಪೀಟ್ ಮಾಡುತ್ತಿದ್ದಾರೆ.

ಶ್ರೀ ಎಂ. ವೀರಪ್ಪಮೊಯ್ಲಿ.—ಆದರೆ ಹೋದರೆ, ಅಜ್ಜಿಗೊಂದು ಪಟ್ಟೇ ಸೀರೆ ಎಂದು ನಮ್ಮ ಹಳ್ಳಿಯ ಕಡೆ ಒಂದು ಗಾದೆಯನ್ನು ಹೇಳುತ್ತಾರೆ. ಅದೇ ರೀತಿ ಆದರೆ ಹೋದರೆ ನಾವೂ ೫ ವರ್ಷದಲ್ಲಿ ಈ ಫೀಸನ್ನು ಅಬಾಲಿಷ್ ಮಾಡುತ್ತೇವೆ, ಅಂದರೆ ಅಧಿಕಾರದಲ್ಲಿ ಮುಂದುವರೆದರೆ, ಎನ್ನುವ ಅಭಿಪ್ರಾಯ ನಿಮ್ಮದು. ನೀವು ಅಧಿಕಾರದಲ್ಲಿ ಮುಂದುವರಿಯಲಿ ಎಂಬುದೇ ನಮ್ಮ ಆಸೆ. ಆ ಲಕ್ಷಣ ಇದ್ದರೆ ನೀವು ಮುಂದುವರಿಯುತ್ತೀರೆಂದು ನನಗನ್ನಿಸುತ್ತದೆ.

ಶ್ರೀ ಜೆ. ಹೆಚ್. ಪಟೇಲ್.—ನಾವು ಮುಂದುವರಿಯುವುದು, ಬಿಡುವುದು ನಿಮ್ಮ ಕೈಯಲ್ಲಿಲ್ಲ. ಅದು ನಿಮ್ಮ ಕೈಯಲ್ಲಿದ್ದಿದ್ದರೆ ಯಾವತ್ತೋ ನಮ್ಮನ್ನು ಉರುಳಿಸಿ ಬಿಡುತ್ತಿದ್ದೀರಿ. ಆದರೆ ಅದು ನಿಮ್ಮ ಕೈಯಲ್ಲಿಲ್ಲ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಅದು ವಿ. ಎಸ್. ಆಚಾರ್‌ರವರ ಕೈಯಲ್ಲಿದೆ. ಆದರೆ ಆ ಆಚಾರ್‌ರವರ ಸಹಕಾರ ನಮಗೆ ಬೇಕಾಗಿಲ್ಲವೆಂದು ನೀವು ಹೇಳುತ್ತಿದ್ದೀರಿ.

ಶ್ರೀ ಜೆ. ಹೆಚ್. ಪಟೇಲ್.—ಅವರ, ನಮ್ಮ ಸಂಬಂಧ ನಿಮಗೆ ಏತಕ್ಕೆ? ನಾವೂ ಅವರೂ ಚೆನ್ನಾಗಿಯೇ ಇದ್ದೇವೆ. ಅವರಿವರ ಸಂಬಂಧ ಹೇಗಿದಿಯೋ ನಮಗಂತೂ ಗೊತ್ತಿಲ್ಲ. ನಾವು ಅದರ ಗೋಜಿಗೆ ಹೋಗುವುದಿಲ್ಲ. ನಮಗೆ ಬೇರೆಯವರ ಸಂಬಂಧವೂ ಬೇಡ ಇವರ ಸಂಬಂಧವೂ ಬೇಡ.

ಶ್ರೀ ಹೆಚ್. ಗಂಗಾಧರನ್.—ಹಾಗಾದರೆ ತಾವು ಬೇರೆ ಯಾರ ಸಂಬಂಧವನ್ನು ಮಾಡಲು ವೈಯಕ್ತಿಕವಾಗಿ ಚಿಂತೆ ಮಾಡುತ್ತಿರುವಂತೆ ಕಾಣುತ್ತದೆ.

ಶ್ರೀ ಎಂ. ವೀರಪ್ಪಮೊಯಿಲಿ.—ನೋಡೋಣ. ಅದು ಹೇಗೆ ಆಗುತ್ತದೋ. ಈಗ ಪ್ರಮುಖವಾಗಿ ಪ್ರಾಮಾಣಿಕವಾದಂಥ ಪ್ರಯತ್ನವಂತು ಮಾಡಿದ್ದು ಈ ಮಸೂದೆಯಲ್ಲಿ ಇಲ್ಲ. ಇಲ್ಲಿ ಮಾಡಿದ್ದೇವೆಂದರೆ ತಮ್ಮ ಉದ್ದೇಶ ಏನೆಂದರೆ ಮುಂದಿನ ಚುನಾವಣೆಗೆ ಇದನ್ನು ಪ್ರಚಾರವಾಗಿ ಇರಲಿ ಅಂಥ ಉದ್ದೇಶದಿಂದ ತಂದಿದ್ದರೆ ಅದನ್ನಾದರೂ ದಯುವಿಟ್ಟು ಹೇಳಿ. ತಮ್ಮ ವಿಚಾರವ ಪ್ರಾಮುಖ್ಯತೆಗೆ ಮೆಚ್ಚುಗೆಯನ್ನು ಕೊಡೋಣ ಅದನ್ನು ಬಿಟ್ಟು ಈವತ್ತು ಏನು ಮಾಡಿದ್ದೀರಿ ಎಂದರೆ ನಮ್ಮ ಸರ್ಕಾರ ಕೂಡ ಕ್ರಮ ತೆಗೆದುಕೊಂಡಿತ್ತು. ಅದು ಬೇರೆ ಅಂತಿಮವಾಗಿ ತೆಗೆದುಕೊಂಡಿದ್ದು ಅಲ್ಲ. ನಾವು ಇಂತಿಷ್ಟು ಸೀಟ್‌ಗಳನ್ನು ಕಟ್‌ಮಾಡಿಕೊಂಡು ಸರ್ಕಾರಕ್ಕೆ ಸೇರಿಸಿಕೊಂಡು, ಅನಂತರ ಐದನೇ ವರ್ಷಕ್ಕೆ ಹೋಗುವಾಗ ನಾವು ಪೂರ್ತಿ ರದ್ದುಮಾಡಬೇಕೆಂದು ಹೇಳಿ ಸರ್ಕಾರ ಕೂಡ ಆಜ್ಞೆ ಮಾಡಿತ್ತು. ನೀವು ಏನು ಮಾಡಿದ್ದೀರಿ ಐದು ವರ್ಷದ ಒಳಗೆ ಮಾಡುತ್ತೇವೆ......

(ಗೊಂದಲ)

ಶ್ರೀ ಎಂ. ರಘುಪತಿ.— ತಾವು ಒಂದು ನಿಮಿಷ ಈಲ್ಡ್ ಆಗುತ್ತೇನೆ ಎಂದರೆ...

ಶ್ರೀ ಎಂ. ವೀರಪ್ಪಮೊಯಿಲಿ.— ತಾವು ಪೂರ್ತಿಯಾಗಿ ಕೇಳಿ. ಏತಕ್ಕೆಂದರೆ ವಿಚಾರ ಪೂರ್ತಿಯಾಗದೆ ಅರ್ಧಂಬರ್ಧವಾದರೆ ತಮಗೂ ಅರ್ಥವಾಗುವುದಿಲ್ಲ. ನಮಗೂ ಅರ್ಥವಾಗುವುದಿಲ್ಲ, ನಿಮಗೆ ಅರ್ಥವಾಗದಿದ್ದರೆ ಹೇಳಿ ಏನು ಪ್ರಯೋಜನ? ಅದರಲ್ಲಿ ಸುಮ್ಮನೆ ಭಿನ್ನಾಭಿಪ್ರಾಯ ಸಂಘರ್ಷಣೆಗೆ ಕಾರಣ.

ಶ್ರೀ ಎಂ. ರಘುಪತಿ.—ಅರ್ಥವಾಗಿಲ್ಲವೆಂದು ಹೇಳುವುದಕ್ಕೆ ತಮಗೆ ಹೇಳುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ.—ತಮಗೆ ಅರ್ಥವಾಗುವಂತೆ ಮಾಡಿದ್ದೇವೆ. ಪ್ರಾಮಾಣಿಕವಾಗಿ ನಾವು ಮಾಡಿದ್ದೇವೆ.

ಶ್ರೀ ಎಂ. ರಘುಪತಿ.— ಒಂದೇ ಒಂದು ವಿವರಣೆಯನ್ನು ಕೇಳುತ್ತೇನೆ. ಈ ಒಂದು ಆಜ್ಞೆ ತಂದರಲ್ಲ ಆಗ ಹಿಂದೆ ನಿಮ್ಮ ಸರ್ಕಾರ ಇದ್ದಾಗ ಆ ಆಜ್ಞೆ ಕೋರ್ಟಿಗೆ ಹೋಗಿತ್ತು ಎನ್ನುವುದು ಗೊತ್ತಿಲ್ಲವೆ?. ಕೋರ್ಟಿನಲ್ಲಿ ತಪ್ಪು ಆಜ್ಞೆ ಬಂದಿದೆ...

(ಗೊಂದಲ)

ಶ್ರೀ ಎಂ. ವೀರಪ್ಪಮೊಯಿಲಿ.—ಇದು ವ್ಯವಹಾರಕ್ಕೆ ಬಾರದೇ ಇರತಕ್ಕಂಥ ಮಾತು

(ಗೊಂದಲ)

ಶ್ರೀ ಎಂ. ರಘುಪತಿ.— ವ್ಯವಹಾರಕ್ಕೆ ಬರತಕ್ಕಂಥ ಮಾತು.

ಶ್ರೀ ಎಂ. ವೀರಪ್ಪಮೊಯಿಲಿ.—ತಾವು ಹೇಳಿದರಲ್ಲ ನಿಮಗೆ ಏನಾದರೂ ಭಂಗ ಬಂದಿದೆಯೇ ರಘುಪತಿಯವರೇ ?

ಶ್ರೀ ಎಂ. ರಘುಪತಿ —ಬಿಲ್ಲನ್ನು ತಂದಿರಲಿಲ್ಲ. ಬಿಲ್ಲನ್ನು ಪ್ರಾಮಾಣಿಕವಾಗಿ ತರಲಿಕ್ಕೆ ತಾವು ಪ್ರಯತ್ನ ಮಾಡಲಿಲ್ಲ. ಹೋದಸಾರಿ ಎಂದು ಹೇಳುತ್ತೇನೆ. ಬಿಲ್ ತಂದಿದ್ದರೆ ಗೌವರ್ನಮೆಂಟ್ ಆರ್ಡರ್ ಪ್ರಕಾರ ಕೋರ್ಟ್‌ಗೆ ಹೋಗುತ್ತೇವೆಂದು ಹೇಳುತ್ತಿದ್ದರೆ.

(ಗೊಂದಲ)

ಶ್ರೀ ಎಂ. ವೀರಪ್ಪಮೊಯಿಲಿ.—ಅಧ್ಯಕ್ಷರೇ ಇವರು ಏನು ಮಾಡಿದರು, ಶ್ರೀ ಜೆ. ಎಚ್. ಪಟೇಲ್‌ರಾದರೂ ಇಂಟರಪ್ಷನ್ ಮಾಡಿದರೆ ಲೌವ್‌ಲಿಯಾಗಿರುತ್ತದೆ ಕೇಳುವುದಕ್ಕೆ. ಇವರು ಇಂಟರಪ್ಟ್ ಮಾಡಿದರೆ...

ಶ್ರೀ ಎಂ. ರಘುಪತಿ,—ನಿಜ ಹೇಳಿದರೆ ಬೆನ್ನು ಮುಟ್ಟಿಕೊಂಡ ಹಾಗೆ. ತಾವು ಬಿಲ್ ತಂದಿದ್ದರೆ ಕೋರ್ಟಿಗೆ ಹೋಗುತ್ತಾ ಇರಲಿಲ್ಲ.

ಶ್ರೀ ಎಂ. ವೀರಪ್ಪಮೊಯಿಲಿ —ಸನ್‌ಮಾನ್ಯ ಸಚಿವರು ರಘುಪತಿಯಂಪರನ್ನು ನಾವು ಸೀರಿಯಸ್ ಆಗಿ ತೆಗೆದುಕೊಳ್ಳುವುದೇ ಇಲ್ಲ. ಸನ್‌ಮಾನ್ಯ ಜೆ. ಎಚ್. ಪಟೇಲರು ಇಂಟರಪ್ಷನ್ ಮಾಡಿದರೆ ಅದರಲ್ಲಿ ಸ್ವಲ್ಪ ಕಟುಂತರವಾಗಿದ್ದರೂ ಕೂಡ ಎಲ್ಲರಿಗೂ ಇಷ್ಟವಾಗಿರುತ್ತದೆ ಅದಕ್ಕೆ ಉತ್ತರವನು ಕೂಡ ಕೊಡಬಹುದು.

ಶ್ರೀ ಜೆ. ಎಚ್. ಪಟೇಲ್.—ಹಾಗಾದರೆ ಅವರು ಬೇಡ, ನಾನೇ ಹೇಳುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ.—ಮಾತು ಮಿತಿಯಲ್ಲಿರಬೇಕು. ಉದ್ದಕ್ಕೆ ಹೋದರೆ ಚೆನ್ನಾಗಿ ಇರುವುದಿಲ್ಲ. ಅವರಿಗೆ ಯಾವಾಗಲೂ ಷಹಬಾಸ್ ಗಿರಿಯನ್ನು ಕೊಡುತ್ತೇವೆ. Som times he speaks sportively and ntertains the House and also takes back sportively. ಈಗ ಏನಾಗುತ್ತದೆ ಎಂದರೆ ತಾವು ಹೇಳಬೇಕು. ನಾವು ಏನಾದರೂ ಹೇಳಿದರ ಎದ್ವತದ್ವ ತೊಂದರೆಯಾಗುತ್ತದೆ. ಮಾನ್ಯ ಜೆ. ಎಚ್. ಪಟೇಲರು ಇಂಟರಪ್ಷನ್ ಮಾಡಿದರ ಚೆನ್ನಾಗಿರುತ್ತದೆ.

ಶ್ರೀ ವಿ. ಎಸ್. ಆಚಾರ್ಯ.—ಈಗ ಪ್ರಶ್ನೆ ಏನೆಂದರೆ ಮೊಯಿಲಿಯವರ ವಿಚಾರ ಸರಣಿ ಈವತ್ತಿನ ದಿವಸ ಮಾತನಾಡುತ್ತಿರುವ ಧಾಟಿ ಬಗ್ಗೆ ಏನು ಆತಂಕವಿಲ್ಲ. ಹಿಂದೆ ಆರ್ಡರ್ ಮಾಡಿದ್ದು ನಿಮ್ಮ ಸರ್ಕಾರ.

ಶ್ರೀ ಎಂ. ವೀರಪ್ಪಮೊಯಿಲಿ.—ಆ ವಿಚಾರವನ್ನೂ ಹೇಳುತ್ತೇನೆ ಯಾವುದನ್ನೂ ಬಿಡುವುದಿಲ್ಲ. ಆದ್ದರಿಂದ ಈ ಬಿಲ್ಲಿನಲ್ಲಿ ಒಂದನೆಯದಾಗಿ ಟೈಟಲ್ ಏನೇನಿದೆ ಎಂಬುದರ ಬಗ್ಗೆ ನೋಡಿ ನಾನು ವಿವರ ನೀಡುತ್ತಿದ್ದೇನೆ. ಬಹುಶಃ ಜನರು ವಂಚನೆಯಲ್ಲಿ ಹೋಗುವಂತಾಗುತ್ತದೆ. ಪ್ರತಿಯೊಂದು ಸಬ್ಜೆಕ್ಟನ್ನು ಈವತ್ತು ನೋಡಬೇಕಾದಂಥ ಅವಶ್ಯಕತೆ ನಮಗೆ ಕಂಡು ಬಂದಿದೆ. ಏತಕ್ಕೆಂದರೆ ಕ್ಯಾಪಿಟೇಷನ್ ಫೀಸ್ ರದ್ದು ಮಾಡತಕ್ಕಂಥದ್ದು ಈ ಸರ್ಕಾರಕ್ಕೆ ಇಲ್ಲ. ಅದರ ಬದಲು ಕ್ಯಾಪಿಟೇಷನ್ ಪ್ರಾಹಿಬಿಷನ್ ಬಿಲ್ ಎಂದು ಈ ಮಸೂದೆಯಲ್ಲಿ ತಂದು ಅವರು ಕ್ಯಾಪಿಟೇಷನ್ ಫೀಸನ್ನು ವಸೂಲು ಮಾಡತಕ್ಕಂಥ ಖಾಸಗಿ ಸಂಸ್ಥೆಗಳಿಗೆ ಕಾಯಿದೆಯ ಮುಖಾಂತರ ಬೆಂಬಲಕೊಟ್ಟು ಬಿಟ್ಟಿರುತ್ತೀರಿ ಎನ್ನುವ ಆಪಾದನೆಯನ್ನು ಸರ್ಕಾರಕ್ಕೆ ಮಾಡಬೇಕಾಗಿದೆ. ಇಲ್ಲಿಯವರೆಗೂ ಕಾಯಿದೆಯ ಮುಖಾಂತರ ಬೆಂಬಲ ಇರಲಿಲ್ಲ. ಈಗ ಕಾಯಿದೆಯ ಮುಖಾಂತರ ಬೆಂಬಲವನ್ನು ಕೊಟ್ಟು ಈವತ್ತಿನ ದಿವಸ ಹಣವನ್ನು ರಾಜಾರೋಷವಾಗಿ ವಸೂಲು ಮಾಡಲು ತಂದಿರತಕ್ಕಂಥ ಈ ಬಿಲ್ಲನ್ನು ಏನೆಂದು ಹೇಳಬೇಕೆಂದರೆ ನಿಜವಾಗಿಯೂ ಪ್ರಾಹಿಬಿಷನ್ ಕ್ಯಾಪಿಟೇಷನ್ ಬಿಲ್ ೧೯೮೩ ಬದಲು ಇದನ್ನು ಕ್ಯಾಪಿಟೇಷನ್ ಫೀಸ್ ಲೈಸೆನ್ಸ್ ಬಿಲ್ ೧೯೮೩ ಎಂದು ಕರೆಯಬೇಕಾಗುತ್ತದೆ. ಈವತ್ತು ಮಾನ್ಯ ಅಧ್ಯಕ್ಷರೇ ಇದನ್ನು ಪ್ರಾರಂಭ ಮಾಡುವಾಗ ಬಹಳ ಚೆನ್ನಾಗಿ ಹೇಳಿದ್ದಾರೆ. ಅವರ ಮ್ಯಾನಿಫೆಸ್ಟೋದಲ್ಲಿ ರದ್ದು ಮಾಡುತ್ತೇವೆಂದು ಹೇಳಿ ಮಾತುಕೊಟ್ಟಿರುತ್ತಾರೆ. ಆನಂತರ ಸಾಕಷ್ಟು ಹೇಳಿಕೆಯೂ ಕೂಡ ಈ ಬಗ್ಗೆ ಬಂದಿದೆ. ಮಾನ್ಯ ಸಚಿವರಾದ ಆರೋಗ್ಯ ಸಚಿವರು, ಮಾನ್ಯ ಸಿಂಧ್ಯರವರು ಒಂದು ಹೇಳಿಕೆಯನ್ನು ಕೊಟ್ಟು ಹೇಳಿದ್ದಾರೆ. ಇದು ಏನೆಂದರೆ ನಾವು ಕ್ಯಾಪಿಟೇಷನ್ ಫೀಸನ್ನು ರದ್ದು ಮಾಡುತ್ತೇವೆ. ರದ್ದು ಮಾಡುವ ಬಗ್ಗೆ ಒಂದು ಸಮಿತಿಯನ್ನು ಕೂಡ ಮಾಡಿರುತ್ತೇವೆಂದು ಒಂದು ಹೇಳಿಕೆಯನ್ನು ಕೊಟ್ಟಿರು. ಆ ಹೇಳಿಕೆಯ ಪ್ರಕಾರ ಜೂನ್ ೧೧ನೇ ತಾರೀಖು ಸನ್‌ಮಾನ್ಯ ಪಿ. ಜಿ. ಆರ್. ಸಿಂಧ್ಯರವರ ಅಧ್ಯಕ್ಷತೆಯಲ್ಲಿ

ಕ್ಯಾಪಿಟೇಷನ್ ಫೀಸ್ ರದ್ದು ಮಾಡುವ ಬಗ್ಗೆ ರಾಜ್ಯ ಸರ್ಕಾರ ಒಂದು ಸಮಿತಿಯನ್ನು ಮಾಡಿತು. ಆ ಸಮಿತಿಯ ರೆಫರೆನ್ಸ್ ಏನೆಂದರೆ to recommend ways and means of abolishing the capitation fee in private medical colleges in a phased manner within the next five years. ಇದು ರೆಫರೆನ್ಸ್ ಈ ಸಮಿತಿಗೆ ೫ ವರ್ಷಗಳ ಒಳಗಡೆ ಕ್ಯಾಪಿಟೇಷನ್ ಶುಲ್ಕವನ್ನು ರದ್ದು ಮಾಡುವ ವಿಚಾರದಲ್ಲಿ ಅವರು ಮುಂದುವರೆದು ಸಲಹೆ ಕೊಡಬೇಕೆಂದು ಆ ಸಮಿತಿಯು ರಚನೆಯಾಯಿತು. ಬಹಳ ಸಂತೋಷ ಒಳ್ಳೆಯ ಸಮಿತಿಯನ್ನು ಮಾಡಿದ್ದೀರಿ. ಆ ಸಮಿತಿಯಲ್ಲಿ ಕರ್ನಾಟಕ ಯೂನಿವರ್ಸಿಟಿ ಉಪಕುಲಪತಿಗಳಾದಂಥ ಡಾ. ಎಂ. ಸಂಜುಂಡಪ್ಪ, ಗುಲ್ಬರ್ಗಾ ಯೂನಿವರ್ಸಿಟಿಯ ಉಪಕುಲಪತಿಗಳಾದ ಮಾನ್ಯ ಎಂ. ನಾಗರಾಜ್. ಮಂಗಳೂರು ಯೂನಿವರ್ಸಿಟಿ ಉಪಕುಲಪತಿಗಳಾದ ಮಾನ್ಯ ಪ್ರೊಫೇಸರ್ ಶೇಕ್ ಆಲಿ, ಡಾ. ಚೆಲುವರಾಜ್, ಪೊಲಿಟಿಕಲ್ ಸೈನ್ಸ್, ಬೆಂಗಳೂರು ಯೂನಿವರ್ಸಿಟಿ, ಮತ್ತು ಡೈರೆಕ್ಟರ್ ಆಫ್ ಮೆಡಿಕಲ್ ಎಜ್ಯುಕೇಷನ್ ಅಂಡ್ ಹೆಲ್ತ್ ಸೆಕ್ರೆಟರಿ, ಒಳಗೊಂಡಂಥ ಒಂದು ಸಮಿತಿಯನ್ನು ಜೂನ್ ಹತ್ತರಲ್ಲಿ ಮಾಡಿದರು. ಆ ಸಮಿತಿಯ ಅಧ್ಯಕ್ಷರಾದ ಪಿ. ಜಿ. ಆರ್. ಸಿಂಧ್ಯರವರು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಅದನ್ನು ಈ ಸದನದ ಗಮನಕ್ಕೆ ತರಬಯಸುತ್ತೇನೆ. ಅದರಲ್ಲಿ ಏನು ಇದೆ ಎಂದರೆ.

೨-೦೦ ಪಿ. ಎಂ.

ಖಾಸಗಿಯಾಗಿ ಈ ಕಾಲೇಜುಗಳನ್ನು ನಡೆಸಲು ೪೫ ರಿಂದ ೬೦ ಲಕ್ಷ ರೂಪಾಯಿಗಳು ವಾರ್ಷಿಕವಾಗಿ ರೆಕರಿಂಗ್ ಖರ್ಚು ಬರುತ್ತದೆಂದು ಈ ಕಾಲೇಜುಗಳ ಪ್ರತಿನಿಧಿಗಳು ಹೇಳಿರುವುದರಿಂದ ಈ ಕ್ಯಾಪಿಟೇಷನ್ ಶುಲ್ಕವನ್ನು ಒಂದೇ ಸಲ ರದ್ದು ಮಾಡಲು ಇರುವಂತಹ ಅನಾನುಕೂಲತೆಯ ಬಗ್ಗೆ ಮಾನ್ಯ ಸಚಿವರು ಹೇಳಿದ್ದಾರೆ. ಈ ವಿಚಾರದಲ್ಲಿ ಮಾನ್ಯ ಆರೋಗ್ಯ ಸಚಿವರು ಈ ರೀತಿಯಲ್ಲಿ ಹೇಳಿಕೆ ಕೊಟ್ಟಿದ್ದಾರೆ.—

> 'He said that the Government wishes to discontinue the present "Government discretionary quota in private medical colleges from this year" He said that though the financial burden would be the biggest problem in abolishing the capitation fee, Government was committed to abolish it within five years.'

ಮಾನ್ಯ ಆರೋಗ್ಯ ಸಚಿವರ ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದ ಸಮಿತಿಯು ತನ್ನ ವರದಿಯನ್ನು ಸರ್ಕಾರಕ್ಕೆ ಕೊಟ್ಟಿದೆ ಎಂದು ಪತ್ರಿಕೆಗಳ ಮೂಲಕ ನಮಗೆ ತಿಳಿದುಬಂದಿದೆ, ಕ್ಯಾಪಿಟೇಷನ್ ಫೀಯನ್ನು ರದ್ದು ಮಾಡಬೇಕೆಂದು ಅವರು ತಮ್ಮ ವರದಿಯಲ್ಲಿ ಈ ಕ್ಯಾಪಿಟೇಷನ್ ಫೀಯನ್ನು ಸಂಪೂರ್ಣವಾಗಿ ಒಂದೇ ಸಲ ರದ್ದು ಮಾಡಬೇಕೆಂದು ಹೇಳಿದ್ದಾರೆಂದು ವರದಿ ಬಂದಿದೆ. ಈ ಬಗ್ಗೆ ಈ ಸಮಿತಿಯವರು ಒಂದು ಕ್ರಾಂತಿಕಾರಕವಾದಂಥ ನಿರ್ಣಯವನ್ನು ತೆಗೆದುಕೊಂಡಿದ್ದಾರೆ. ಈ ಸಮಿತಿ ರಚನೆಯಾದ ಒಂದೆರಡು ವಾರಗಳಲ್ಲಿಯೇ ತಮ್ಮ ವರದಿಯನ್ನು ಕೊಟ್ಟರು. ಮ್ಯಾನೇಜ್‌ಮೆಂಟ್ ಕೋಟಾದಲ್ಲಿ ಕೂಡ ೫೦ ಪರ್ಸೆಂಟ್ ಕಡಿತ ಮಾಡಲಾಗಿದೆ ಎಂದು ಸಹ ಅದರಲ್ಲಿ ಹೇಳಿದ್ದಾರೆ.

> 'The Committee also recommended abolition of the Government discretionary quota in the allotment of seats and a drastic cut in the management quota of seats. He also said the Committee also recommended selection of candidates to medical colleges through conducting an entrance examinations. The Committee had favoured greater, hold for the Government on the private medical colleges."

ಆದ್ದರಿಂದ ಫೀಯನ್ನು ಜಾಸ್ತಿ ಮಾಡಬೇಕೆಂದು ಅವರು ತಮ್ಮ ವರದಿಯಲ್ಲಿ ಹೇಳಿದ್ದಾರೆ. ಕ್ಯಾಪಿಟೇಷನ್ ಶುಲ್ಕವನ್ನು ರದ್ದು ಮಾಡಬೇಕೆಂದು ಈ ಸಮಿತಿಯವರು ಶಿಫಾರಸ್ ಮಾಡಿದ್ದರಿಂದ ಅದು ರದ್ದಾಗುತ್ತದೆಂಬ ಅಭಿಪ್ರಾಯ ನಮಗೆಲ್ಲಾ ಬಂತು. ಇದಕ್ಕೆ ಸಾರ್ವತ್ರಿಕವಾದಂಥ ಮೆಚ್ಚುಗೆ ಕೂಡ ವ್ಯಕ್ತವಾಯಿತು. ಈ ಸಮಿತಿಯಲ್ಲಿ ವೈಸ್-ಛಾನ್ಸ್‌ಲರ್ಸ್, ಪ್ರೊಫೆಸರ್ಸ್ ಮೊದಲಾದಂಥ ತಜ್ಞರು ಇದ್ದರು. ಇಂತಹ ಒಂದು ಸಮಿತಿಯವರು ಕೊಟ್ಟಂತಹ ವರದಿಗೆ ಸರ್ಕಾರ ಮನ್ನಣೆ ಕೊಡಬೇಕಾಗಿತ್ತು. ಮಾನ್ಯ ಲಕ್ಷ್ಮೀಸಾಗರ್ ಅವರು ಈ ಕಡೆ ಇದ್ದಾಗ ಅವರಿಗೆ ತಜ್ಞರ ವರದಿಗಳು ಸ್ಯಾಕ್ರೊಸೆಂಟ್ ಆಗಿದ್ದವು. ಇಂತಹ ವರದಿಗಳಿಗೆ ಅವರು ಈ ಮೊದಲು ಬಹಳಷ್ಟು ಮನ್ನಣೆ ಹಾಗೂ ಗೌರವ ಕೊಡುತ್ತಿದ್ದರು. ಆದರೆ ಈಗ ಮಾತ್ರ ಈ ವರದಿ ಬಗ್ಗೆ ಬೇಂಕಿ ತರಹದ ಅಭಿಪ್ರಾಯವನ್ನು ಹೊಂದಿದ್ದಾರೆ. ತಜ್ಞರ ಅಭಿಪ್ರಾಯಕ್ಕೆ ಮನ್ನಣೆ ಕೊಡಬೇಕೆಂದೇ ಥಿಂಕ್-ಟ್ಯಾಂಕ್ ಹಾಗೂ ಎಕನಾಮಿಕ್, ಪ್ಲಾನಿಂಗ್ ಕೌನ್ಸಿಲ್‌ನ್ನು ರಚನೆ ಮಾಡಿದ್ದಾರೆ. ತಜ್ಞರ ಅಭಿಪ್ರಾಯಗಳ ಬಗ್ಗೆ ಬಹಳಷ್ಟು ಮಾತನಾಡುವ ತಾವು ಅವರು ಕೊಡುವಂತಹ ವರದಿಗಳಿಗೆ ಸಾಕಷ್ಟು ಮನ್ನಣೆ ಹಾಗೂ ಮೌಲ್ಯವನ್ನು ಕೊಡಬೇಕಾಗುತ್ತದೆ. ಈ ರೀತಿ ಮಾಡದೆ ತಮಗೆ ಅನುಕೂಲವಾದಾಗ ತಜ್ಞರ ವರದಿಗಳಿಗೆ ಮನ್ನಣೆ ಕೊಡುವುದು, ತಮಗೆ ಅನುಕೂಲವಾಗದಿದ್ದಾಗ ಆ ವರದಿಗಳನ್ನು ತಳ್ಳಿ ಹಾಕುವ ತಮ್ಮ ವ್ಯವಹಾರ ಏನಿದೆ, ಇದು ಒಂದು ತರಹ ಅಪ್ರಮಾಣಿಕತನವಾಗುತ್ತದೆ. ತಮಗೆ ಅನುಕೂಲವಾಗಿದೆ ಎಂದು ಥಿಂಕ್-ಟ್ಯಾಂಕ್‌ನ್ನು ಮುಂದುವರಿಸಿದ್ದೀರಿ. ತಮ್ಮ ಒಂದು ಪಾದದಲ್ಲಿ ದ್ವಂದ್ವ ನೀತಿ ಇರಬಾರದು, ಮುಖ್ಯವಾಗಿ ತಮ್ಮ ಮಾತಿಗೂ ಮತ್ತು ಕೃತಿಗೂ ಇಷ್ಟೊಂದು ಅಂತರವಿರಬಾರದು.

ಶ್ರೀ ಎ. ಲಕ್ಷ್ಮೀಸಾಗರ್.—ತಜ್ಞರು ಕೊಡುವ ವರದಿಗಳನ್ನು ಮತ್ತು ಅವರು ಕೊಡುವಂತಹ ಅಭಿಪ್ರಾಯಗಳನ್ನು ಗಣನೆಗೆ ತೆಗೆದುಕೊಳ್ಳುವಾಗ ಅದರಲ್ಲಿ ಯೋಗ್ಯವಾದುದು ಏನಿದೆ ಎಂಬುದನ್ನು ತೂಕ ಮಾಡಿ ನೋಡಬೇಕಾಗುತ್ತದೆ ಮತ್ತು ಅದರ ಸಾಧಕಬಾಧಕಗಳನ್ನು ಯೋಚನೆ ಮಾಡಬೇಕಾಗುತ್ತದೆ. ಆದ್ದರಿಂದ ತಮ್ಮ ಮಾತಿಗೆ ಏನೂ ಬೆಲೆ ಇಲ್ಲ.

ಶ್ರೀ ಎಂ. ವೀರಪ್ಪಮೊಯ್ಲಿ.—ತಾವು ತಮ್ಮ ಮಾತಿಗೇ ಬೆಲೆ ಕೊಡದಿದ್ದರೆ ಕೃತಿಗೆ ಮನ್ನಣೆ ಕೊಡುವ ವಿಚಾರ ಬರುವುದೇ ಇಲ್ಲ. ತಾವು ತಮ್ಮ ಮಾತಿಗೆ ಮತ್ತು ಕೃತಿಗೆ ಬೆಲೆ ಕೊಡದೆ ತಟಸ್ಥ ಧೋರಣೆಯನ್ನು ಇಟ್ಟುಕೊಂಡಿದ್ದೀರಿ.

ಶ್ರೀ ಜೆ.ಎಚ್. ಪಟೇಲ್.—ನಾವು ತಜ್ಞರನ್ನು ಕೇಳಿ ಮಾಡುತ್ತಿದ್ದೇವೆ. ಆದರೆ ತಮ್ಮ ಕಾಲದಲ್ಲಿ ತಜ್ಞರನ್ನು ಕೇಳದೆ ಮಾಡುತ್ತಿದ್ದಿರಿ.

ಶ್ರೀ ಎಂ. ವೀರಪ್ಪಮೊಯ್ಲಿ.—ಇಲ್ಲಿ ತಜ್ಞರ ಸಮಿತಿಯಿಂದ ವರದಿ ಬಂದ ನಂತರ ಅದನ್ನು ಪರಿಶೀಲಿಸಲು ಪುನಃ ಒಂದು ಕ್ಯಾಬಿನೆಟ್ ಸಬ್-ಕಮಿಟಿಯನ್ನು ರಚನೆ ಮಾಡಿದರು. ವಿದ್ಯಾಸಚಿವರ ಅಧ್ಯಕ್ಷತೆಯಲ್ಲಿ ರಚನೆಯಾದ ಸಬ್-ಕಮಿಟಿಯವರು ಕೊಟ್ಟ ವರದಿಯ ಮೇಲೆ ಎರಡು ದಿವಸಗಳ ಕಾಲ ಕ್ಯಾಬಿನೆಟ್‌ನಲ್ಲಿ ಚರ್ಚೆಯಾಯಿತೆಂದು ಕೇಳಿದ್ದೇನೆ. ಇದು ಸರಿ ಇದ್ದರೂ ಇರಬಹುದು. ತಪ್ಪು ಇದ್ದರೂ ಇರಬಹುದು. ನಾನು ಹೇಳಿದ್ದು ತಪ್ಪಾಗಿದ್ದರೆ ತಿದ್ದಿಕೊಳ್ಳುತ್ತೇನೆ.

ಶ್ರೀ ಕೆ. ಎಚ್. ರಂಗನಾಥ್.—ಚರ್ಚೆಯಾಯಿತಂತೆ ಎಂದು ಹೇಳಿ.

ಶ್ರೀ ಜೆ.ಎಚ್. ಪಟೇಲ್.—ಇದು ಬಹಳ ಮುಖ್ಯವಾದ ವಿಷಯವಾದ್ದರಿಂದ ಎರಡು ದಿವಸಗಳ ಕಾಲ ಚರ್ಚೆ ಆಯಿತು.

ಶ್ರೀ ಎಂ. ವೀರಪ್ಪ ಮೊಯ್ಲಿ.—ತಜ್ಞರು ಕೊಟ್ಟ ವರದಿಗೆ ತಾವು ಪ್ರಾಮಾಣಿಕವಾಗಿಯೂ ಬೆಲೆ ಕೊಟ್ಟಿದ್ದರೆ ಅದನ್ನು ಈ ಸದನಕ್ಕೆ ಒಪ್ಪಿಸಿ. ನಾವು ಕ್ಯಾಬಿನೆಟ್ ಸಬ್-ಕಮಿಟಿ ವರದಿಯನ್ನು ಕೇಳುತ್ತಿಲ್ಲ. ತಜ್ಞರ ವರದಿಯನ್ನು ಕೇಳುತ್ತಿದ್ದೇವೆ. ಇದನ್ನು ತಾವು ಸಾರ್ವಜನಿಕರ ಮತ್ತು ನಮ್ಮ ಗಮನಕ್ಕೆ ತರಬೇಕಾಗುತ್ತದೆ. ತಾವು ತಜ್ಞರ ಸಮಿತಿ ವರದಿಗೆ ಎಷ್ಟು ಪರ್ಸೆಂಟ್ ಬೆಲೆ ಕೊಟ್ಟಿದ್ದೀರಿ ಎಂಬುದು ಇದನ್ನು ನಾವು ನೋಡಿದ ನಂತರ ತಿಳಿಯುತ್ತದೆ. ಅದಕ್ಕೆ ಎಷ್ಟು ಕಾಸಿನ ಬೆಲೆ ಕೊಟ್ಟಿದ್ದೀರಿ ಎಂಬುದು ತಜ್ಞರ ವರದಿಯನ್ನು ನೋಡದೆ ಹೇಳುವುದಕ್ಕಾಗುವುದಿಲ್ಲ. ಈಗ ಏನಿದ್ದರೂ ತಾವು ಹೇಳಿದ್ದನ್ನು ನಂಬಬೇಕಾಗುತ್ತದೆ. ಕ್ಯಾಬಿನೆಟ್ ಸಬ್-ಕಮಿಟಿಯವರು ಕೊಟ್ಟ ವರದಿ ಕೂಡ ಬದಲಾವಣೆ ಆಗಿದೆಯೋ ಏನೋ ಗೊತ್ತಿಲ್ಲ. ಎರಡು ದಿವಸಗಳ ಕಾಲ ಕ್ಯಾಬಿನೆಟ್‌ನಲ್ಲಿ ಈ ಬಗ್ಗೆ ಏನು ಚರ್ಚೆ ಮಾಡಿದರೆಂಬುದು ನಮಗೆ ಗೊತ್ತಿಲ್ಲ. ಈ ಒಂದು ಸಮಸ್ಯೆಯನ್ನು ಹಾಗೂ ಈ ಒಂದು ಪಿಡುಗನ್ನು

ಹೋಗಲಾಡಿಸಬೇಕಾದರೆ ಅದಕ್ಕೆ ಎವಿಡೆನ್ಸ್ ಬೇಕಾಗುತ್ತದೆ. ಆದ್ದರಿಂದ ತಜ್ಞರ ವರದಿ ನಮಗೆ ಬೇಕಾಗುತ್ತದೆ. ಈ ಒಂದು ಬಿಲ್‌ನ್ನು ಇಲ್ಲಿ ಏನು ಮಂಡಿಸಿದ್ದಾರೆ. ಇದನ್ನು ನೋಡಿದ ನಂತರ ಇದೊಂದು ಈ ಸರ್ಕಾರದ ಮತ್ತು ಈ ಪಕ್ಷದ ಅಪ್ರಮಾಣಿಕದ ಪರಾಕಾಷ್ಠೆಯಿಂದ ಕೂಡಿದ ಬಿಲ್ ಎಂದು ಕಾಣುತ್ತದೆ. ಇದರಲ್ಲಿರುವ ನಿಮ್ಮ ಉದ್ದೇಶ ಸರಿಯಾಗಿ ಕಾಣುತ್ತಿಲ್ಲ. ಇದರಲ್ಲಿರುವಂತಹ ಸದುದ್ದೇಶ ಏನೆಂಬುದು ನಮಗೆ ಕಾಣುತ್ತಿಲ್ಲ. ಪ್ರಗತಿಪರವಾದಂಥ ಧೋರಣೆ ಏನೂ ಇದರಲ್ಲಿ ಕಾಣುತ್ತಿಲ್ಲ. ಕ್ಯಾಪಿಟೇಷನ್ ಫೀಯನ್ನು ರದ್ದು ಮಾಡಿದ್ದೀರಿ ಎಂಬುದು ಇದರಲ್ಲಿ ಕಾಣುತ್ತಿಲ್ಲ ತಾವು ಈ ಒಂದು ಪಿಡುಗಿನ ವಿಷವರ್ತುಲದಲ್ಲಿ ಸಿಕ್ಕಿಕೊಂಡು ತೊಳಲಾಡುತ್ತಿದ್ದೀರಿ.

ತಜ್ಞರನ್ನು ನೇಮಕ ಮಾಡಿದ ಮೇಲೆ ತಜ್ಞರ ವರದಿ ಬರಲಿ, ಅವರು ಏನು ವರದಿ ಕೊಟ್ಟಿದ್ದಾರೆ ಅದನ್ನು ತರಿಸಿ ಕ್ಯಾಬಿನೆಟ್ ಮುಂದೆ ಇಟ್ಟು ನೀವೇ ಮಾಡಿದಹಾಗೆ ಮಾಡಿದರೆ ಅದನ್ನು ನಂಬೋಣ. ಇದರಲ್ಲಿ ಸದುದ್ದೇಶವಿದೆ, ನಂಬುವುದಕ್ಕೆ ಸಾಧ್ಯವಾಗಿಲ್ಲ ಇದರಲ್ಲಿ ಏನಾಗಿದೆ ಅಂದರೆ ನಮಗೆ ಕೊಟ್ಟಂತಹ ಲೆಕ್ಕದ ಪ್ರಕಾರ ನಾನು ಲೆಕ್ಕ ಹಾಕಿದ್ದೇನೆ. ಈ ಆರ್ಡರ್ ಪ್ರಕಾರ ೭೦ ಸೀಟುಗಳನ್ನು ಹೊರಗಡೆಯವರಿಗೆ ಕೊಡುವುದು ಎಂದು ಇದೆ. ಒಟ್ಟು ೪೯೦ ಸೀಟುಗಳು ಹೋಗುತ್ತವೆ. ಖಾಸಗಿ ಸಂಸ್ಥೆಗಳಿಂದ ಕರ್ನಾಟಕದವರಿಗೆ ೫೦ ಸಾವಿರ ರೂಪಾಯಿ ಡೊನೇಷನ್ ತೆಗೆದುಕೊಂಡು ಸೀಟು ಕೊಡುವುದನ್ನು ಸೇರಿಸಿಕೊಂಡರೆ ೩೪೧ ಸೀಟುಗಳು ಬರುತ್ತವೆ. ಕರ್ನಾಟಕದವರಿಗೆ ಒಟ್ಟು ೩೪೧ ಸೀಟುಗಳು ಸಿಗತಕ್ಕದ್ದು ಇದೆ. Government seat is 271 I am subject to correction. ನಾನು ಓದಿ ಹೇಳುತ್ತೇನೆ. You can always correct the figures. This is the figures that I have collected. ಕ್ಯಾಪಿಟೇಶನ್ ಫೀ ೫೦ ಸಾವಿರ ರೂಪಾಯಿಗಳನ್ನು ಕೊಟ್ಟರೆ ಒಟ್ಟು ೭ ಕಾಲೇಜುಗಳಿಂದ ತಲಾ ೧೦ರಂತೆ ೭೦ ಸೀಟುಗಳು ಬರುತ್ತವೆ.

Government seats.-- 271.

i. e.,	J. N. Medical College	52
	J. J. Medical College Davanagere.	60
	Gulbarga Medical College	52
	Kasturba Medical College Bangalore Section	52
	M. S Ramaiah Medical College	15
	Kempegowda Medical College	15
	Dr. Ambedkar Medical College	15
	Total	271

ಕಸ್ತೂರ್‌ಬಾ ಮೆಡಿಕಲ್ ಕಾಲೇಜು ಮಣಿಪಾಲ್ ಇವರದ್ದು ೧೦೦ ಸೀಟುಗಳನ್ನು ಬಿಟ್ಟು ಬಿಟ್ಟಿದ್ದಾರೆ. ಮಣಿಪಾಲ್ ಕೂಡ ನಮ್ಮ ರಾಜ್ಯದಲ್ಲೇ ಇದೆ, ಅದನ್ನು ಫ್ರೀ ಬಿಟ್ಟುಬಿಟ್ಟಿದ್ದಾರೆ. ೭೦ ಸೀಟುಗಳು ಹೊರಗಡೆಯವರಿಗೆ ಹೋಗುತ್ತವೆ, ಕರ್ನಾಟಕದವರಿಗೆ ಸಿಗುವುದಿಲ್ಲ. ಡೊನೇಷನ್ ಕೊಡುವ ಸೀಟು ಗರ್ನಮೆಂಟ್ ಸೀಟು ಇವುಗಳನ್ನು ಬಿಟ್ಟು, ಮಣಿಪಾಲ್‌ದು, ಬಿಟ್ಟು ಖಾಸಗೀ ಕಾಲೇಜುಗಳಿಂದ ಹೆಚ್ಚು ಸೀಟುಗಳನ್ನು ಹೊರಗಿನವರಿಗೆ ಹೋಗುತ್ತವೆ. ಕರ್ನಾಟಕದವರಿಗೆ ಬರತಕ್ಕ ಸೀಟುಗಳು ಬಹಳ ಕಡಿಮೆಯಾಯಿತು ಹಿಂದಿನ ಸರ್ಕಾರ ಮಾಡಿದ ಪಟ್ಟಿಗೂ ಇದಕ್ಕೂ ಹೋಲಿಕೆ ಮಾಡಿದರೆ, ದಿನಾಂಕ ೨೯-೮-೧೯೮೧ರಂದು ಹೊರಡಿಸಿದ ಆರ್ಡರ್ ಈ ರೀತಿ ಇದೆ. ಅದರ ಪ್ರಕಾರ ನಾಲ್ಕು ಮೆಡಿಕಲ್ ಕಾಲೇಜುಗಳಾದ Gulbarga. Davangere, Belgaum and Mangalo e Section Manipal Kasturba Medical College....... ಅದು ೧೯೮೨-೮೩ರ ಸಾಲಿನಲ್ಲಿ ೭೫ ಮಾತ್ರ ತೆಗೆದುಕೊಳ್ಳುತ್ತಾರೆ. ೭೫ ಎಂದು ಹೇಳಿದರೆ ಸಮಾರು ೩೮೦ ಸೀಟುಗಳು ಫ್ರೀ ಸೀಟುಗಳು. ಆದರೆ ನೀವು ಮಾಡಿರುವ ಪ್ರಕಾರ ಬಹಳ ಕಡಿಮೆ. ಹಿಂದೆ ಕರ್ನಾಟಕದವರಿಗೆ ಸೇರತಕ್ಕ ಸೀಟುಗಳು ೩೮೦, No. of free seats to be allotted by the Selection Committee consti-

tuted *i. e.*, 1982–83. ಅವರು ಯಾರಿಗಾದರೂ ಕೊಡಬಹುದು, ಕರ್ನಾಟಕದವರಿಗೆ ಮೊದಲು ಕೊಟ್ಟು, ಆಮೇಲೆ ಹೊರಗಿನವರಿಗೆ ಕೊಡಬಹುದು. No. of seats to be allotted by a Committee constituted by the Government to the Karnataka Students on payment of a special tuitionn fees of Rs. 60,000 ಸೀಟುಗಳ ಪ್ರಕಾರ ಳ ಕಾಲೇಜುಗಳಿಂಗ ಸೀಟು ಬಂತು. ಒಟ್ಟು ಕರ್ನಾಟಕಕ್ಕೆ ಹಿಂದಿನ ಆರ್ಡರ್ ಪ್ರಕಾರ ೫೦೬ ಸೀಟುಗಳು. ಹೊರಗಿನವರಿಗೆ ಕೊಟ್ಟಿದ್ದು ..೦ ಸೀಟುಗಳು. ಅದರಲ್ಲಿ ಗೌರ್ನ್‌ಮೆಂಟ್ ಕೋಟಾ ೭೨ ಸೀಟುಗಳು ಕರ್ನಾಟಕದವರಿಗೆ ಕ್ಯಾಪಿಟೇಷನ್ ಫೀ ಇಲ್ಲದೇ ಸೀಟುಗಳು ಸಿಕ್ಕಿದೆ. ಕರ್ನಾಟಕದವರು ಯಾವ ಫೀಸು ಕೊಡುವಹಾಗೆ ಇಲ್ಲ.

ಒಬ್ಬ ಮಾನ್ಯ ಸದಸ್ಯರು.— ಸ್ವಾಮಿ ಮಂತ್ರಿಗಳೇ ಇಲ್ಲಾ.

ಶ್ರೀ ಎ. ಲಕ್ಷ್ಮೀಸಾಗರ್.— ನಾನು ಇಲ್ಲೇ ದೆವ್ವ ಕೂತ ಹಾಗೆ ಕುಳಿತಿದ್ದೇನೆ.

ಶ್ರೀ ಎಂ. ವೀರಪ್ಪಮೊಯಿಲಿ.— ದೇವರು ಕೂತಹಾಗೆ ಕುಳಿತುಕೊಳ್ಳಿ, ದೆವ್ವ ಆಗಬೇಡಿ. ನಮ್ಮ ಆರ್ಡರನ್ನು ಇದಕ್ಕೆ ಹೋಲಿಕೆ ಮಾಡಿ ನೋಡಿದಾಗ ಅಜಗಜಾಂತರವಿದೆ. ನಾವು ೫೦೬ ಸೀಟುಗಳನ್ನು ಕರ್ನಾಟಕದವರಿಗೆ ಕೊಟ್ಟಿದ್ದೇವೆ. ೧೧೦ ಸೀಟುಗಳನ್ನು ಹೊರಗಿನವರಿಗೆ ಕೊಟ್ಟಿದ್ದೇವೆ. ಹೊರರಾಜ್ಯ ದವರಿಗೆ ಕೊಡಬಹುದು ಪರದೇಶದವರಿಗೆ ಕೊಡಬೇಕೆಂದು ನಮ್ಮ ದೃಷ್ಟಿಯಲ್ಲಿರಲಿಲ್ಲ. This is what we have said "Number of seats to be allotted by a committee constituted by the Government on payment of special tuition fees of Rs. 1.60 lakhs" ಕೊಟ್ಟರೆ ಅವರಿಗೆ ಕೊಡಬೇಕಾಗಿತ್ತು. ತಾವು ಹಾಗೆ ಮಾಡಿಲ್ಲ.

ತಾವು ಹೊರ ದೇಶಗಳಿಗೆ ಎಂದು ಸ್ಪಷ್ಟವಾಗಿ ಕಾಣಿಸುವಂತೆ ವ್ಯವಸ್ಥೆ ಮಾಡಿಕೊಟ್ಟಿದ್ದೀರಿ. ಅವರಿಗೆ ನೀವು ಫ್ರೀ ಲೈಸೆನ್ಸ್ ಕೊಟ್ಟಿದ್ದೀರಿ. ತಾವು ತಂದಿರುವಂತಹ ಧೋರಣೆಯಲ್ಲಿ ಪ್ರಗತಿಪರ ವಾದಂಥ ಅಂಶಗಳು ನಮಗೆ ಎಲ್ಲಿಯೂ ಸಹ ಎದ್ದು ಕಾಣುತ್ತಿಲ್ಲ. ಇದಕ್ಕೆ ಮಾನ್ಯ ಮಂತ್ರಿಗಳು ಸಮರ್ಪಕವಾದಂಥ ಉತ್ತರವನ್ನು ಕೊಡಬೇಕು. ನಾನು ಇದನ್ನು ಪ್ರಗತಿಪರವಾದಂಥ ಧೋರಣೆ ಯೆಂದು ಹೇಳುವುದಕ್ಕೆ ಇಷ್ಟಪಡುವುದಿಲ್ಲ ಮಾನ್ಯ ಅಧ್ಯಕ್ಷರೇ ಇವರು ಮತ್ತೊಂದು ಕೆಲಸ ಏನು ಮಾಡಿದ್ದಾರೆ ಎಂದರೆ ಮಣಿಪಾಲ್‌ನವರಿಗೆ ಎಷ್ಟು ಸೀಟುಗಳು ಎಂದು ನಿಗದಿ ಮಾಡಿಕೊಟ್ಟಿಲ್ಲ. ಅವರು ಎಷ್ಟು ಬೇಕಾದರೂ ಇಟ್ಟುಕೊಳ್ಳಬಹುದು. ಎಲ್ಲಾ ಹಕ್ಕು ಸಹ ಅವರಿಗೆ ಬಿಟ್ಟು ಕೊಟ್ಟಿದ್ದಾರೆ. ಮಣಿಪಾಲ್‌ನವರು ಏನು ಬೆದರಿಕೆ ಹಾಕಿದ್ದಾರೋ ನನಗಂತೂ ಗೊತ್ತಿಲ್ಲ. ಉದಾಹರಣೆಗೆ ನಾನು ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳುವುದಾದರೆ ಉದಯವಾಣಿ ಪತ್ರಿಕೆಯಲ್ಲಿ ನನ್ನ ಹೇಳಿಕೆ ಕೊಟ್ಟಿ ದ್ದರೆ ಆ ಹೇಳಿಕೆಯನ್ನು ಪ್ರಕಟಿಸದೆ ತಡೆದಿದ್ದಾರೆ. ಆದರೆ ಕಾರಣವೇನೋ ನನಗಂತೂ ಗೊತ್ತಾಗಿಲ್ಲ ಆದರೆ ನಾವು ಯಾರಿಗೂ ಕೂಡ ಹೆದರುವುದಿಲ್ಲ. ಇಂಥ ಪಟ್ಟಭದ್ರ ಹಿತಾಸಕ್ತಿಗಳಿಗೆ ಹೆದರತಕ್ಕಂಥ ಜನ ನಾವಲ್ಲ. ನಾವು ಏನೇ ಬಂದರೂ ಕೂಡ ಒಂದು ರಾಜಕೀಯ ಸಿದ್ಧಾಂತದಲ್ಲಿಯೇ ಇದ್ದು ಪ್ರಾಣ ಬಿಡು ವಂಥ ಜನ. ಆದರೆ ಬಲವಂತದಿಂದ ಬಂಧನ ಮಾಡುವುದು ಬೇಡ. ಕ್ಯಾಪಿಟೇಷನ್ ಫೀ ಬಗ್ಗೆ ವಾದ ಮಾಡಿದರೆ ಅದು ಪತ್ರಿಕೆಗಳಲ್ಲಿ. ಇದರೆ ಆ ರೀತಿ ಎಲ್ಲಾ ಪತ್ರಿಕೆಗಳು ಮಾಡುತ್ತಿವೆ ಎಂದು ನಾನು ಹೇಳು ವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.— ಹಿಂದೆ ನಿಮ್ಮ ಸರ್ಕಾರವಿದ್ದಾಗ ಮಣಿಪಾಲ್‌ನವರಿಗೆ ಈ ಹಕ್ಕು ಕೊಟ್ಟಿರಲಿಲ್ಲವೇ ?

ಶ್ರೀ ಎಂ. ವೀರಪ್ಪಮೊಯ್ಲಿ.—ಮಣಿಪಾಲ್‌ನವರಿಗೆ ನಾವು ಯಾವತ್ತೂ ಕೂಡ ಇಂಥ ಹಕ್ಕು ಕೊಟ್ಟಿರಲಿಲ್ಲ. ಆದರೆ ಈ ಸರ್ಕಾರದವರು ಪೂರ್ತಿಯಾಗಿ ಎಗ್ಸೆಂಪ್ಷನ್ ಕೊಟ್ಟಿದ್ದಾರೆ. ಆದರೆ ನಾನು ಪತ್ರಿಕೆಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಯಾರ ಒಂದು ಬಲವಂತ ಬಂಧನಕ್ಕೆ ನಾನು ಹೆದರುವುದಿಲ್ಲ, ಮತ್ತು ಜಗ್ಗುವುದೂ ಕೂಡ ಇಲ್ಲ.

ಶ್ರೀ ಎಂ. ಎಸ್. ಕೃಷ್ಣನ್.— ಶ್ರೀಮಾನ್ ಸಿದ್ಧವೀರಪ್ಪನಂತಹವರು ಮಾತ್ರ ಜಗ್ಗಲಿಲ್ಲ.

ಶ್ರೀ ಎಂ. ವೀರಪ್ಪಮೊಯ್ಲಿ.— ಬೇರೆಯವರು ಕೂಡ ಜಗ್ಗುವುದಿಲ್ಲ. ಪಟ್ಟಭದ್ರ ಹಿತಾಸಕ್ತಿ ಗಳಿಗೆ ನಾವು ಯಾವಾಗಲೂ ಜಗ್ಗುವುದಿಲ್ಲ. ಈ ಸಮಾಜದಲ್ಲಿ...

ಶ್ರೀ ಜೆ. ಹೆಚ್. ಪಟೇಲ್.—ಅದು ನಿಹುಮ್ಮರ ಸುದ್ದಿ ನಮಗೇತಕ್ಕೆ ಬೇಕು ?

ಶ್ರೀ ಎಂ. ವೀರಪ್ಪಮೊಯ್ಲಿ.—ಆದರೆ ತಾವು ಮಣಿಪಾಲ್‌ನವರಿಗೆ ಏತಕ್ಕೆ ಹೆದರಿಕೊಂಡಿದ್ದೀರಿ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಅವರಿಗೆ ಪೂರ್ತಿ ಎಲ್ಲಾ ಹಕ್ಕನ್ನು ಕೊಟ್ಟುಬಿಟ್ಟಿದ್ದೀರಿ. ದಿನಾಂಕ ೭ನೇ ಸೆಪ್ಟೆಂಬರ್ ೮೨ರಲ್ಲಿ ಮಣಿಪಾಲ್ ಕಾಲೇಜ್‌ನವರಿಗೆ ಮೆಡಿಕಲ್ ಸೀಟ್ಸ್ ಬಗ್ಗೆ ಮತ್ತು ಕ್ಯಾಪಿಟೇಷನ್ ಫೀ ವಸೂಲು ಮಾಡುವ ಬಗ್ಗೆ ಒಂದು ರೀತಿನೀತಿಯನ್ನು ರೂಪಿಸಿಕೊಟ್ಟಿದ್ದೆವು. ಆದರೆ ನಿಮ್ಮ ಸರ್ಕಾರದವರು ಏನು ಮಾಡಿದ್ದೀರಿ, ಇದರಲ್ಲಿ ೭೨ ಸೀಟುಗಳು ಮೆರಿಟ್ ಕಮ್ ರಿಸರ್ವೇಷನ್ ಎಂದು ತೆಗೆದುಕೊಂಡಿದ್ದೀರಿ. ಇನ್ನು ಉಳಿದ ೬೩ ಸೀಟುಗಳು ಕ್ಯಾಪಿಟೇಷನ್ ಕೊಟ್ಟು ಸೀಟು ಪಡೆದುಕೊಳ್ಳುವುದೆಂದು ಮಾಡಿದ್ದೀರಿ. ಆದರೆ ಇದೇ ಸಂದರ್ಭದಲ್ಲಿ ನಾನು ಒಂದು ಮಾತನ್ನು ಹೇಳುವುದಾದರೆ ಗೌರ್ನಮೆಂಟ್ ಸೆಲೆಕ್ಷನ್ ಕಮಿಟಿಗೆ ಕೂಡ ಇದು ಪೂರ್ತಿಯಾಗಿ ತೆಗೆದುಕೊಳ್ಳುವುದಕ್ಕೆ ಸ್ವಾತಂತ್ರ್ಯ ಕೊಟ್ಟಿಲ್ಲ. ಕಸ್ತೂರಿಬಾ ಮೆಡಿಕಲ್ ಕಾಲೇಜ್‌ನಲ್ಲಿ ಎಲ್ಲಾ ಸೀಟುಗಳು ಅವರೇ ಇಟ್ಟುಕೊಂಡು ಇರಲಿ ಎಂದು ನಾವು ಏನೂ ಬಿಟ್ಟು ಕೊಟ್ಟಿಲ್ಲ. ಆದರೆ ಮಣಿಪಾಲ್ ಕಾಲೇಜ್‌ನವರಿಗೆ ಮಾತ್ರ ತಾವು ಪೂರ್ತಿ ಸ್ವಾತಂತ್ರ್ಯವನ್ನು ಕೊಟ್ಟು ಎಲ್ಲಾ ಸೀಟುಗಳು ಅವರಿಗೆ ಬಿಟ್ಟು ಕೊಟ್ಟಿದ್ದೀರಿ. ಈ ಹಿಂದೆ ತಮಗೆ ತಿಳಿದಂತೆ ಸುಮಾರು ೬೦ ಸಾವಿರ ಮೆಡಿಕಲ್ ಸೀಟುಗಳು ಖಾಸಗೀ ಕಾಲೇಜುಗಳಿಗೆ ಕೊಟ್ಟಾಗ ಅವರು ಸುಮಾರು ೫೦ ಸಾವಿರ ರೂಪಾಯಿಗಳ ಡಿ. ಡಿ. ಯನ್ನು ಡೈರೆಕ್ಟರ್ ಆಫ್ ಮೆಡಿಕಲ್ ಎಜುಕೇಶನ್ ರವರಿಗೆ ಕೊಡಬೇಕಾಗಿತ್ತು. ಆದರೆ ಸರ್ಕಾರ ಈ ಸಾರಿ ಆ ರೀತಿಯ ವ್ಯವಸ್ಥೆ ಮಾಡಿಲ್ಲ. ಸೀಟು ಬೇಕಾದವರು ಕ್ಯಾಷ್ ಡಿಪಾಜಿಟ್ ಕೊಟ್ಟು ಸೀಟು ಪಡೆದುಕೊಳ್ಳಬಹುದು. ಆದರೆ ಅವರು ಕೊಟ್ಟಂತಹ ದುಡ್ಡಿಗೆ ರಶೀದಿ ಕೂಡಾ ಕೊಡುವುದಿಲ್ಲ. ಮತ್ತೆ ಅರ್ಜಿಗಳನ್ನು ಸರ್ಕಾರದವರೇ ಕರೆಯಬೇಕಾಗಿತ್ತು. ಆದರೆ ಈ ಸಾರಿ ಆ ರೀತಿ ಮಾಡಿಲ್ಲ. ಖಾಸಗೀ ಕಾಲೇಜ್‌ನವರೇ ಅರ್ಜಿಯನ್ನು ಸಹ ಕರೆದಿದ್ದಾರೆ. ಮತ್ತೆ ಹಿಂದೆ ಎಲ್ಲಾ ಅರ್ಜಿಗಳನ್ನು ಸರ್ಕಾರದವರೇ ಸ್ಕ್ರೂಟಿನಿ ಮಾಡುತ್ತಿದ್ದರು. ಈ ಸಾರಿ ಆ ಪದ್ಧತಿ ಇಲ್ಲ. ಅನೇಕ ಖಾಸಗೀ ಕಾಲೇಜುಗಳಲ್ಲಿ ಕ್ಯಾಷ್ ಡಿಪಾಜಿಟ್ ಮಾಡಿದ್ದಕ್ಕೆ ಅಕ್ನಾಲಾಡ್ಜ್‌ಮೆಂಟ್ ಕೊಟ್ಟಿಲ್ಲ. ಅವರಿಗೆ ಬೇಕಾದವರಿಗೆ ಫೋನ್ ಮಾಡಿ ಕರೆಸಿಕೊಂಡು ಒಂದು ದಿನ ಇಂಟರ್‌ವ್ಯೂ ಕೊಟ್ಟು ಸೆಲೆಕ್ಷನ್ ಮಾಡಿಕೊಳ್ಳುತ್ತಿದ್ದಾರೆ, ಅವರಿಗೆ ಯಾರು ಬೇಕಾದವರು ಇರುತ್ತಾರೋ ಅಂಥವರನ್ನು ಸೆಲೆಕ್ಷನ್ ಮಾಡಿಕೊಂಡು ಉಳಿದಂಥವರನ್ನು ಬಿಟ್ಟು ಬಿಡಬಹುದು. ಅವರು ಕೊಟ್ಟಂತಹ ದುಡ್ಡು ಮತ್ತೆ ವಾಪಸ್ಸು ಬರುವ ಗ್ಯಾರೆಂಟಿ ಕೂಡ ಅವರಿಗೆ ಇರುವುದಿಲ್ಲ. ಈ ರೀತಿಯ ಒಂದು ಆರ್ಡರನ್ನು ತಾವು ಹೊರಡಿಸಿದ್ದೀರಿ. ಇದರಿಂದ ಬಡವರ ಮೇಲೆ ಎಂಥ ಪರಿಣಾಮ ಬೀರುತ್ತದೆ ಎನ್ನುವುದನ್ನು ತಾವು ಯೋಚನೆ ಮಾಡಿಲ್ಲ. ಒಬ್ಬ ವ್ಯಕ್ತಿ ೫೦ ಸಾವಿರ ರೂಪಾಯಿಗಳನ್ನು ಕೊಟ್ಟಿದ್ದಕ್ಕೆ ಆತನಿಗೆ ಏನು ಹಿಡಿತ ಇದೆ ? ಆದ್ದರಿಂದ ಈ ಬಗ್ಗೆ ತಮಗೆ ಕೂಲಂಕಷವಾದ ವಿಷಯ ತಿಳಿಯಬೇಕಾದರೆ ಸಿ.ಓ.ಡಿ.ಗೆ ರೆಫರ್ ಮಾಡಿ ವಿಷಯವನ್ನು ತಿಳಿಸಿಕೊಳ್ಳಬಹುದು ಇದೇ ಸಂದರ್ಭದಲ್ಲಿ ನಾನು ಮತ್ತೊಂದು ವಿಷಯವನ್ನು ಸರ್ಕಾರದ ಗಮನಕ್ಕೆ ತರುವುದಾದರೆ ಒಂದೊಂದು ಕಾಲೇಜಿನಲ್ಲಿ ಒಂದೊಂದು ಮೆಡಿಕಲ್ ಸೀಟಿನ ಸುಮಾರು ಎರಡು ಅಥವಾ ಮೂರು ಲಕ್ಷ ರೂಪಾಯಿಗಳವರೆಗೆ ಮಾರಾಟ ಮಾಡಿದ್ದಾರೆ ಇದು ತಮ್ಮ ಡಿಸ್‌ಕ್ರಿಷನ್‌ಗೆ ಬರುವಂಥದ್ದು. ಆದರೆ ಇದರ ಬಗ್ಗೆ ನಾನು ಸ್ಟ್ಯಾಂಡ್ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. That has become a discretionary seat as far ss the management is concerned. Taking Rs. 50,000 is a misnomer. ಈಗ ನಿಮ್ಮ ಲೆಕ್ಕದ ಪ್ರಕಾರ ೫೦ ಸಾವಿರ ರೂಪಾಯಿಗಳಿಗೆ ಬಡ್ಡಿ ಲೆಕ್ಕ ಹಾಕಿದರೆ ೫ ವರ್ಷಗಳಿಗೆ ಸುಮಾರು ಒಂದೂವರೆ ಲಕ್ಷ ರೂಪಾಯಿಗಳು ಆಗುತ್ತದೆ. ಈ ರೀತಿ ತಾವು ಗೋಲ್‌ಮಾಲ್ ಮಾಡುತ್ತಿದ್ದೀರಿ. I dont' say it is the Government which has played it The management has played this fraud through the Government on the student population. ತಾವು ಈ ರೀತಿ ಮಾಡುತ್ತಿರುವುದರಿಂದ ಯಾರಿಗೂ ಕೂಡ ಸಾಮಾಜಿಕ ನ್ಯಾಯ ಸಿಗುವುದಿಲ್ಲ. ಆದ್ದರಿಂದ ಮಾನ್ಯ ಮಂತ್ರಿಗಳು ಇದಕ್ಕೆ ಸಮರ್ಪಕವಾದಂಥ ಉತ್ತರವನ್ನು ಕೊಡುತ್ತಾರೆಂದು ನಾನು ನಂಬಿರುತ್ತೇನೆ. ಮತ್ತು ತಮ್ಮ ಸಚಿವ ಸಂಪುಟದ ಸಚಿವರಾದ ಶ್ರೀಮಾನ್ ಸಿಂದ್ಯಾರವರು ಕೂಡ ಪತ್ರಿಕಾ ಹೇಳಿಕೆಯನ್ನು ಕೊಟ್ಟಿದ್ದಾರೆ. ರೆಕರಿಂಗ್ ಚಾರ್ಜಸ್ಸ್ ಸುಮಾರು ೪೫-೫೦ ಸಾವಿರ ರೂಪಾಯಿಗಳಾಗಬಹುದು ಎಂದು. ಒಂದು ಕಾಲೇಜಿನಲ್ಲಿ ಸುಮಾರು ೧೦೦ ಸೀಟುಗಳು ಇರುತ್ತವೆ. ಆ ಬಗ್ಗೆ ಎಲ್ಲಾ ಕಾಲೇಜಿನಲ್ಲಿ ಲೆಕ್ಕಪತ್ರಗಳು ಇರುತ್ತವೆ. ಹಿಂದೆ ಎಲ್ಲಾ ಕಾಲೇಜುಗಳವರು ಲೆಕ್ಕಪತ್ರಗಳನ್ನು ಕೊಡುತ್ತಿದ್ದರು. ಆದರೆ ಈ ಸಾರಿ ಆ ವ್ಯವಸ್ಥೆ ಇಲ್ಲದಂತೆ ಕಾಣುತ್ತದೆ. ಮತ್ತೇ ೪೯೮ ಸೀಟುಗಳ ಜೊತೆಗೆ ೭೦ ಸೀಟುಗಳನ್ನು ಸೇರಿಸಿದರೆ ೫೬೮ ಸೀಟುಗಳು ಆಗುತ್ತದೆ. ಇದರಿಂದ ಸುಮಾರು ೨೨.೫೬ ಕೋಟಿ ರೂಪಾಯಿಗಳು ಸಿಗುತ್ತದೆ.

೨-೩೦ ಪಿ.ಎಂ.

ನಾನು ಲೆಕ್ಕದಲ್ಲಿ ಸರಿಯಿಲ್ಲ ಸ್ವಲ್ಪ ಹೆಚ್ಚುಕಡಿಮೆ ಇರಬಹುದು. ತಾವು ೪ ಲಕ್ಷ ತೆಗೆದುಕೊಂಡರೆ ಅದಕ್ಕಿಂತಲೂ ಜಾಸ್ತಿ ವಿದೇಶಿ ವಿದ್ಯಾರ್ಥಿಗಳಿಂದ ತೆಗೆದುಕೊಳ್ಳುವವರು ಇದ್ದಾರೆ. ನಿಮ್ಮ ಲೆಕ್ಕವನ್ನು ತೆಗೆದುಕೊಂಡರೂ ಕೂಡ ಈಗ ೪೯೪ ಮತ್ತು ೭೦ ಒಟ್ಟು ೫೬೪ ಸೀಟುಗಳಿಗೆ ೨೨.೬೨ ಕೋಟಿ ಎಂದರೂ ಸರಾಸರಿ ಒಂದೊಂದು ಕಾಲೇಜಿಗೆ ೨.೮೨ ಕೋಟಿ ರೂಪಾಯಿ ಬರುತ್ತದೆ. ಈಗ ೪೫-೬೦ ಲಕ್ಷರೂಪಾಯಿ ರಿಕರಿಂಗ್ ಎಕ್ಸ್‌ಪೆನ್ಸ್‌ಸ್ ಸಾಕು ಎಂದು ಹೇಳುವ ಸಚಿವರೇ, ಒಂದೊಂದು ಕಾಲೇಜಿಗೆ ೨.೮೨ ಕೋಟಿ ರೂಪಾಯಿ ಕೊಡಲಿಕ್ಕೆ ಕಾರಣ ಏನು ? ಹೊಸದಾಗಿ ಬಂದಂತಹ ಮೂರು ಕಾಲೇಜುಗಳಿವೆ. ಎಷ್ಟು ಕೊಡಬೇಕೋ ಲೆಕ್ಕಹಾಕಿ. ನಾಲ್ಕು ಕಾಲೇಜುಗಳಿಗೆ ೪೫-೬೦ ಸಾವಿರ ರೂಪಾಯಿಗಿಂತ ಕೊಡುವುದು ಅವಶ್ಯಕತೆ ಇದ್ದರೆ, ಹಾಗಾದರೆ ಮಂತ್ರಿಗಳ ಮಾತು ನಡೆಯುಲಿಲ್ಲವೇ ? ಕ್ಯಾಬಿನೆಟ್ ಸಬ್ ಕಮಿಟಿಯಲ್ಲಿ ಈ ವಿಚಾರ ಚರ್ಚೆ ಮಾಡಲಿಲ್ಲವೇ ? ಇದರ ಬಗ್ಗೆ ನಾನು ಕೇಳುವುದಕ್ಕೆ ಹೋಗುವುದಿಲ್ಲ, ಏಕೆಂದರೆ ಇದು ಕ್ಯಾಬಿನೆಟ್ ಸೀಕ್ರೆಟ್, ಆದರೆ ಈ ರೀತಿಯಾಗಿ ಒಂದು ವ್ಯಾಮೋಹಕ್ಕೆ ಒಳಗಾಗಿ ಖಾಸಗಿ ಮೆಡಿಕಲ್ ಕಾಲೇಜುಗಳ ಬಗ್ಗೆ ತೀರ್ಮಾನಕ್ಕೆ ಬರಲು ಕಾರಣವೇನು ? ಈ ಸಭೆಯು ಅದರ ಬಗ್ಗೆ ತಿಳಿಯಲು ಇಚ್ಛೆಪಡುತ್ತದೆ. ಕೋಟ್ಯಾಂತರ ರೂಪಾಯಿಗಳನ್ನು ಖಾಸಗಿ ಮೆಡಿಕಲ್ ಕಾಲೇಜಿನವರಿಗೆ ಬೆಳ್ಳಿಯ ತಟ್ಟೆಯಲ್ಲಿಟ್ಟು ಕೊಟ್ಟಿದ್ದಾರೆ ಅವರುಗಳು ಈಗ ತುಂಬಾ ಸಂತೋಷಗೊಂಡಿದ್ದಾರೆ. ಎಟ್ ವಾಟ್ ಕಾಸ್ಟ್ ಯೂ ಆರ್ ಡೂಯಿಂಗ್ ಇಟ್ ? ಬಡ ಮುಗ್ಧ ವಿದ್ಯಾರ್ಥಿಗಳ ಮೇಲೆ ಶೋಷಣೆ ಮಾಡುವುದಕ್ಕೆ ಅವಕಾಶ ಕೊಟ್ಟು, ತಾವು ಮತ್ತು ಖಾಸಗಿ ಮೆಡಿಕಲ್ ಕಾಲೇಜಿನವರು ನಲಿದಾಡತಕ್ಕಂಥ ಒಂದು ರುದ್ರ ನೃತ, ಇವತ್ತು ಕರ್ನಾಟಕ ರಾಜ್ಯದಲ್ಲಿ ಕ್ಯಾಪಿಟೇಶನ್ ಶುಲ್ಕದ ಬಗ್ಗೆ ಆಗುತ್ತಿದೆ ಎಂದರೆ ಇದಕ್ಕೆ ಏನು ಹೇಳಬೇಕು ? ಕ್ಯಾಪಿಟೇಶನ್ ಫೀಸನ್ನು ರದ್ದು ಮಾಡುತ್ತೇವೆಂದು ಹೇಳಿದ ಸರ್ಕಾರ ೪೫-೬೦ ಸಾವಿರ ರೂಪಾಯಿಗಳನ್ನು ಕೊಡಬೇಕಾಗಿದ್ದಲ್ಲಿ ೨ ಕೋಟಿ ೮೨ ಲಕ್ಷ ರೂಪಾಯಿಗಳನ್ನು ಕೊಟ್ಟಂತಹ ಒಂದು ಪ್ರಸಂಗ ಬಂದಿದೆ. ಅದಕ್ಕಾಗಿ ನಾನು ಅವರ ಪ್ರಾಮಾಣಿಕತೆಯನ್ನು ಪ್ರಶ್ನೆ ಮಾಡುತ್ತಿದ್ದೇನೆ. ಪಟ್ಟಭದ್ರ ಹಿತಾಸಕ್ತಿಗಳ ಕೈಗೊಂಬೆಯಾಗಿ ಈ ಸರ್ಕಾರ ಕೆಲಸ ಮಾಡಿದೆಯೆಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ.

ಇನ್ನೊಂದು ವಿಚಾರವನ್ನು ನೋಟಿಫಿಕೇಷನ್‌ನಲ್ಲಿ ಕಾಣಿಸಿದ್ದಾರೆ. ಟ್ಯೂಷನ್ ಫೀಸನ್ನು ವರ್ಷಕ್ಕೆ ಐದು ಸಾವಿರ ರೂಪಾಯಿಯಷ್ಟು ಏರಿಸಿದ್ದಾರೆ. ಇದು ಹಿಂದೆ ಹಿಂದಿನ ಸರ್ಕಾರದ ಅವಧಿಯಲ್ಲಿ ಎರಡು ಸಾವಿರದಿಂದ ಮೂರು ಸಾವಿರದ ಒಳಗಡೆ ಇತ್ತು. ಇದರಿಂದಾಗಿ ಖಾಸಗಿ ಕಾಲೇಜುಗಳಲ್ಲಿ ಮೆರಿಟ್ ಪೂಲ್‌ನಿಂದ ಹೋದ ಬಡ ವಿದ್ಯಾರ್ಥಿಗಳೂ ಕೂಡ ಇವತ್ತು ೫ ಸಾವಿರ ರೂಪಾಯಿಗಳನ್ನು ವಾರ್ಷಿಕವಾಗಿ ಕೊಡಬೇಕಾಗುತ್ತದೆ. ಬಡವರಿಗಂತೂ ಇದರಿಂದ ತುಂಬಾ ಕಷ್ಟವಾಗುತ್ತದೆ. ಅನೇಕ ಮಂದಿ ಹುಡುಗರನ್ನು ನಾನು ನೋಡಿದ್ದೇನೆ. ಸ್ಕಾಲರ್‌ಶಿಪ್ ಮೂಲಕ ಬಹಳ ಕಷ್ಟಪಟ್ಟು ಸೀಟು ಸಿಕ್ಕಿದೆ ಎಂದು ಕಾಲೇಜಿಗೆ ಸೇರಿಕೊಳ್ಳುತ್ತಾರೆ ಒಮ್ಮಿಂದೊಮ್ಮೆ ಟ್ಯೂಷನ್ ಫೀಸ್‌ನ್ನು ಎರಡು ಸಾವಿರದಿಂದ ಐದು ಸಾವಿರಕ್ಕೆ ಏರಿಸಿಬಿಟ್ಟಿದ್ದಾರೆ. ಇದರಿಂದಲೇ ಮೆಡಿಕಲ್ ಕಾಲೇಜಿಗೆ ೨೦ ಲಕ್ಷ ರೂಪಾಯಿ ಬರುತ್ತದೆ. ಅಂದರೆ ಎಲ್ಲೆಲ್ಲಿ ಯಾವ್ಯಾವ ಬಾಬಿನಲ್ಲಿ ಎಷ್ಟೆಷ್ಟು ಜಾಸ್ತಿ ಕೊಡಲಿಕ್ಕೆ ಸಾಧ್ಯವಿದೆ ಅದನ್ನು ಕೊಡಲಾಗಿದೆ. ಈ ಪ್ರಾಮಾಣಿಕ ಪ್ರಯತ್ನ ಮಾತ್ರ ಈ ಸರ್ಕಾರದವರು ಚೆನ್ನಾಗಿ ಮಾಡಿದ್ದಾರೆ. ಅದರ ಮಟ್ಟಿಗೆ ಇವರ ಪ್ರಾಮಾಣಿಕತೆಯನ್ನು ಖಂಡಿತವಾಗಿಯೂ ಮೆಚ್ಚಬೇಕಾಗಿದೆ.

ಇನ್ನು ಕ್ಯಾಪಿಟೇಷನ್ ಫೀಸ್ ಬಗ್ಗೆ ಈಗಾಗಲೇ ಕೇಂದ್ರ ಸರ್ಕಾರದವರು ರಾಜ್ಯ ಸರ್ಕಾರಗಳಿಗೆ ಬರೆದಿದ್ದಾರೆ. ಇದನ್ನು ರದ್ದು ಮಾಡಬೇಕೆಂದು ಸ್ಪಷ್ಟವಾದ ಸೂಚನೆಗಳನ್ನು ಕೊಟ್ಟಿದ್ದಾರೆ ಆದ್ದರಿಂದ ಇವರು ಕ್ಯಾಪಿಟೇಷನ್ ಶುಲ್ಕದ ಬಗ್ಗೆ ಕೇಂದ್ರ ಸರ್ಕಾರವನ್ನು ದೂರುವುದಕ್ಕೆ ಸಾಧ್ಯವೇ ಇಲ್ಲ. ಈಗ ಈ ಪದ್ಧತಿ ಇರುವ ಪಂಜಾಬ್, ಬಿಹಾರ್, ಆಂಧ್ರಪ್ರದೇಶ ಮತ್ತು ಕರ್ನಾಟಕ ರಾಜ್ಯಗಳಿಗೆ ಈಗಾಗಲೇ ಬರೆದಿದ್ದಾರೆ. ಇದರ ಜೊತೆಗೆ ೮೩ರ ಏಪ್ರಿಲ್‌ನಲ್ಲಿ ಕೂಡ ಲೋಕಸಭೆಯಲ್ಲಿ ಈ ವಿಚಾರ ಚರ್ಚೆ ಬಂದಾಗ ಇದಕ್ಕೆ ಉತ್ತರ ಕೊಡುತ್ತಾ ಕೇಂದ್ರ ಆರೋಗ್ಯ ಸಚಿವರೇ ಇದರ ಬಗ್ಗೆ ಹೇಳಿದ್ದಾರೆ. ಆದ್ದರಿಂದ ಕೇಂದ್ರ ಸರ್ಕಾರದಿಂದ ಕ್ಯಾಪಿಟೇಷನ್ ಫೀಸ್ ಬಗ್ಗೆ ಯಾವ ತೊಂದರೆಯೂ ಇಲ್ಲ. ನಾವು ಬೇಕಾದರೆ ರಾಜ್ಯ ಸರ್ಕಾರಗಳ ಮೇಲೆ ಒತ್ತಾಯ ತರಬಹುದು ಎಂದು ಕೇಂದ್ರ ಸಚಿವರು ಮತ್ತೊಂದು ಮಾತನ್ನು ಹೇಳಿದ್ದಾರೆ. "We can persuade the State Government to abolish" ಎನ್ನುವ

ಮಾತನ್ನು ಹೇಳಿದ್ದಾರೆ. ಲೋಕಸಭೆಯಲ್ಲಿ ಎಸ್ಟಿಮೇಟ್ ಕಮಿಟಿ ಕೂಡ ಕರ್ನಾಟಕ ರಾಜ್ಯದಲ್ಲಿರ ತಕ್ಕಂಥ ಕ್ಯಾಪಿಟೇಷನ್ ಫೀಸ್ ಬಗ್ಗೆ ಸಾಕಷ್ಟು ಟೀಕೆ ಮಾಡಿದೆ. ಇಯನ್ನು ತೆಗೆದುಹಾಕಬೇಕೆಂದು ಕೂಡ ಅವರು ಸೂಚನೆ ಮಾಡಿದ್ದಾರೆ. ನಮ್ಮ ಹಿಂದಿನ ಸರ್ಕಾರದಲ್ಲಿ ಈ ಕ್ಯಾಪಿಟೇಷನ್ ಫೀಸ್‌ನ್ನು ಕ್ರಮಬದ್ಧವಾಗಿ ರದ್ದು ಮಾಡಬೇಕೆಂದು ಕಾರ್ಯಕ್ರಮವನ್ನು ನಾವು ಕೈಗೊಂಡಿದ್ದೆವು. ಅದರ ಪ್ರಕಾರ ಈ ನಾಲ್ಕು ಕಾಲೇಜುಗಳು, ಅಂದರೆ ಹಳೆಯ ಕಾಲೇಜುಗಳು ನಮ್ಮ ಹಿಂದಿನ ಆಜ್ಞೆ ಪ್ರಕಾರ ಕ್ಯಾಪಿಟೇಷನ್ ಫೀಸನ್ನು ೧೯೮೩-೮೪ರ ಹೊತ್ತಿಗೆ ಪೂರ್ತಿಯಾಗಿ ರದ್ದುಮಾಡಬೇಕೆಂದು ಹುಕುಂ ಅನ್ನು ಕೊಟ್ಟಿದ್ದೆವು. ಅಂದರೆ ಈ ವರ್ಷ ಅದನ್ನು ರದ್ದು ಮಾಡಬೇಕೆಂದು ಇತ್ತು. ಆದರೆ ಇವತ್ತು ಇವರು ನಾವು ಹಾಕಿದಂಥಹ ಕಾರ್ಯಕ್ರಮಕ್ಕಿಂತಲೂ ಹಿಂದೆ ಹೋಗಿದ್ದಾರೆ. ದಿನಾಂಕ ೨೯-೮-೧೯೮೧ರ ಆರ್ಡರ್ ಪ್ರಕಾರ ೧೯೮೨-೮೩ಕ್ಕೆ ಇರುವಂತಹ ಫ್ರೀ ಸೀಟ್‌ಗಳು ೭೫. ಇದರಲ್ಲಿ Seats to be allotted by the Management-10, Number of seats to be allotted by the Committee constituted by the Government-5, Number of seats to be allotted by the Committee constituted by the Government on payment of special tution fees-10. In 1983-84, free seats-85, number of seats to be allotted by the Management-19, number of seats to be alloted by the Committee constituted by the Government-Zero. ೧೯೮೪-೮೫ರ ನಂತರ ಸಂಪೂರ್ಣವಾಗಿ ಈ ನಾಲ್ಕು ಹಳೆ ಕಾಲೇಜುಗಳ ಮಟ್ಟಿಗೆ ಕ್ಯಾಪಿಟೇಷನ್ ಫೀಸ್‌ನ್ನು ರದ್ದು ಮಾಡಬೇಕೆಂದು ಆಜ್ಞೆಯನ್ನು ಹಿಂದಿನ ಸರ್ಕಾರ ಮಾಡಿತ್ತು. ಆದರೆ ಅವರು ಹೈಕೋರ್ಟ್‌ಗೆ ಹೋದರು ಮತ್ತು ಅದರ ಮೇಲೆ ತಡೆಯಾಜ್ಞೆಯನ್ನು ತೆಗೆದುಕೊಂಡು ಬಂದರು. ಈ ತಡೆಯಾಜ್ಞೆಯನ್ನು ತೆರವು ಮಾಡಿ ಈ ಕಾನೂನನ್ನು ಮಾಡಬೇಕಾಗಿತ್ತು. ಈ ಜವಾಬ್ದಾರಿಯನ್ನು ನಿರ್ವಹಿಸದೆ ಹಿಂದಿನ ಸರ್ಕಾರ ದತ್ತ ಬೆಟ್ಟು ಮಾಡತಕ್ಕಂಥ ನೈತಿಕ ಧೈರ್ಯ ಇವರು ತೋರಿಸುತ್ತಿರುವುದು ಸರಿಯಲ್ಲ. ಇನ್ನು ಹೊಸ ಕಾಲೇಜುಗಳ ಬಗ್ಗೆ ಕೂಡ ಕ್ರಮಾಗತವಾಗಿ ಕ್ಯಾಪಿಟೇಷನ್ ಫೀಸ್‌ನ್ನು ರದ್ದು ಮಾಡಬೇಕೆಂದು ಹೇಳಿ ನಾವು ಆಜ್ಞೆಯನ್ನು ಹೊರಡಿಸಿದ್ದೆವು. ಅದರ ಪ್ರಕಾರ ೧೯೮೩-೮೪ರಲ್ಲಿ Number of seats to be allotted by the Management-10, Number of seats to be alloted by the Government-6, Number of seats to be allotted on merit cum reservation pool-45, Number of seats to be allotted by the Committee constituted by the Government-9. ೧೯೮೪-೮೫ಕ್ಕೆ ಹೋದಾಗ ಇದು ೨೦ಕ್ಕೆ ಬಂತು. ಆಮೇಲೆ ೬೦ ಸಾವಿರ ಇದ್ದದ್ದು ೧೧ ಸೀಟಿಗೆ ಬಂತು, ೧೯೮೫-೮೬ಕ್ಕೆ ಹೋದಾಗ ೧.೬ ಲಕ್ಷ ರೂಪಾಯಿ ಮತ್ತು ೧೧ ಸೀಟಿಗೆ ಇಳಿಯಿತು. ಮತ್ತು ೬೦ ಸಾವಿರದ್ದು ೧೩ಕ್ಕೆ ಇಳಿಯಿತು. ೧೯೮೬-೮೭ಕ್ಕೆ ಬಂದಾಗ ೧.೬ ಲಕ್ಷ ಇದ್ದದ್ದು ಜೀರೋ ಆಯಿತು. ಆಮೇಲೆ ೬೦ ಸಾವಿರ ಇದ್ದುದಕ್ಕೆ ಸೀಟು ೧೫ ಆಯಿತು.

೧೯೮೭-೮೮ರ ಸಮಯಕ್ಕೆ ಎಲ್ಲ ರೀತಿಯ ಕ್ಯಾಪಿಟೇಷನ್ ಫೀ ರದ್ದಾಗಬೇಕೆಂದೂ ಕೂಡ ನಮ್ಮ ಸರ್ಕಾರದ ಉದ್ದೇಶವನ್ನು ಸ್ಪಷ್ಟಪಡಿಸಿದ್ದೆವು. ಆ ರೀತಿಯ ಆಜ್ಞೆಯೊಂದನ್ನೂ ಕೂಡ ನಾವು ಜಾರಿಗೊಳಿಸಿದ್ದೆವು. ಇಂತಹ ಒಂದು ಪ್ರಗತಿಪರವಾದ ನೀತಿಯನ್ನು ನಾವು ಜಾರಿಗೆ ತಂದಿದ್ದೆವು. ತಮ್ಮ ಪ್ರಗತಿಪರವಾದ ನೀತಿ ಯಾವುದು ಎಂಬುದನ್ನು ತೋರಿಸಬೇಕು. by one stroke you have to abolish ಇದರ ಬಗ್ಗೆ ನಾವು ಮಾಡಿದಂತಹ ಆಜ್ಞೆಯನ್ನು ತಾವು ಪರಿಪಾಲಿಸಬೇಕಾಗಿತ್ತು. ಒಂದು ವೇಳೆ ಹೈಕೋರ್ಟಿನವರು ಏನಾದರೂ ಇದಕ್ಕೆ ಅಡ್ಡಿ ಬಂದಿದ್ದೇ ಆದರೆ, ಇದಕ್ಕೆ ಸಂಬಂಧಪಟ್ಟಂತಹ ಒಂದು ಕಾನೂನನ್ನು ತರಬೇಕಾಗಿತ್ತು. ನಾವು ಅದಕ್ಕೆ ಒಪ್ಪಿಗೆ ಕೊಡುತ್ತಿದ್ದೆವು. ಅದನ್ನು ಮಾಡದೆ ಸಂಪೂರ್ಣವಾಗಿ ಕ್ಯಾಪಿಟೇಷನ್ ಫೀಯನ್ನು ೫ ವರ್ಷಗಳವರೆಗೂ ನಡೆಯುವ ರೀತಿಯಲ್ಲಿ, ಹಾಗೂ ಇನ್ನೂ ಹೆಚ್ಚು ಹಣವನ್ನು ಕಾಲೇಜುಗಳನ್ನು ನಡೆಸತಕ್ಕಂತಹವರಿಗೆ ಬರುವ ರೀತಿಯಲ್ಲಿ, ಹಾಗೂ ಬಡವರ ಮಕ್ಕಳು, ಕಾಲೇಜುಗಳಿಗೆ ಪ್ರವೇಶ ಮಾಡದಿರುವುದಕ್ಕೆ ಏನು ಮಾಡಬೇಕೋ ಅದನ್ನು ಮಾಡಿದ್ದೀರಿ. ಶ್ರೀಮಂತರ ಮಕ್ಕಳು. ಹಣವಂತರ ಮಕ್ಕಳು ಮಾತ್ರ ಇವತ್ತು ಕಾಲೇಜುಗಳಿಗೆ ಪ್ರವೇಶ

ಪಡೆದು ವ್ಯಾಸಂಗ ಮಾಡತಕ್ಕಂತಹ ಒಂದು ವ್ಯವಸ್ಥೆಯನ್ನು ತಾವು ಮಾಡಿದ್ದೀರಿ. ಇದರಿಂದ ತಾವು ಉಳ್ಳವರ ಕಡೆಯೋ, ಅಥವಾ ಇಲ್ಲದವರ ಕಡೆಯೋ ಎಂಬುದು ಇದರಿಂದ ಅರ್ಥವಾಗುತ್ತದೆ. ಇಲ್ಲದವರನ್ನು ಕಡೆಗಣಿಸಿದ್ದೀರಿ. ಉಳ್ಳವರಿಗೆ ಸಾಕಷ್ಟು ಪ್ರೋತ್ಸಾಹವನ್ನು ಕೊಟ್ಟಿದ್ದೀರಿ. ಇದರಿಂದ ಕನ್ನಡಿಗರಿಗೆ ಮಹಾ ದ್ರೋಹ ಮಾಡಿದ್ದೀರಿ. ಕನ್ನಡಿಗರಿಗೆ ಮೋಸವನ್ನು ಮಾಡಿದ್ದೀರಿ. ಹೊರ ರಾಜ್ಯಗಳವರಿಗೆ ಹೆಚ್ಚು ಪ್ರೋತ್ಸಾಹವನ್ನು ಕೊಡತಕ್ಕಂತಹ ಒಂದು ವ್ಯವಸ್ಥೆಯನ್ನು ಬಹಳ ಚೆನ್ನಾಗಿ ಮಾಡಿದ್ದೀರಿ. of course, you have added niceties. ಒಳ್ಳೆಯದನ್ನು ಮಾತನಾಡಿಕೊಂಡು ಅಧಿಕಾರಕ್ಕೆ ಬಂದಂತಹವರು ನೀವು ಎಂಬುದು ಇದರಿಂದ ಎಲ್ಲಾ ಜನತೆಗೂ ಅರ್ಥವಾಗುತ್ತದೆ ಅದೇ ರೀತಿ ಇಷ್ಟರವರೆಗೂ ಒಳ್ಳೆಯ ಮಾತನಾಡಿಕೊಂಡು ಬಂದಿದ್ದೀರಿ.

ಶ್ರೀ ಎ. ಲಕ್ಷ್ಮೀಸಾಗರ್.—ನೈಸೀಟೀಸ್ ಅಂದರೆ ಅದರೊಳಗೆ ಸಿಂಪ್ಲಿಸಿಟೀಸ್ ಕೂಡ ಸೇರಿಕೊಂಡಿಲ್ಲವೇ

ಶ್ರೀ ಎಂ. ವೀರಪ್ಪ ಮೊಯ್ಲಿ.—ನಿಜವಾಗಿ ಆಡಳಿತವನ್ನು ಮಾಡುವುದಕ್ಕೆ ಬರುವಾಗ ನಿಮ್ಮ ಬಣ್ಣ ಬಯಲಾಗುತ್ತದೆ. ತಾವು ತಂದಿರತಕ್ಕಂತಹ ಮಸೂದೆ ಏನಿದೆ, ಅದರಲ್ಲಿ ನಿಮ್ಮ ಬಣ್ಣ ಬಯಲಾಗಿದೆ. ಹೊರ ರಾಜ್ಯದವರನ್ನು, ಹಣವಂತರಿಗೆ, ಶ್ರೀಮಂತರಿಗೆ ಸಹಾಯ ಮಾಡತಕ್ಕಂತಹ ಸರ್ಕಾರ ಇದು, ಎಂಬುದನ್ನು ರಾಜ್ಯದ ಜನತೆಗೆ ಈ ಮಸೂದೆಯ ಮೂಲಕ ಸಾಧನೆ ಮಾಡಿ ತೋರಿಸಿದ್ದೀರಿ. ಆದ್ದರಿಂದ ಇದಕ್ಕೆ ಒಪ್ಪಿಗೆ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ ಜೊತೆಗೆ ನಮ್ಮ ರಾಜ್ಯದಲ್ಲಿರತಕ್ಕಂತಹ ಕ್ಯಾಪಿಟೇಷನ್ ಶುಲ್ಕದ ಪಿಡುಗನ್ನು ಹೋಗಲಾಡಿಸತಕ್ಕಂತಹ ಯಾವ ಒಂದು ದೃಢ ಮನಸ್ಸನ್ನೂ ಸರ್ಕಾರ ಮಾಡಿಲ್ಲ. ಕ್ಯಾಪಿಟೇಷನ್ ಫೀಯನ್ನು ಅಬಾಲಿಷ್ ಮಾಡಿ. ಇಲ್ಲದಿದ್ದರೆ ಈಗ ಇರತಕ್ಕಂತಹ ಮಸೂದೆಯನ್ನು ಬೇರೆ ರೂಪದಲ್ಲಿ ತೆಗೆದುಕೊಂಡು ಬನ್ನಿ. ಅದನ್ನು ಬಿಟ್ಟು ಸುಮ್ಮನೆ ಕರ್ನಾಟಕ ಜನರಿಗೆ ಈ ರೀತಿ ಅನ್ಯಾಯವಾಗತಕ್ಕಂತಹ ಕೆಲಸವನ್ನು ಮಾತ್ರ ದಯಮಾಡಿ ಮಾಡಬೇಡಿ ಎಂದು ನಾನು ಇಲ್ಲಿ ತಮ್ಮ ಮೂಲಕ ಸರ್ಕಾರವನ್ನು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಎ. ಲಕ್ಷ್ಮೀಸಾಗರ್.—೫ ವರ್ಷಗಳ ಅವಧಿಯಲ್ಲಿ ಹಂತ ಹಂತವಾಗಿ ತೆಗೆದುಹಾಕುತ್ತೇವೆಂದು ಹೇಳಿದ್ದಿರಲ್ಲಾ, ನೇರವಾಗಿ ಏಕೆ ನಿಮ್ಮ ಕಾಲದಲ್ಲಿ ತೆಗೆದುಹಾಕಲಿಲ್ಲ ಎಂಬುದಕ್ಕೆ ದಯಮಾಡಿ ಉತ್ತರ ಕೊಡಿ.

ಶ್ರೀ ಎಂ. ವೀರಪ್ಪ ಮೊಯ್ಲಿ.—೪ ಎಸ್ಟಾಬ್ಲಿಷ್ಡ್ ಕಾಲೇಜುಗಳಲ್ಲಿ (೯೮೩-೮೪ರಲ್ಲಿ ಕ್ಯಾಪಿಟೇಷನ್ ಫೀಯನ್ನು ತೆಗೆದು ಹಾಕುತ್ತಿದ್ದೆವು. ಆ ರೀತಿಯ ಒಂದು ಅಪ್ಪಣೆಯನ್ನೂ ಕೂಡ ನಾವು ಕೊಡಿಸಿದ್ದೇವೆ. This is the best we could do. ಸನ್ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಇದಕ್ಕೆಲ್ಲಾ ಹಣ ಬೇಕಾಗಿದೆ ಅಂತ. ನಾನು ಹೇಳುತ್ತಿದ್ದೇನೆ. ಏಕೆ ಹಣ ಬೇಕಾಗಿದೆ ? ಮಣಿಪಾಲ್ ಕಾಲೇಜು ಸೇರಿ ಒಟ್ಟು ೫ ಕಾಲೇಜುಗಳ ಈ ಕಾಲೇಜುಗಳಲ್ಲಿ ಇನ್‌ಫ್ರಾಸ್ಟ್ರಚರ್ಸ್ ಈಗಾಗಲೇ ಬೆಳೆದಿದೆ. ಅದರ ಸ್ವಂತ ಹಣದಿಂದ ಇಷ್ಟರವರೆಗೆ ಬೆಳೆದಿದೆ. There is no foreign investment or external investment. ಇನ್ನುಳಿದ ಕಾಲೇಜುಗಳ ಮಟ್ಟಿಗೆ ಹೇಳುವುದಾದರೆ, ಅವುಗಳಿಗೆ ಸ್ವಲ್ಪ ಸಮಯ ಬೇಕಾಗುತ್ತದೆ ಅದನ್ನು ಫೇಸ್ಡ್ ಪ್ರೋಗ್ರಾಂ ರೀತಿಯಲ್ಲಿ ಮಾಡಿ. ಇವನ್ನು ಮಾಡುವಂತಹ ಕಳಕಳಿ ನಿಮಗೆ ನಿಜವಾಗಿ ಇದ್ದದ್ದೇ ಆದರೆ, ಇದಕ್ಕಾಗಿ ನೀವು ಹೇಳಿದ ರೀತಿಯಲ್ಲಿ ಅಷ್ಟೊಂದು ಹೆಚ್ಚು ಹಣ ಬೇಕಾಗುವುದಿಲ್ಲ. ನಾನು ಮೊದಲು ಹೇಳಿದ ೫ ಕಾಲೇಜುಗಳನ್ನು ಸರ್ಕಾರಕ್ಕೆ ತೆಗೆದುಕೊಳ್ಳಿ. ಇಲ್ಲದಿದ್ದರೆ ಕ್ಯಾಪಿಟೇಷನ್ ಶುಲ್ಕ ಇಲ್ಲದೆ ಕಾಲೇಜುಗಳನ್ನು ನಡೆಸಿಕೊಂಡು ಹೋಗುತ್ತೇವೆಂದು ಸಂಬಂಧಪಟ್ಟ ಕಾಲೇಜಿನವರು ಹೇಳುವುದಾದರೆ, ಆ ರೀತಿ ಅವರೇ ಮಾಡಿಕೊಂಡು ಹೋಗಲಿ. ಕಾಪಿಟೇಷನ್ ಫೀಯನ್ನು ತೆಗೆದುಕೊಂಡು ಕಾಲೇಜುಗಳನ್ನು ನಡೆಸುವಂತಹ ರೀತಿ ಸರಿಯಾದುದಲ್ಲ. ಬಹುಶಃ ಕ್ಯಾಪಿಟೇಷನ್ ಫೀ ನೀತಿ ಏನಿದೆ ಇದು ನಮ್ಮ ದೇಶದಲ್ಲಿ ಹೋಗಬೇಕಾಗಿದೆ. ಅದು ಹೋಗದಿದ್ದರೆ ನಮ್ಮ ಕರ್ನಾಟಕ ರಾಜ್ಯಕ್ಕೆ ಕಳಂಕ ಬರತಕ್ಕಂತಹ ಒಂದು ಪರಿಸ್ಥಿತಿ ಇದೆ ಎಂದು ಹೇಳುವುದಕ್ಕೆ ಬಯಸುತ್ತೇನೆ.

ಇನ್ನು ಡಿಸ್‌ಕ್ರಿಷನ್ ಸೀಟುಗಳ ಮೇಲೆ ಹೇಳುವುದಾದರೆ,

ಶ್ರೀ ಎ. ಲಕ್ಷ್ಮೀಸಾಗರ್.—ತೆಗೆದುಹಾಕುವಂತಹ ಮಸೂದೆ ನಮ್ಮ ಮುಂದೆ ಇದೆ. ತಾವೇ ೧೯೮೦ರಿಂದ ೧೯೮೩ರವರೆಗೆ ಅಧಿಕಾರದಲ್ಲಿದ್ದಾಗ ೫ ವರ್ಷಗಳವರೆಗೆ ಈ ವ್ಯವಸ್ಥೆಯನ್ನು ಜಾರಿಗೆ ತಂದು ನಂತರ ಹಂತ ಹಂತವಾಗಿ ತೆಗೆಯುತ್ತೇವೆನ್ನುವ ಬಗ್ಗೆ ಒಂದು ಎಕ್ಸಿಕ್ಯೂಟೀವ್ ಆರ್ಡರನ್ನು ಹೊರಡಿಸಿದ್ದೀರಲ್ಲಾ. ಏಕೆ ಆ ರೀತಿ ಮಾಡಿದ್ದರು ಎಂಬುದನ್ನು ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದರೆ ನಮಗೆ ಅರ್ಥವಾಗುತ್ತದೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಖಾಸಗಿಯಾಗಿರತಕ್ಕಂತಹ ನಾಲ್ಕು ಕಾಲೇಜುಗಳು ಯಾವುದು ಇವೆ, ಅವುಗಳ ಬಗ್ಗೆ ೧೯೮೩-೮೪ನೇ ಸಾಲಿನ ಪೂರ್ತಿ ಬಡ್ಜೆಟ್ ಆದಾಗ ತೆಗೆದುಹಾಕುತ್ತಿದ್ದೆವು. ಅವಕ್ಕೆ ಸಮಯ ಕೊಟ್ಟಿಲ್ಲ. ಕಾರಣ ಅವುಗಳಲ್ಲಿ ಸಾಕಷ್ಟು ಇನ್‌ಫ್ರಾಸ್ಟ್ರಕ್‌ಚರ್ಸ್ ಬೆಳೆಸಿದ್ದಾಗಿದೆ ೧೯೮೩-೮೪ರಲ್ಲಿ ಅವರಿಗೆ ಕೊಡತಕ್ಕಂತಹ ೧ ೬೦ ಲಕ್ಷ ಮತ್ತೆ ಬೇರೆ ೫ ಸೀಟುಗಳಿಂದ ಬರತಕ್ಕಂತಹ ೬೦ ಲಕ್ಷ ರೂಪಾಯಿಗಳನ್ನು ನಾವು ಅವರಿಗೆ ಒದಗಿಸಿದ್ದೇವೆ. ಅದಕ್ಕಿಂತ ಹೆಚ್ಚು ಹಣವನ್ನು ಒದಗಿಸಲಾಗಲಿಲ್ಲ. ಇನ್ನು ಹೊಸ ಕಾಲೇಜುಗಳ ಬಗ್ಗೆ ೫ ವರ್ಷಗಳ ಪ್ರಶ್ನೆಯಿಲ್ಲ. ಎಲ್ಲಾ ಕಾಲೇಜುಗಳ ಬಗ್ಗೆ ೧೯೮೦ರಲ್ಲಿ ಕೊಟ್ಟಂತಹ ಹುಕುಂ ಪ್ರಕಾರ ೧೯೮೩-೮೪ರಲ್ಲಿ ಕ್ಯಾಪಿಟೇಷನ್ ಫೀಯನ್ನು ತೆಗೆದುಕೊಳ್ಳಬಾರದು ಎಂಬುದಾಗಿ ಅಪ್ಪಣೆಯನ್ನು ಕೊಟ್ಟಿದ್ದೇವೆ.

ಶ್ರೀ ಜೆ. ಎಚ್. ಪಟೇಲ್.—ಈ ಸಮಸ್ಯೆ ಒಂದು ಕಡೆಗೆ ಇರಲಿ. ಈ ಸಮಸ್ಯೆಯನ್ನು ನೀವು ಹೇಗೆ ಭಾವಿಸಿದ್ದೀರೋ ನನಗೆ ತಿಳಿಯದು. ಆದರೆ ಕ್ಯಾಪಿಟೇಷನ್ ಫೀಯನ್ನು ತೆಗೆದುಹಾಕಬೇಕೆಂದು ಎಲ್ಲರೂ ಮಾತನಾಡುತ್ತೇವೆ. ಆದರೆ ಒಂದೇ ಸಾರಿ ಅಷ್ಟು ಕಾಲೇಜುಗಳನ್ನು ಸರ್ಕಾರಕ್ಕೆ ಟೇಕ್ ಓವರ್ ಮಾಡಿಕೊಂಡರೆ ಎಷ್ಟು ಹಣ ಖರ್ಚಾಗುತ್ತಿತ್ತು, ೪-೫ ವರ್ಷ ಸಮಯ ಕೊಟ್ಟು ನಂತರ ಟೇಕ್‌ಓವರ್ ಮಾಡಿಕೊಂಡರೆ ಎಷ್ಟು ಖರ್ಚು ಬರುತ್ತಿತ್ತು ಎಂಬುದನ್ನೆಲ್ಲಾ ಲೆಕ್ಕಹಾಕಿದ್ದೀರಾ ? ಮತ್ತೆ ತಾವು ಏನು ಎಕ್ಸಿಕ್ಯೂಟೀವ್ ಆರ್ಡರನ್ನು ಇಷ್ಯೂ ಮಾಡಿದ್ದಿರಲ್ಲಾ, ಆ ಎಕ್ಸಿಕ್ಯೂಟೀವ್ ಆರ್ಡರನ್ನು ಇಷ್ಯೂ ಮಾಡಿದಾಗ, ಒಂದು ದೃಷ್ಟಿಯಿಂದ ಅದು ರಾಜಕೀಯ ದುರ್ಲಾಭದ ಪ್ರಚಾರಕ್ಕಾಗಿ ಮಾಡಿದ್ದೇ ಹೊರತು. ಪ್ರಾಮಾಣಿಕವಾಗಿ ಆಗಿದ್ದಲ್ಲ. ನಾವು ಆ ಎಕ್ಸಿಕ್ಯೂಟೀವ್ ಆರ್ಡರನ್ನು ಇಷ್ಯೂ ಮಾಡಿದ ಹಾಗೆ ಮಾಡುತ್ತೇವೆ. ನೀವು ಕೋರ್ಟಿಗೆ ಹೋಗಿ ಎಂಬುದಾಗಿ ಹೇಳಿದವರೂ ಇವರೇ,

ಶ್ರೀ ವೈ ರಾಮಕೃಷ್ಣ. ಯಾರಾದರೂ ಹೇಳುತ್ತಾರೆಯೇ ? ಸರ್ಕಾರದವರು ಆರ್ಡರ್ ಇಷ್ಯೂ ಮಾಡುತ್ತಿದ್ದಾರೆ ನೀವು ಕೋರ್ಟಿಗೆ ಹೋಗಿ ಅಂತ ಯಾರಾದರೂ ಹೇಳುತ್ತಾರೆಯೇ ? ನಾವು ಎಲ್ಲವನ್ನು ವಿಚಾರ ಮಾಡಿಯೇ ಆ ಆರ್ಡರನ್ನು ಇಷ್ಯೂ ಮಾಡಿದ್ದು, ೪ ಕಾಲೇಜುಗಳಲ್ಲಿ ೧೯೮೪-೮೫ ಮತ್ತು ಇನ್ನುಳಿದ ೪ ಖಾಸಗಿ ಕಾಲೇಜುಗಳಲ್ಲಿ ೧೯೮೮ಕ್ಕೆ ಎಲ್ಲಾ ಕ್ಯಾಪಿಟೇಷನ್ ಫೀ ರದ್ದಾಗಬೇಕಾಗುತ್ತದೆಂದು ತಿಳಿಸಿ ಆ ಎಕ್ಸಿಕ್ಯೂಟೀವ್ ಆರ್ಡರನ್ನು ಇಷ್ಯೂ ಮಾಡಿದ್ದೇವೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಇದರಿಂದ ಆಗತಕ್ಕಂತಹ ಫೈನಾನ್ಷಿಯಲ್ ಇಂಪ್ಲಿಕೇಷನ್ ಏನು ಎಂಬುದನ್ನೂ ಹೇಳಲಿ.

ಶ್ರೀ ವೈ. ರಾಮಕೃಷ್ಣ —೨೮-೫-೧೯೮೧ರಲ್ಲಿ ಹೊರಡಿಸಲಾದಂತಹ ಸರ್ಕಾರಿ ಹುಕ್ಕುಂನಲ್ಲಿ ಯಾವ ಯಾವ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಮಾಡಿದ್ದೇವೆಂಬುದನ್ನು ಆ ಕಡತದಲ್ಲಿದೆ, ತಾವು ನೋಡಬಹುದು. ಸನ್ಮಾನ್ಯ ಪಟೇಲ್‌ರವರು ಆ ಆರ್ಡರನ್ನೇ ನೋಡಿದ ಹಾಗೆ ಕಾಣುವುದಿಲ್ಲ.

ಶ್ರೀ ಜೆ. ಎಚ್. ಪಟೇಲ್.—ನಾನು ಏಕೆ ನೋಡಲಿ ?

ಶ್ರೀ ವೈ. ರಾಮಕೃಷ್ಣ —ತರಿಸಿಕೊಂಡು ನೋಡಿ. The file is with you. The file is in your custody.

ಶ್ರೀ ಎಂ ವೀರಪ್ಪ ಮೊಯ್ಲಿ.—ಸನ್ಮಾನ್ಯ ಸಿಂಧ್ಯರವರಿಗೂ ಕೂಡ ಇವರ ರಾಜಕೀಯ ಗೊತ್ತಿರಲಿಲ್ಲ. ಇದರಲ್ಲಿ ರಾಜಕೀಯ ಕನ್ಸಿಡರೇಷನ್ ಇದೆ, ನಾವು ನೇರವಾಗಿ ಹೋಗುವುದಕ್ಕಾಗುವುದಿಲ್ಲ ಎಂಬುದು ಸಿಂಧ್ಯರವರಿಗೆ. ಗೊತ್ತಿರಲಿಲ್ಲ ಅವರಿಗೆ ಇದು ಗೊತ್ತಿದ್ದರೆ ಹೇಳಿಕೆಯನ್ನೂ ಕೂಡ ಅವರು ಕೊಡುತ್ತಿರಲಿಲ್ಲ. ವರದಿಯನ್ನೂ ಕೂಡ ಕೊಡುತ್ತಿರಲಿಲ್ಲ. ೪೫ ಲಕ್ಷದಿಂದ ೬೦ ಲಕ್ಷದವರೆಗೆ ರಿಕರಿಂಗ್ ಎಕ್ಸ್‌ಪೆಂಡಿಚರ್ಸ್‌ಗೆ ಹಣವನ್ನು ಕೊಟ್ಟರೆ ಸಾಕು ಅಂತ ಶ್ರೀಮಾನ್ ಸಿಂಧ್ಯರವರು ಹೇಳಿಕೆಯನ್ನು ಕೊಟ್ಟಿದ್ದಾರೆ. ಅವರು ಯಾವ ಆಧಾರದ ಮೇಲೆ ಕೊಟ್ಟಿದ್ದಾರೆ ? ಹಾಗಾದರೆ

A study has been made in the department already. ೧೯೮೩-೮೪ರಲ್ಲಿ ೫ ಸೀಟುಗಳನ್ನು ೧,೬೦ ಲಕ್ಷದ ಆಧಾರದ ಮೇಲೆ ಮತ್ತೆ ೬೦ ಲಕ್ಷ ಹಣವನ್ನು recurring expenses ಎಲ್ಲ ಕಾಲೇಜುಗಳಿಗೆ ನಾನು ಕೊಟ್ಟಿದ್ದೇವೆ. ಆದರೆ ೧೯೮೪-೮೫ರಿಂದ ಯಾವುದೇ ಸೀಟುಗಳನ್ನು ಕೊಡುವುದಿಲ್ಲವೆಂದೂ ಹೇಳಿದ್ದೇವೆ.

ಹೊಸ ಕಾಲೇಜಿಗೆ ಸಹಾಯ ಮಾಡುವಾಗ ಅದರಲ್ಲಿ ರೆಕರಿಂಗ್ ಎಕ್ಸ್‌ಪೆಂಡಿಚರ್ ಏನು ಬರುತ್ತದೆ ನಾನ್ ರೆಕರಿಂಗ್ ಎಕ್ಸ್‌ಪೆಂಡಿಚರ್ ಏನು ಬರುತ್ತದೆ ಅನ್ನುವುದನ್ನು ನೋಡಿಕೊಂಡು ಇನ್‌ಫ್ರಾಸ್ಟ್ರಕ್ಚರ್ ಕ್ರಿಯೇಟ್ ಮಾಡಬೇಕು. ಈ ಕ್ಯಾಪಿಟೇಷನ್‌ನಿಂದ ವಸೂಲ್ಮಾಡಿದಂಥಾ ಹಣ ಅದರ ರಿಕರಿಂಗ್ ಎಕ್ಸ್‌ಪೆನ್ಸ್‌ಗಾಗಿ ಇರಬೇಕೇ ವಿನಾಃ ಅವರ ಸ್ವಾರ್ಥಕ್ಕಾಗಿ ಅಲ್ಲ. ಈ ಹಣವನ್ನು ಬೇರೆ ಯಾವುದಕ್ಕೂ ಉಪಯೋಗ ಮಾಡಿಕೊಳ್ಳಬಾರದು, ಎನ್ನುವ ಸದುದ್ದೇಶದಿಂದ ಇದರ ಮೇಲೆ ಒಂದು ಹತೋಟಿಯನ್ನು ಹಿಂದಿನ ಸರ್ಕಾರ ಇಟ್ಟುಕೊಂಡಿತ್ತು.

ಒಬ್ಬ ಮಾನ್ಯ ಸದಸ್ಯರು.—ತಾವು ಮಾಡಿದ ಪಾಪವನ್ನು ಯಾಗ ತಲೆ ಮೇಲೆ ಹಾಕಬೇಕು ?

ಶ್ರೀ ಎಂ. ವೀರಪ್ಪಮೊಯ್ಲಿ – ಯಾರು ಪಾಪ ಮಾಡಿದ್ದಾರೆ ಅನ್ನುವುದನ್ನು ಹೇಳುತ್ತೇನೆ. ಅವರು ಹೆಚ್ಚು ಹಣವನ್ನು ವಸೂಲ್ಮಾಡುವುದಕ್ಕೆ ನಾವು ಅವಕಾಶ ಕೊಟ್ಟರೆ ಅವರ ಮೇಲೆ ಸರಿಯಾಗಿ ಹತೋಟಿ ಇಟ್ಟುಕೊಳ್ಳುವುದಕ್ಕಾಗುವುದಿಲ್ಲ. ಈವಾಗ ತಾವೇ ಅವರಿಗೆ ಹೆಚ್ಚು ಹಣವನ್ನು ವಸೂಲ್ಮಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ. Advertisement is done by the individual private colleges and not by the Director of Medical Education. ಅವರು ಅಡ್ವರ್ಟೈಸ್ ಮಾಡಿ ಹಣ ಎಷ್ಟು ತೆಗೆದುಕೊಳ್ಳುತ್ತಾರೆ ಎನ್ನುವುದಕ್ಕೆ ಒಂದು ಹತೋಟಿ ಇಲ್ಲ. ಕಾನೂನು ಪ್ರಕಾರವೂ ಇಲ್ಲ, ನೋಟಿಫಿಕೇಷನ್ ಮುಖಾಂತರವೂ ಇಲ್ಲ. ನಿಜವಾಗಿ ಹೇಳಬೇಕಾದರೆ ನೋಟೀಫಿಕೇಷನ್ ಮಾಡುವಾಗ ಅವರ ಮೇಲೆ ಒಂದ ಸರಿಯಾದ ಹತೋಟಿಯನ್ನಿಟ್ಟುಕೊಳ್ಳುವ ಹಾಗೆ ರೂಲ್ಸ್ ಅನ್ನು ಮಾಡಬೇಕಾಗಿದೆ. ಇದನ್ನು ನೋಡಿದರೆ ಈ ಬಗ್ಗೆ ಮತ್ತೊಂದು ಮಸೂದೆ ಮಾಡುವುದಕ್ಕೂ ಈ ಒಂದು ನೋಟೀಫಿಕೇಷನ್‌ಗೂ ನೋಡಿದರೆ ಇದರಲ್ಲಿ ಯಾವ ರೀತಿಯಾದ ಹೊಂದಾಣಿಕೆಯೂ ಬರುವುದಿಲ್ಲ. ಈ ಮಸೂದೆಯನ್ನು ನೋಡಿದರೆ ಖಾಸಗಿಯವರು ಇದರಿಂದ ಹೆಚ್ಚು ಲಾಭ ಮಾಡಿಕೊಳ್ಳುವುದಕ್ಕೆ ಸಂಪೂರ್ಣವಾಗಿ ಅವಕಾಶ ಮಾಡಿಕೊಟ್ಟಿದ್ದೀರಿ ಎಂದು ಹೇಳಬೇಕಾಗಿದೆ. ಇದರಲ್ಲಿ ಮ್ಯಾನೇಜ್‌ಮೆಂಟ್ಸ್ ಸೀಟ್ಸ್ ಎಷ್ಟು ಇರಬೇಕು, ಸರ್ಕಾರೀ ಸೀಟ್ಸ್ ಎಷ್ಟು ಇರಬೇಕು ಅನ್ನುವುದು ಇದೆ. ಸರ್ಕಾರದ ಡಿಸ್ಕ್ರಿಷನ್ ಕೋಟಾ ೧೦ ಸೀಟ್ಸ್ ಬಗ್ಗೆ ತಾವು ಹಿಂದಿನ ಸರ್ಕಾರದ ಬಗ್ಗೆ ಸಾಕಷ್ಟು ಅಪಾದನೆ ಮಾಡಿದ್ದೀರಿ. ಈ ೧೦ ಸೀಟ್ಸ್ ಅನ್ನು ಸರ್ಕಾರದವರು ತಮ್ಮ ಡಿಸ್ಕ್ರಿಷನ್‌ಗೆ ಏನು ಇಟ್ಟುಕೊಂಡಿದ್ದರೋ ಅದಕ್ಕೆ ಕ್ಯಾಪಿಟೇಷನ್ ಫೀಸ್ ಇರಲಿಲ್ಲ. ಆ ಪ್ರಕಾರ ೪೦ ಮತ್ತು ೩೨ ಒಟ್ಟು ೭೨ ಸೀಟುಗಳು ಇವೆ. ಆದರೆ ಈ ಡಿಸ್ಕ್ರಿಷನ್ ಅನ್ನು ಉಪಯೋಗಿಸುವ ಪ್ರಶ್ನೆ ಹೇಗೆ ಎನ್ನುವ ಪ್ರಶ್ನೆ ಬರುತ್ತದೆ. ಸಾಮಾನ್ಯವಾಗಿ ಇದು ಮೆಡಿಕಲ್ ಕಾಲೇಜಿಗೆ ಅನ್ವಯಿಸುತ್ತದೆ, ಅನೇಕ ಬಡ ಮಕ್ಕಳು ಬುದ್ಧಿವಂತರಾಗಿದ್ದಾರೆ, ಕ್ಯಾಪಿಟೇಷನ್ ಫೀಸ್ ಕೊಡುವುದಕ್ಕಾಗುವುದಿಲ್ಲ. ಅವರಿಗೆ ಮೆಡಿಕಲ್ ಓದಬೇಕು ಅನ್ನುವ ಆಶೆ ಇರುತ್ತದೆ. ಅಷ್ಟು ಕ್ಯಾಪಿಟೇಶನ್ ಶುಲ್ಕ ಕೊಡುವ ಶಕ್ತಿ ಇಲ್ಲ. ಇನ್ನು ಕೆಲವರು ಹೊರಗಿನವರು ಇರುತ್ತಾರೆ. ಅವರಲ್ಲಿ ಕೆಲವರು ಹೆಚ್ಚು ಮಾರ್ಕ್ಸ್ ತೆಗೆದುಕೊಂಡು ಬುದ್ಧಿವಂತರಾಗಿದ್ದಾರೆ. ಅವರಿಗೆ ಇಂತಿಷ್ಟು ಸೀಟ್ಸ್ ಕೊಡಬೇಕಾಗುತ್ತದೆ. ಅವರಿಗೆ ಕ್ಯಾಪಿಟೇಷನ್ ಶುಲ್ಕ ಕೊಡುವುದಕ್ಕೆ ಶಕ್ತಿ ಇಲ್ಲ, ಅವರಿಗೆಲ್ಲಾ ವಿತರಣೆ ಮಾಡುವಾಗ ದುರುಪಯೋಗವಾಗದೇ ಇರುವ ಹಾಗೆ ನೋಡಿಕೊಳ್ಳಬೇಕು. ತಾವು ನಮ್ಮ ಮೇಲೆ ಬೇಕಾದರೆ ಅಪಾದನೆ ಮಾಡಿ ಬೇಡ ಅನ್ನುವುದಿಲ್ಲ. ಆದರೆ ಅದನ್ನು ಸಾಬೀತು ಮಾಡಲು ಅಷ್ಟು ಸುಲಭವಲ್ಲ. ಕೆಲವರು ಹೆಚ್ಚು ಮಾರ್ಕ್ಸ್ ತೆಗೆದುಕೊಂಡಿರುತ್ತಾರೆ. ೭೦-೮೦ ಮಾರ್ಕ್ಸ್ ತೆಗೆದುಕೊಂಡಿರುತ್ತಾರೆ. ಹಾಗೆ ತೆಗೆದುಕೊಂಡ ಮಾತ್ರಕ್ಕೆ ಬುದ್ಧಿವಂತರು ಎಂದು ಹೇಳುವುದಕ್ಕಾಗುವುದಿಲ್ಲ. ಒಬ್ಬೊಬ್ಬರೂ ವ್ಯವಹಾರಿಕವಾಗಿ ಒಂದೊಂದು ವಿಷಯದಲ್ಲಿ ಬುದ್ಧಿವಂತರಾಗಿರುತ್ತಾರೆ. ತಮಗೆ ಹೇಳಬೇಕಾದರೆ ನಮ್ಮ ಊರಿನಲ್ಲಿ ಒಬ್ಬರು ಹೆಚ್ಚು ಹೆಚ್ಚು ಮಾರ್ಕ್ಸ್‌ಗಳನ್ನು ಲಾ ಕಾಲೇಜಿನಲ್ಲ ಓದುತ್ತಿದ್ದಾಗ ತೆಗೆದುಕೊಂಡಿದ್ದರು. ಅವರಿಗೆ ಮದ್ರಾಸ್ ಲಾ ಕಾಲೇಜಿನಲ್ಲಿ ಗೋಲ್ಡ್ ಮೆಡಲಿಸ್ಟ್ ಕೂಡ ಬಂದಿದೆ. ಹಾಗಿದ್ದರೂ ಕೂಡ ಅವರಿಗೆ ಒಂದು ದಿವಸವೂ ಸಹ ಬ್ರೀಫ್ ಬರಲಿಲ್ಲ, ಹೀಗೆ ಕೆಲವರು ಬುದ್ಧಿವಂತರೂ ಆದರೂ ಸಹ ಸಮಾಜಕ್ಕೆ ಅವರಿಂದ ಏನೂ ಉಪಯೋಗವಾಗುವುದಿಲ್ಲ. ಕೆಲವರು ಕಡಿಮೆ ಮಾರ್ಕ್ಸ್

ತೆಗೆದುಕೊಂಡಿದ್ದರೂ ವ್ಯವಹಾರಿಕವಾಗಿ ಅವರು ನಮಗೆಲ್ಲರಿಗಿಂತಲೂ ಬುದ್ಧಿವಂತರಾಗಿರಬಹುದು. ಅಂಥವರಿಗೆ to meet the social justice, Capitation fees ಅನ್ನು ತೆಗೆದುಕೊಳ್ಳುವುದಿಲ್ಲ. ಹೀಗೆ ಕೆಲವು ಸೀಟ್ಸ್‌ಗಳನ್ನು ಕೊಟ್ಟರೆ ಅದನ್ನು ದೋಷಾರೋಪಣೆ ಮಾಡುವುದು ಸರಿಯಲ್ಲ. ಇದು ತಪ್ಪೇ ಎನ್ನುವುದನ್ನು ತಾವು ಸ್ವಲ್ಪ ಎದೆ ಮುಟ್ಟಿಕೊಂಡು ನೋಡಿ ಗೊತ್ತಾಗುತ್ತದೆ. ಹಿಂದೆ ದಿವಂಗತ ಶ್ರೀಮಾನ್ ಡಿ. ದೇವರಾಜ ಅರಸ್‌ರವರು ಮುಖ್ಯಮಂತ್ರಿಗಳಾಗಿದ್ದಾಗ ಶ್ರೀಮಾನ್ ಗುಂಡೂರಾಯರು ಈಗ ಸದನದಲ್ಲಿ ಸದಸ್ಯರಾಗಿ ಇಲ್ಲದೇ ಇರಬಹುದು ಅವರು ಮುಖ್ಯಮಂತ್ರಿಗಳಾಗಿದ್ದಾಗ ತಮ್ಮಿಂದಲೂ ನಿಮ್ಮ ಸಂಬಂಧಿಕರಿಗೆ, ನಿಮಗೆ ಬೇಕಾದವರಿಗೆ, ನಿಮ್ಮ ರೆಕಮೆಂಡೇಷನ್ ಮೇಲೆ ಅವರಿಗೆ ಪ್ರೊಫೆಷನಲ್ ಕಾಲೇಜಿಗೆ ಸೀಟುಗಳನ್ನು ಕೊಟ್ಟಿರುವ ಪ್ರಸಂಗ ಇದೆ. ಹೀಗೆಲ್ಲಾ ಇರುವುದರಿಂದ ನಾವು ಏನಾದರೂ ಅಪಾದನೆ ಮಾಡಬೇಕಾದರೆ ವಾಸ್ತವಾಂಶಿಕವಾದ ಅಂಶ ಏನು ಇದೆ ಅದನ್ನು ಮನಗಾಣಬೇಕೇ ವಿನಾ ಬರೇ ದೋಷಾರೋಪಣೆ ಮಾಡುವುದು ಸರಿಯಲ್ಲ. ತಾವು ಅಪಾದನೆ ಮಾಡುವ ಹಾಗಿದ್ದರೆ ನಾನು ಈ ಸಂದರ್ಭದಲ್ಲಿ ಒಂದು ವಿಷಯವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ತಮಗೂ ಗೊತ್ತಿದೆ. ಶ್ರೀಮಾನ್ ಗುಂಡೂರಾಯರು ಮುಖ್ಯಮಂತ್ರಿಗಳಾಗಿದ್ದಾಗಲೂ ಸರ್ಕಾರದ ಡಿಸ್ಕ್ರಿಷನ್ ಕೋಟಾ ಇತ್ತು. ೧೯೭೨ನೇ ಇಸವಿಯ ಹಿಂದೆ ವೈ. ರಾಮಕೃಷ್ಣ ಅವರು ಆರೋಗ್ಯಮಂತ್ರಿಗಳಾಗಿದ್ದಾಗ ಈಗಿನ ಮುಖ್ಯಮಂತ್ರಿಗಳಾದ ಶ್ರೀ ರಾಮಕೃಷ್ಣ ಹೆಗಡೆಯವರು ಒಂದು ಪ್ರಮುಖ ಸ್ಥಾನದಲ್ಲಿದ್ದರು. ಆವಾಗ ಅವರು ಯಾವ ಯಾವ ಹಂತದಲ್ಲಿ ಇದನ್ನು ಕೊಟ್ಟಿದ್ದಾರೆ ಅನ್ನುವುದರ ಬಗ್ಗೆ ಒಂದ ದಿವಸ ಇಟ್ಟುಕೊಳ್ಳಿ ಚರ್ಚೆ ಮಾಡೋಣ. ೧೯೭೨ನೇ ಇಸವಿಯ ಹಿಂದೆ ಇದನ್ನು ಯಾವ ರೀತಿ ವಿತರಣೆ ಮಾಡಿದ್ದಾರೆ. ೧೯೭೨ರ ನಂತರ ಇದನ್ನು ಯಾವ ರೀತಿ ವಿತರಣೆ ಮಾಡಿದ್ದಾರೆ ಇದು ಯಾವ್ಯಾವ ಪ್ರೊಸೆಸ್‌ನಲ್ಲಿ ನಡೆದಿದೆ ಅವೆಲ್ಲವನ್ನೂ ಹೇಳೋಣ. ಡಿಸ್ಕ್ರಿಷನ್ ಸೀಟ್ಸ್ ೧೯೭೨ರ ಹಿಂದೆ ಎಷ್ಟು ಇತ್ತು ೧೯೭೨ರ ನಂತರ ಎಷ್ಟು ಇತ್ತು. ೧೯೭೨ರ ಹಿಂದೆ ಈ ಸೀಟುಗಳ ಬಗ್ಗೆ ಏನಾದರೂ ದುರುಪಯೋಗವಾಗಿದೆಯೋ, ಅನಂತರ ಏನಾದರೂ ದುರುಪಯೋಗ ಮಾಡಿಕೊಂಡಿದ್ದಾರೆಯೋ ಇವುಗಳ ವರದಿಯನ್ನು ತ..ಸಿ ಸಭೆಯ ಮುಂ... ಚರ್ಚೆ ಮಾಡೋಣ. ಇದು ಬಿಟ್ಟು ೧೯೭೨ರ ಹಿಂದೆ ಈ ಸೀಟುಗಳು ಬರೇ ...ಪ್ರಭಾವಶಾಲಿಗಳಿಗೆ ಮಾತ್ರ ಹೋಗಿದೆ ಅನ್ನುವ ಅಪಾದನೆಯನ್ನು ಮಾಡಿದರೆ ಅದಕ್ಕೆ ಸರಿಯಾದ ಆಧಾರ ಕೊಡಬೇಕು. ಮತ್ತು ಅದರ ಇತಿಹಾಸವನ್ನು ಮರೆಮಾಚದೆ ಇಡಬೇಕು. ಅದು ಬಿಟ್ಟು ಒಂದು ಪಕ್ಷದ ಮೇಲೆ ಅಪಾದನೆ ಮಾಡತಕ್ಕಂಥಾದ್ದು ಸರಿಯಲ್ಲ. ಈ ದೃಷ್ಟಿಯಿಂದ ನಾನು ಹೇಳುವುದೇನೆಂದರೆ ಈವೊತ್ತು ಈ ಬಗ್ಗೆ ಈ ಸಭೆಯ ಮುಂದೆ ಮಸೂದೆ ಏನು ತಂದಿದ್ದೀರಿ ಅದು ವಿದ್ಯಾ ಕ್ಷೇತ್ರಕ್ಕೆ ಕೀರ್ತಿ ತರತಕ್ಕಂಥಾದ್ದು. ಶೋಭೆ ತರತಕ್ಕಂಥಾದ್ದಲ್ಲ ಎಂದು ಹೇಳುತ್ತೇನೆ. ಈ ಮಸೂದೆ ಮುಖಾಂತರ ಯಾವ ರೀತಿಯಾಗಿಯಾದರೂ ನೀವು ಅಧಿಕಾರ ಚಲಾಯಿಸಿದರೆ, ನೋಟಿಫಿಕೇಷನ್ ಮಾಡುವುದರೆ ಅದರ ಮೂಲ ಉದ್ದೇಶ ಏನು ಇದೆ ಅದಕ್ಕೆ ವಿರುದ್ಧವಾಗುತ್ತದೆ. ಅದರಿಂದ ಹೆಚ್ಚಿನ ಅನಾಹುತವಾಗು...ದೆ ಎಂದು ಹೇಳುತ್ತೇನೆ. ಅಲ್ಲದೆ ಇದರಿಂದ ಸರಿಯಾದಂಥಾ ಒಂದು ಕಾರ್ಯಕ್ರಮವೂ ಆಗುವುದಿಲ್ಲ. ಆದುದರಿಂದ ಇದರ ಬಗ್ಗೆ ಇರತಕ್ಕಂಥ ನೋಟಿಫಿಕೇಷನ್ ಮತ್ತು ರೂಲ್ಸ್ ಅನ್ನು ತಕ್ಷಣ ವಿತ್‌ಹೋಲ್ ಮಾಡಿ ಅದಕ್ಕೆ ಒಂದು ತಿದ್ದುಪಡಿ ತನ್ನಿ. ನಾವೂ ಕೂಡ ಕ್ಯಾಪಿಟೇಷನ್ ಫೀಸ್ ಅಬಾಲಿಷ್ ಮಾಡುವ ಪರವಾಗಿಯೇ ಇದ್ದೇವೆ. ವಾಸ್ತವಿಕವಾದ ಅಂಶವನ್ನು ನಿಮ್ಮ ಮುಂದೆ ಮನಬಿಚ್ಚಿ ಹೇಳುತ್ತೇವೆ. ಈ ಕ್ಯಾಪಿಟೇಷನ್ ಫೀಸ್ ಅನ್ನು ಅಬಾಲಿಷ್ ಮಾಡುವುದಕ್ಕೆ ಸಿಂಥ್ಯ ಕಮಿಟಿಯವರು ಯಾವ ಒಂದು ವರದಿಯನ್ನು ಕೊಟ್ಟಿದ್ದಾರೋ ಅದನ್ನು ತರಿಸಿ ಈ ಸದನದ ಮುಂದೆ ಇಡಿ. ಇದನ್ನು ಅಬಾಲಿಷ್ ಮಾಡುವುದಕ್ಕೆ ತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳೋಣ. ಇದನ್ನು ಅಬಾಲಿಷ್ ಮಾಡುವುದಕ್ಕೆ ಸಾಧ್ಯ ಇದೆ. ಹಿಂದೆ ಇದರ ಬಗ್ಗೆ ಯಾವ ಒಂದು ಎಕ್ಸಿಕ್ಯೂಟೀವ್ ಆರ್ಡರ್ ಕೊಟ್ಟಿದ್ದೀರೋ ಅದಕ್ಕೆ ಒಂದು ತಿದ್ದುಪಡಿಯನ್ನು ನಮೂದಿಸಬೇಕಾಗಿದೆ. ಈ ಕ್ಯಾಪಿಟೇಷನ್ ಅನ್ನುವ ಒಂದು ಪಿಡುಗನ್ನು ಹೋಗಲಾಡಿಸುವುದಕ್ಕೆ ತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕಾದ್ದೇ ಸರಿ. ಕ್ಯಾಪಿಟೇಷನ್ ಫೀಸ್ ರದ್ದಾಗಬೇಕು ಅನ್ನುವುದನ್ನು ಒಪ್ಪುವುದಾದರೂ ಈ ಮಸೂದೆಯಲ್ಲಿ ನೀವು ತಂದಿರತಕ್ಕಂಥಾ ಕಲಂಗಳು ಏನು ಇವೆ ಅದನ್ನು ನಾನು ಒಪ್ಪುವುದಿಲ್ಲ. ಆದುದರಿಂದ ಈ ಮಸೂದೆಯನ್ನು ನಾನು ವಿರೋಧ ಮಾಡುವುದಕ್ಕೆ ಇಚ್ಛೆಪಡುತ್ತೇನೆ.

† ಡಾ. ವಿ.ಎಸ್. ಆಚಾರ್ಯ (ಉಡುಪಿ) —ಸನ್ಮಾನ್ಯ ಅಧ್ಯಕ್ಷರೇ, ಕರ್ನಾಟಕದ ವಿದ್ಯಾಸಂಸ್ಥೆಗಳಲ್ಲಿ ದಾನ ಶುಲ್ಕದ ರದ್ದಿಯಾತಿಯ ಈ ಒಂದು ಮಸೂದೆಯ ಬಗ್ಗೆ ಈಗಾಗಲೇ ಸಾಕಷ್ಟು ಜನ ಸದಸ್ಯರು ಮಾತನಾಡಿದ್ದಾರೆ. ವಿದ್ಯಾ ಕ್ಷೇತ್ರದಲ್ಲಿ ಕ್ಯಾಪಿಟೇಷನ್ ಫೀ ಎನ್ನುವಂಥಾದ್ದು ದೊಡ್ಡ ಹಾವಳಿಯನ್ನು ಮಾಡುತ್ತಿದೆ, ಇದು ಒಂದು ವ್ಯಾಪಾರಿ ಧೋರಣೆಯಾಗಿದೆ ಅಲ್ಲದೆ ಒಟ್ಟಿಗೆ ವಿದ್ಯಾಮಟ್ಟ ಕುಸಿದು ಬೀಳುತ್ತಿದೆ ಎಂದು ಕರ್ನಾಟಕದಲ್ಲಿ ಅಷ್ಟೆ ಅಲ್ಲ ಎಲ್ಲಾ ಕಡೆಯಲ್ಲಿಯೂ ಜನ ಈ ರೀತಿಯಲ್ಲಿ ಚಿಂತನೆ ಮಾಡುವಂಥ ಸಂಗತಿ ಇದೆ. ಈ ಒಂದು ಕಾನೂನಿನ ಪ್ರಕಾರ ಇದರ ರದ್ದಿಯಾತಿಯನ್ನು ಮಾಡುವುದರ ಬಗ್ಗೆ ಸೂಕ್ತ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇವೆಂದು ಜನತಾ ಪಕ್ಷದವರು ಭರವಸೆಯನ್ನೂ ಕೊಟ್ಟಿದ್ದರು. ಇದಕ್ಕೆ ಕರ್ನಾಟಕ ಜನತೆಯೂ ಸಹ ಸೂಕ್ತ ಬೆಂಬಲವನ್ನು ಕೊಟ್ಟರು. ಕರ್ನಾಟಕದಲ್ಲಿ ಸಾರ್ವೋದ್ಧಾರವಾಗಿ ಈ ಪಿಡುಗು ತೊಲಗಬೇಕು ಎಂದು ಸಮಾಜದಲ್ಲಿ ಇದೊಂದು ದೊಡ್ಡ ಅನಿಷ್ಟ, ಪೀಡೆ ಎಂದು ಎಲ್ಲದರಲ್ಲಿಯೂ ಇತ್ತು. ಹಿಂದಿನ ಸರ್ಕಾರದಲ್ಲಿಯೂ ಕೂಡ ಇದರ ಬಗ್ಗೆ ಸೂಕ್ತ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆಂದು ವಿರೋಧಪಕ್ಷದ ನಾಯಕರು ಹೇಳಿದರು ೧೯೮೧ನೆಯ ಇಸವಿಯಲ್ಲಿ, ಐದು ವರ್ಷದ ಅವಧಿಯಲ್ಲಿ ಇದರ ಬಗ್ಗೆ ಒಂದು ಸರ್ಕಾರಿ ಆಜ್ಞೆಯನ್ನು ಮಾಡಿದರು ಮತ್ತು ಅದೇ ಸಮಯದಲ್ಲಿ ಇನ್ನಷ್ಟು ಮೆಡಿಕಲ್ ಕಾಲೇಜುಗಳನ್ನು ತೆಗೆಯುವುದಕ್ಕೆ ಮನ್ನಣೆಯನ್ನು ಕೊಟ್ಟರು, ಈ ದಿಸೆಯಲ್ಲಿ ಅವರು ಈ ಪಿಡುಗು ಇನ್ನಷ್ಟು ಹೆಚ್ಚಲಿಕ್ಕೆ ಅವಕಾಶವನ್ನೂ ಸಹ ಮಾಡಿಕೊಟ್ಟರು. ಇದಕ್ಕೆ ದಾಖಲೆ ಉಂಟು. ಹೀಗೆ ಈ ಕಾಲೇಜುಗಳು ಮುಷ್ರೂಮ್ಸ್ ತರಹ ಹೆಚ್ಚಾಗುವುದಕ್ಕೆ ಹಿಂದಿನವರು ಬೆಂಬಲ ಕೊಟ್ಟಿದ್ದಾರೆ. ಇಂಥ ವಿಷಯದಲ್ಲಿ Man power requirement analysis ಬಗ್ಗೆ ನಾವು ಸ್ವಲ್ಪ ಯೋಚನೆ ಮಾಡಬೇಕು. ನಮ್ಮ ರಾಜ್ಯಕ್ಕೆ ಎಷ್ಟು ಜನ ಇಂಜಿನಿಯರ್ಸ್ ಬೇಕು, ಎಷ್ಟು ಜನವೈದ್ಯರು ಬೇಕು ಎಂದು ಹೇಳಿ ಒಂದು ತೀರ್ಮಾನವನ್ನು ಮಾಡಿಕೊಂಡು ಅದಕ್ಕೆ ತಕ್ಕಂತೆ ವೈದ್ಯರನ್ನು ಇಂಜಿನಿಯರ್ಸ್‌ನ್ನು, ತಾಂತ್ರಿಕ ತಜ್ಞರನ್ನು ವಿದ್ಯಾಸಂಸ್ಥೆಗಳನ್ನು ತೆರೆಯತಕ್ಕದ್ದು ಸರ್ಕಾರದ ಕರ್ತವ್ಯವಾಗಿತ್ತು. ಆದರೆ ಈ ವಿದ್ಯಾಸಂಸ್ಥೆಗಳು ಮುಷ್ರೂಮ್ ತರಹದಲ್ಲಿ ಹೆಚ್ಚಿ, ಸರಿಯಾದ ವ್ಯವಸ್ಥೆ ಇಲ್ಲದೆ ಸರಿಯಾದ ಇನ್‌ಫ್ರಾಸ್ಟ್ರಕ್ಚರ್ಸ್ ಇಲ್ಲದೆ ಬೆಳೆದು ಈ ಸಾಮಾಜಿಕ ಪಿಡುಗನ್ನು ತೊಲಗಿಸದೆ ಅದಕ್ಕೆ ಪ್ರೋತ್ಸಾಹ ಕೊಟ್ಟ ರೀತಿಯಲ್ಲಿ ಹೆಚ್ಚಿಸಿದವು. ಇದ್ದರಿಂದ ಇನ್‌ಫ್ರಾಸ್ಟ್ರಕ್ಚರ್‌ನ್ನು ಸರ್ಕಾರದವರು ತಮ್ಮ ಕೈಗೆ ತೆಗೆದುಕೊಂಡು ಈ ಕ್ಯಾಪಿಟೇಷನ್ ಫೀ ನ್ನು ರದ್ದು ಮಾಡಲು ಒಂದು ಆಜ್ಞೆಯನ್ನು ತರಬೇಕಾಗಿತ್ತು, ಭೂಸುಧಾರಣೆ ವಿಷಯದಲ್ಲಿ ಜಮೀನ್ದಾರರಿಗೆ ಕಾಂಪನ್‌ಸೇಷನ್ ಕೊಡುವ ವಿಚಾರದಲ್ಲಿ ಇದಕ್ಕೆ ಹಿಂದೆ ೧೭೮ ಕೋಟಿ ರೂಪಾಯಿಗಳು ಬೇಕು ಎಂದು ಯೋಚನೆ ಮಾಡುತ್ತಿದ್ದರು ಈಗಲೂ ಸಹ ಇಲ್ಲ ಸರ್ಕಾರದವರು ಯಾವ ಯಾವ ವಿದ್ಯಾಸಂಸ್ಥೆಗಳಿಗೆ ಕಾಂಪನ್ಸೇಷನ್ ಕೊಡಬೇಕು ಎಂದು ವಿಚಾರ ಮಾಡಿದಲ್ಲಿ. ಈ ವಿಷಯ ಅಷ್ಟು ಗೊಡ್ಡದಾಗುವುದಿಲ್ಲ ಕೆಲವು ವಿದ್ಯಾಸಂಸ್ಥೆಗಳನ್ನು ಸರ್ಕಾರದವರು ತಮ್ಮ ವಶಕ್ಕೆ ತೆಗೆದುಕೊಂಡರೆ ಅದಕ್ಕೆ ಆಕ್ಷೇಪ ಎತ್ತುವಂಥ ಪರಿಸ್ಥಿತಿ ಇಲ್ಲ. ಹೀಗಾಗಿ ಇದು ನನ್ನ ದೃಷ್ಟಿಯಲ್ಲಿ ಸುಮಾರು ನಾಲ್ಕೈದು ಕೋಟಿ ರೂಪಾಯಿಗಳ ಪ್ರಶ್ನೆ ಆಗಬಹುದು. ಒಟ್ಟಿನಲ್ಲಿ ಇದನ್ನು ರಾಜ್ಯದಲ್ಲಿ ರದ್ದು ಮಾಡಬೇಕು ಎನ್ನುವುದು ಎಲ್ಲರ ಅಭಿಪ್ರಾಯ.

ಈಗ ತಂದಿರುವಂಥ ಈ ಮಸೂದೆಯಲ್ಲಿ, ಇದರ ಹೆಸರಿನಲ್ಲಿ ಮತ್ತು ಪ್ರೀ ಆ್ಯಂಬಲ್‌ನಲ್ಲಿ ಮಾತ್ರ ಕ್ಯಾಪಿಟೇಷನ್ ಫೀ ಅಬಾಲಿಷನ್ ಎಂದು ಇದೆ. ಇದರ ಹೆಸರು ಮತ್ತು ಪ್ರೀ ಆ್ಯಂಬಲ್‌ನ ನಾಲ್ಕನೆಯ ಪ್ಯಾರಾದಲ್ಲಿ ಮಾತ್ರ ಇದರ ಉಲ್ಲೇಖ ಉಂಟು ಅದು ಈ ರೀತಿಯಾಗಿದೆ. "Whereas it is considered necessary to effectively crub this evil practice in public interest by providing for prohibition of collection of capitation fee and matters releating thereto. ಇದು ಬಿಟ್ಟರೆ ಬೇರೆ ಎಲ್ಲಾ ಕಡೆಯಲ್ಲಿಯೂ 'ಟು ರೆಗ್ಯುಲೇಟ್' ಎಂದು ಇದೆ. ಇದರಲ್ಲಿ ಡೆಫಿನೇಷನ್ ಮತ್ತು ಕೆಲವೊಂದು ಕಲಂಗಳಲ್ಲಿ ಅನೇಕ ತಪ್ಪುಗಳು ಇವೆ. "Capitation fees' means any amount, by whatever name called paid or collected in excess of the fee prescribed under section 5, but does not include the deposite specified under the proviso to section 3 ಇದರ ಅವಧಿ ಐದು ವರ್ಷ ಎಂದು ಸ್ಪಷ್ಟವಾಗಿದೆ. ನಂತರ ಜುಲೈ ೧೧ ರಿಂದ ಕ್ಯಾಪಿಟೇಷನ್ ಫೀ

† ಈ ಚಿಹ್ನೆಯು ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ತೆಗೆದುಕೊಳ್ಳುವುದಕ್ಕೆ ಅವಕಾಶಕೊಡುವುದಿಲ್ಲ ಎನ್ನುವುದನ್ನು ಸ್ಪಷ್ಟವಾಗಿ ಹೇಳಿ ಜುಲೈ ೮೮ರ ನಂತರ ಇದನ್ನು ಈ ಮಸೂದೆಯ ಪ್ರಕಾರ ತೆಗೆದುಕೊಳ್ಳಬಾರದು ಎಂದು ಹೇಳುವಂಥ ಎರಡು ಅಂಶಗಳನ್ನು ಬಿಟ್ಟರೆ, ಈ ಹಾವಳಿಯನ್ನು ಮಧ್ಯ ನಿಲ್ಲಿಸಬಹುದು ಎಂದು ಹೇಳಬಹುದು.

ನಂತರ ಎಜುಕೇಷನಲ್ ಇನ್ಸ್ಟಿಟ್ಯೂಷನ್ ನ ಡೆಫಿನೇಷನ್‌ನಲ್ಲಿ ·Whether managed by Governmet private body local authority, trust University or any other person carrying on the activity of imparting education in medicine or engineering leaeding to a degree conferred by a University established under the Karnataka Universities Act. 1976. ಎಂದು ಹೇಳಿದ್ದಾರೆ ಇಲ್ಲಿ ಇಂಜನಿಯರಿಂಗ್ ಮತ್ತು ಮೆಡಿಕಲ್ ಅಲ್ಲದೆ ಡಿಪ್ಲಮೋ ಕೋರ್ಸ್‌ಗಳಿಗೂ ಸಹ ೧೫-೨೦ ಸಾವಿರ ಕ್ಯಾಪಿಟೇಷನ್ ಫೀ ತೆಗೆದುಕೊಳ್ಳುವಂಥಾದ್ದು ಇದೆ ಇದನ್ನು ಇಲ್ಲಿ ತಾವು ಕಾನೂನಿನ ಕಕ್ಷೆಯಲ್ಲಿ ತರುವುದಕ್ಕೆ ಅವಕಾಶವಿದೆ. ಇಲ್ಲದಿದ್ದರೆ ಜನರಿಗೆ ತೊಂದರೆಯಾಗುತ್ತದೆ. ಅದೇ ರೀತಿಯಲ್ಲಿ ಇನ್ನೂ ಅನೇಕ ಲೋಪದೋಷಗಳು ಇದರಲ್ಲಿ ಇರುವಂಥಾದ್ದು ಇದೆ. ಈ ಕಾಯಿದೆಯ ಪ್ರಕಾರ ದಾನ ಶುಲ್ಕವನ್ನು ರದ್ದು ಮಾಡಬೇಕು. ಇದಕ್ಕೆ ಸುಲಭ ರೂಪವೆ ಕಾನೂನಿನ ಚೌಕಟ್ಟನ್ನು ಕೊಟ್ಟಿದ್ದಾರೆ. ಸೆಕ್ಷನ್ ೩, ೪, ಮತ್ತು ೫ರ ಪ್ರಕಾರ ಸಂಪೂರ್ಣವಾಗಿ ಈ ಒಂದು ಕಾರ್ಯವನ್ನು ಕಿತ್ತುಕೊಂಡು ಈ ಮಸೂದೆಯನ್ನು ಮತ್ತು ಇದರ ಉದ್ದೇಶವನ್ನು ನಿರ್ಜೀವನ್ನಾಗಿ ಮಾಡಿದ್ದಾರೆ. ಸೆಕ್ಷನ್ ೩ರಲ್ಲಿ to continue to receive such capitatation fee or cash deposits in such a manner to such extent and for such period as the Government may byorder, specify, however that such period shall not in any case extend beyond five years from such date.

ಇದರ ಬಗ್ಗೆ ಸರಿಯಾದ ತಿಳುವಳಿಕೆಯನ್ನು ಕೊಡಬೇಕು. ನಂತರ ಸೆಕ್ಷನ್ ೪ (ಬಿ) ರಲ್ಲಿ ಪರಮಾವಧಿ ಸೀಟುಗಳ ಬಗ್ಗೆ ಪ್ರಸ್ತಾಪ ಮಾಡಲಾಗಿದೆ. 'the maximum number of students that could be admitted to a course of study in an educational institution shall be such as may be fixed by the government from time to time',

2 (a) the number of seats set apart as Government seats,

(b) the number of seats that may be filled up by the management of such institution.—

(i) from among Karnataka students on the basis of merit on payment of such cash deposits refundable after such number of years with or without interest as may be specified therein but without the payment of capitation fee or at its discretion. Provided that such number of seats as may be specified by the Government 'but not less than fifty percent'. ಇಲ್ಲಿ ಇಷ್ಟು ಸೀಟುಗಳು ಬೇಕು ಎಂದು ಐ.ಎಂ.ಸಿ, ಯವರು ಹೇಳಬೇಕು ಆದರೆ ಇಲ್ಲಿ ಇರುವಂಥ ಲೋಪದೋಷ ಎದ್ದು ಕಾಣುತ್ತದೆ. ವೈದ್ಯಕೀಯ ಸೀಟುಗಳು ಇಷ್ಟು ನಮಗೆ ಬೇಕು ಎಂದು ನಾವು ನಿಶ್ಚಯ ಮಾಡುವುದು ಸರಿಯಲ್ಲ. ಇಲ್ಲಿ ಐಎಂಸಿ ಯವರ ನೇರ ಹತೋಟಿ ಇಟ್ಟುಕೊಂಡು ಅವರು ನಿಷ್ಕರ್ಷೆ ಮಾಡತಕ್ಕದ್ದು ಸೂಕ್ತ ಎಂದು ನಾನಾದರೂ ಭಾವಿಸುತ್ತೇನೆ.

ಆಮೇಲೆ ಸೆಕ್ಷನ್ ೪ರಲ್ಲಿ ಸರ್ಕಾರದವರು ಆಯ್ಕೆ ಮಾಡಿ ಕಳುಹಿಸತಕ್ಕ ಸೀಟುಗಳ ಬಗ್ಗೆ ಮ್ಯಾನೇಜ್‌ಮೆಂಟ್‌ನವರು ಯಾವ ರೀತಿ ನಡೆದುಕೊಳ್ಳಬೇಕು ಎನ್ನುವ ವಿಚಾರದಲ್ಲಿ ಎರಡು ನಮೂನೆ ಇದೆ. ಇಲ್ಲಿ ನಿಯಮದ ಉಲ್ಲಂಘನೆಯಾಗಿದೆ ಎನ್ನುವ ಮಾತನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ,

ಇನ್ನು ಸೆಕ್ಷನ್ ೫ರಲ್ಲಿ ,ರೆಗ್ಯುಲೇಷನ್ ಆಫ್ ಫೀ ಬಗ್ಗೆ ಹೇಳಿದ್ದಾರೆ. ಇದು ಬಹಳ ಅಸ್ಪಷ್ಟವಾದುದು, ಎಂದು ನಾನು ಹೇಳುತ್ತೇನೆ. ಈ ಒಂದು ಸೆಕ್ಷನ್‌ನಲ್ಲಿಯೂ ಸಹ 'ಡಿಪಾಸಿಟ್' ಎನ್ನುವ ಪದವನ್ನು ಉಪಯೋಗ ಮಾಡಿದ್ದಾರೆ. ಸೆಕ್ಷನ್ ೩ರಲ್ಲಿ ಇದನ್ನು ಉಪಯೋಗ ಮಾಡಿ 'ಡಿಪಾಸಿಟಿಗೆ' ಅವಧಿಯನ್ನು ಕೊಟ್ಟಿದ್ದಾರೆ, ಆದರೆ ಇಲ್ಲಿ ಉಪಯೋಗ ಮಾಡಿದ ಡಿಪಾಸಿಟ್' ಪದಕ್ಕೆ ಅವಧಿಯನ್ನು ಗೊತ್ತು ಮಾಡಿಲ್ಲ. ಆಮೇಲೆ ಖಾಸಗಿ ವಿದ್ಯಾಸಂಸ್ಥೆಯವರು ಕಲೆಕ್ಟ್ ಮಾಡಿದ ಹಣಕ್ಕೆ ಅಧಿಕೃತವಾಗಿ ರಸೀತಿಯನ್ನು ಕೊಡಬೇಕು ಎನ್ನುವ ಬಗ್ಗೆ ಹೇಳಿದ್ದಾರೆ. ಇಲ್ಲಿ ಏನೇನಾಗುತ್ತದೆ ಎಂದು ನಾನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಕ್ಯಾಪಿಟೇಷನ್ ಫೀ ಬದಲು ಸರ್ಕಾರದವರು ಅನಿಯಂತ್ರಿತವಾಗಿ ಹಣವನ್ನು ವಸೂಲುಮಾಡುವುದಕ್ಕೆ ಅಧಿಕಾರವನ್ನು ಈ ಮೂಲಕ ಕೊಟ್ಟಂತಾಗುತ್ತದೆ. ಈ ಎಲ್ಲಾ ಕಾರಣಗಳಿಂದ ಈ ವಸೂದೆಯಿಂದ ಯಾವ ಉದ್ದೇಶವನ್ನು ಸಾಧನೆ ಮಾಡಬೇಕಾಗಿತ್ತೋ ಅದನ್ನು ಮಾಡಿದಂತಾಗುವುದಿಲ್ಲ. ಕ್ಯಾಪಿಟೇಷನ್ ಶುಲ್ಕವನ್ನು ರದ್ದು ಮಾಡುವುದರಲ್ಲಿ ಈ ಮಸೂದೆ ಸಂಪೂರ್ಣವಾಗಿ ವಿಫಲವಾಗಿದೆ ಎನ್ನುವುದನ್ನು ನಾನು ಇಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಸರ್ಕಾರದವರು ಜೂನ್ ೨೦ರ ನೋಟಿಫಿಕೇಷನ್‌ನಲ್ಲಿ ಹೇಳಿರುವ ರೀತಿಯಲ್ಲಿ ಪರಿಸ್ಥಿತಿ ಏನಾಗಿದೆಯೆಂದರೆ, ಖಾಸಗಿ ೮ ಮೆಡಿಕಲ್ ಕಾಲೇಜುಗಳಲ್ಲಿ ೮೮೫ ಸೀಟುಗಳು ಇವೆ. ಇದರಲ್ಲಿ ಎರಡು ಕಾಲೇಜುಗಳಿಗೆ ಸರ್ಕಾರದ ಆಸ್ಪತ್ರೆಯ ಸೇವೆಯ ಅವಕಾಶ ಇಲ್ಲವಾದ್ದರಿಂದ ಇವುಗಳನ್ನು ಹೊರಗಡೆ ಇಟ್ಟು ಬಾಕಿ ಕಾಲೇಜುಗಳಲ್ಲಿ ಕೆಪಾಸಿಟಿಯನ್ನು ನಿಶ್ಚಯಮಾಡಿದ್ದಾರೆ. ಸೆಕ್ಷನ್ ೪ರ ಪ್ರಕಾರ ನೋಡಿದಾಗ ಇದರಿಂದ ಕರ್ನಾಟಕಕ್ಕೆ ದ್ರೋಹ ಮಾಡಿದಂತಾಗುತ್ತದೆ. ಸರ್ಕಾರದವರು ಆಯ್ಕೆ ಮಾಡಿ ಕಳಿಸತಕ್ಕ ೨೬೧ ಸೀಟುಗಳಲ್ಲಿ, ೫೦ ಸಾವಿರ ರೂಪಾಯಿಗಳನ್ನು ಡಿಪಾಸಿಟ್ ಮಾಡತಕ್ಕ ಸೀಟುಗಳು ಎಂದು ಇದೆ. ಇದರಲ್ಲಿ ಅರ್ಧ ಸೀಟುಗಳು ನಮಗೆ ಬರುವುದಿಲ್ಲ. ಉಳಿದ ೬೨೪ ಸೀಟುಗಳ ವ್ಯವಸ್ಥೆ ಹೀಗೆ ಇದೆ. ೭೮ ಸೀಟುಗಳು ಹೊರದೇಶದವರಿಗೆ ಈ ಅವಕಾಶ ಸೆಕ್ಷನ್ ೩ ರಲ್ಲಿದೆ. ಆಮೇಲೆ ೩೧೦ ಸೀಟುಗಳಿಗೆ ಒಂದೂವರೆ ಲಕ್ಷದ ರೂಪಾಯಿಗಳ ಪ್ರಕಾರ ಕೊಡಲು ಅವಕಾಶ ಮಾಡಿಕೊಟ್ಟಿದ್ದಾರೆ. ಈ ಸಂದರ್ಭದಲ್ಲಿ ಒಂದು ಪ್ರಶ್ನೆಯನ್ನು ಈ ಸಭೆಯ ಮುಂದೆ ತರಬೇಕಾಗುತ್ತದೆ ಸರ್ಕಾರದವರು ೨೬೧ ವಿದ್ಯಾರ್ಥಿಗಳನ್ನು ಅರ್ಹತೆಯ ಆಧಾರದ ಮೇಲೆ ಆಯ್ಕೆಮಾಡಿ ಕಳಿಸುತ್ತಾರೆ. ಅದು ನಮಗೆ ಗೊತ್ತಿದೆ. ಆದರೆ ಅದರಲ್ಲಿ ಬಡವರು ಬರುವುದಕ್ಕೆ ಸಾಧ್ಯವೇ ಎಂದು ಯೋಚನೆ ಮಾಡಬೇಕಾಗಿದೆ. ಮತ್ತೆ ಐದ್ಮೈದು ಸಾವಿರ ಫೀ ಕೊಡಬೇಕು ಎಂದು ಮಾಡಿದ್ದಾರೆ. ಕಳೆದ ಮಾರ್ಚಿ ೨೭ ರಂದು ಮಾನ್ಯ ಆರೋಗ್ಯ ಸಚಿವರು ನಮ್ಮೊಡನೆ ಮಂಗಳೂರಿಗೆ ಬಂದಿದ್ದರು. ಅಲ್ಲಿ ವಿದ್ಯಾರ್ಥಿಗಳ ಮತ್ತು ಕಾಲೇಜಿನ ಮ್ಯಾನೇಜ್‌ಮೆಂಟಿನ ನಡುವೆ ವಿವಾದವಿತ್ತು. ಆ ಕಾಲೇಜಿನ ಮ್ಯಾನೇಜ್‌ಮೆಂಟಿನವರನ್ನು ೩ ಸಾವಿರ ರೂಪಾಯಿಗೆ ಒಪ್ಪಿಸಿದರು, ಮ್ಯಾನೇಜ್‌ಮೆಂಟಿನವರೂ ಸಹ ಅದಕ್ಕೆ ಒಪ್ಪಿದರು. ಮಾರ್ಚಿ ೨೭ರ ನಂತರ ೨೦ ಜೂನ್‌ನಲ್ಲಿ ಆಜ್ಞೆ ಹೊರಡಿಸಿ ಐದ್ಮೈದು ಸಾವಿರ ರೂಪಾಯಿ ೫ ವರ್ಷ ಕೊಡಬೇಕೆಂದು ೨೫ ಸಾವಿರಕ್ಕೆ ಏರಿಸಿದರು. ೩ ಸಾವಿರ ರೂಪಾಯಿ ಇದ್ದುದನ್ನು ೫ ಸಾವಿರ ರೂಪಾಯಿಗೆ ಏಕೆ ಏರಿಸಿದರು. ಇಷ್ಟು ಹಣವನ್ನು ಕೊಟ್ಟು ಸೀಟುಗಳನ್ನು ಪಡೆದುಕೊಳ್ಳಲು ಕೆಲವು ವಿದ್ಯಾರ್ಥಿಗಳು ವಂಚಿತರಾಗುವ ಸಂದರ್ಭವಿದೆ. ಆದ್ದರಿಂದ ಸರ್ಕಾರದ ಮೆಡಿಕಲ್ ಕಾಲೇಜುಗಳಿಗೆ ಹೆಚ್ಚಿನ ಶುಲ್ಕ ಕೊಡಬೇಕು ಎಂದು ಹೇಳತಕ್ಕ ನೈತಿಕ ಅಧಿಕಾರ ಸರ್ಕಾರಕ್ಕೆ ಇಲ್ಲ. ಏಕೆಂದರೆ ಮೆರಿಟ್ ಮೇಲೆ ಆ ವಿದ್ಯಾರ್ಥಿಗಳನ್ನು ಆಯ್ಕೆ ಮಾಡುತ್ತಾರೆ. ಆದ್ದರಿಂದ ಇದನ್ನು ೫ ಸಾವಿರ ರೂಪಾಯಿಗೆ ಏರಿಸಿರುವುದು ಬಹಳ ಅನ್ಯಾಯ ಈ ಬಗ್ಗೆ ಮಾನ್ಯ ಕೃಷ್ಣನ್‌ರವರು ಉದಾಹರಣೆ ಕೊಟ್ಟಿದ್ದಾರೆ. ಭಾರತ ಸರ್ಕಾರದ ಪೋಸ್ಟಲ್ ಡಿಪಾರ್ಟ್‌ಮೆಂಟಿನಲ್ಲಿ ಐದಾರು ವರ್ಷಕ್ಕೆ ನಿಮ್ಮ ದುಡ್ಡನ್ನು ಎರಡು ಪಾಲು ಮಾಡಿಕೊಡುವ ಯೋಜನೆಯಿದೆ. ರಿಸರ್ವ ಬ್ಯಾಂಕ್ ಅನುಮತಿ ಪಡೆದ ಕೆಲವು ಇನ್‌ಸ್ಟಿಟ್ಯೂಷನ್ಸ್ ೫ ವರ್ಷಕ್ಕೆ ನಮ್ಮ ಹಣವನ್ನು ಡಬಲ್ ಮಾಡಿಕೊಡುತ್ತವೆ. ಈಗ ಏನಾಗಿದೆಯೆಂದರೆ, ಒಂದೂವರೆ ಲಕ್ಷ ರೂಪಾಯಿ ಕ್ಯಾಪಿಟೇಷನ್ ಫೀ ಕೊಟ್ಟಹಾಗೆ ಆಯಿತು, ಈ ರೀತಿಯಲ್ಲಿ ವಂಚನೆಯಾಗಿದೆ. ಕ್ಯಾಪಿಟೇಷನ್ ಫೀ ಒಂದೂವರೆ, ಎರಡು ಲಕ್ಷ ಕೊಡಬೇಕಾದ ಸೀಟುಗಳು ೬೨೪ ಇದೆ. ಹೀಗಾಗಿ ಕ್ಯಾಪಿಟೇಷನ್ ಫೀ ರದ್ದಾಗಿದೆಯೆಂದು ಹೇಳುವುದಕ್ಕಿಂತಲೂ ಅದಕ್ಕೆ ಹೆಚ್ಚಿಗೆ ಅವಕಾಶವಾಗಿ ಕಾನೂನು ಪ್ರಕಾರ ಕೊಟ್ಟಹಾಗೆ ನಮಗೆ ಕಾಣುತ್ತದೆ. ಈ ಬಗ್ಗೆ ಪ್ರಥಮ ಹೆಜ್ಜೆ ಇಟ್ಟಿದ್ದೇವೆಂದರೆ ಅದರ ಕುರುಹಾದರೂ ಎಲ್ಲಿ ಎಂದು ತೋರಿಸಬೇಕಾಗುತ್ತದೆ. ಕರ್ನಾಟಕದ ವಿದ್ಯಾರ್ಥಿಗಳಿಗೆ ಕ್ಯಾಪಿಟೇಷನ್ ಫೀ ರದ್ದತಿ ಎಂದು ಹೇಳಿದ್ದೀರಿ, ಎಲ್ಲಿದೆ ರದ್ದತಿ. ಬಡ ಹುಡುಗರು ೨೫ ಸಾವಿರ ರೂಪಾಯಿ ಕೊಡಬೇಕು ಅಥವಾ ೫೦ ಸಾವಿರ ರೂಪಾಯಿ ಕೊಡಬೇಕು. ನಿಯಮಗಳ ಪ್ರಕಾರ ಕೊಡಬೇಕಾದರೆ ಒಂದೂವರೆ ಲಕ್ಷ ರೂಪಾಯಿ

ಕೊಡಬೇಕು. ಕರ್ನಾಟಕದವರು ಅಷ್ಟು ಕೊಟ್ಟರೂ ಕೂಡ ಕರ್ನಾಟಕದವರಿಗೆ ಪ್ರಿಫರೆನ್ಸ್ ಕೊಡಬೇಕು ಎಂದು ಇಲ್ಲ. ಆ ಕಾಲೇಜಿನವರು ಕೊಟ್ಟಿರುವ ದಾಖಲೆಯ ಫೋಟೋಸ್ಟೆಟ್ ಕಾಪಿಯು ನನ್ನ ಹತ್ತಿರ ಇದೆ. ಅವರು ಒಂದೂವರೆ ಲಕ್ಷ ರೂಪಾಯಿ ಕೊಡಬೇಕು ಎಂದು ಹೇಳಿದ್ದಾರೆ. ಇದು ಸರ್ಕಾರದ ಸಂಗ್ರಿವಾಜ್ಞೆ ಬಂದ ನಂತರ ಆಗಿರುವುದು. ಇದರ ಪ್ರತಿಯನ್ನು ನಾನು ಈಗಾಗಲೇ ಮಾನ್ಯ ಮುಖ್ಯ ಮಂತ್ರಿಗಳಿಗೆ ಕಳಿಸಿದ್ದೇನೆ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಅದು ಯಾವ ಕಾಲೇಜು ಎಂದು ಹೇಳಿ, ಅದು ಸದನದ ಮತ್ತು ನಮ್ಮೆಲ್ಲರ ಗಮನಕ್ಕೆ ಬರಬೇಡವೇ ?

ಶ್ರೀ ವಿ. ಎಸ್ ಆಚಾರ್ಯ.—ಗೋಕುಲ್ ಎಜುಕೇಷನ್ ಫೌಂಡೇಷನ್, ಎಂ. ಎಸ್. ರಾಮಯ್ಯ ಕಾಲೇಜು ಎಂದು ಇದೆ, ಅವರು ೧.೫ ಲಕ್ಷ ಕೊಟ್ಟಿದ್ದಾರೆ, ಇನ್ನು ೭೫ ಸಾವಿರ ರೂಪಾಯಿ ಕೊಡಬೇಕೆಂಬ ಕೇಳಿಕೆ ಇದೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಒಂದೂವರೆ ಲಕ್ಷ ತೆಗೆದುಕೊಂಡು ಸೀಟು ಕೊಟ್ಟಿದ್ದಾರೆಂಬ ಮಾಹಿತಿ ನನಗೂ ಬಂದಿದೆ. ಅವರು ಹೆಚ್ಚಿಗೆ ದುಡ್ಡು ಕೇಳುತ್ತಾ ಇದ್ದಾರೆ ಎನ್ನುವುದಕ್ಕೆ ದಾಖಲೆ ಇದೆಯೋ.

ಶ್ರೀ ವಿ. ಎಸ್. ಆಚಾರ್ಯ.—ದುಡ್ಡು ಕೊಡದೇ ಹೋದರೆ ಅಡ್ಮಿಷನ್ ಸಿಕ್ಕುವುದಿಲ್ಲ ಅಷ್ಟೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಮಂತ್ರಿಗಳು ಅದಕ್ಕೆ ದಾಖಲೆ ಏನಾದರೂ ಇದೆಯೋ ಎಂದು ಕೇಳಿದರು.

ಶ್ರೀ ಪಿ. ಜಿ ಆರ್. ಸಿಂಧ್ಯ.—ಅದಕ್ಕೆ ನಾನು ಉತ್ತರ ಕೊಡುತ್ತೇನೆ. ಮಾನ್ಯ ಸದಸ್ಯರು ಸಭೆಗೆ ಒಂದು ರೀತಿಯ ಭಾವನೆ ಬರುವ ರೀತಿಯಲ್ಲಿ ಹೇಳಿದರು ಆ ಬಗ್ಗೆ ಏನಾದರೂ ದಾಖಲೆ ಇದ್ದರೆ ಕೊಡಿ, ಸಂಬಂಧಪಟ್ಟವರಿಗೆ ಶಿಕ್ಷೆ ಕೊಡೋಣ ಎನ್ನುವ ದೃಷ್ಟಿಯಿಂದ ಕೇಳಿದೆ ಅಷ್ಟೆ. ಇನ್ನೇನೂ ಇಲ್ಲ.

ಶ್ರೀ ವಿ. ಎಸ್. ಆಚಾರ್ಯ.—ಹೀಗಾಗಿ ವೈದ್ಯಕೀಯ ಶಿಕ್ಷಣದಲ್ಲಿ ಒಂದು ರೀತಿಯ ಗೊಂದಲವೇ ಉಂಟಾಗಿದೆ ಮತ್ತೇ ಇಂಜನಿಯರಿಂಗ್ ಶಿಕ್ಷಣದಲ್ಲೂ ಹೀಗೆಯೇ ಆಗಿದೆ. ಶೇಕಡ ೨೦ರಷ್ಟು ರಿಸರ್ವೇಷನ್ ಇದೆ. ೬೦ ಸೀಟು ಕರ್ನಾಟಕದ ವಿದ್ಯಾರ್ಥಿಗಳಿಗೆ ಇದೆ ಆಮೇಲೆ ಯಾರಿಗೆ ಬೇಕಾದರೂ ಕೊಡಬಹುದು ಎಂದು ಹೇಳಿದ್ದಾರೆ. ಇದರಲ್ಲಿ ಸರ್ಕಾರ ನಿಗದಿಪಡಿಸಿದ ನೋಟಿಫಿಕೇಷನ್‌ಗಿಂತ ಬಹಳಷ್ಟು ಹೆಚ್ಚಿಗೆ ವಂಚಿತರಾಗುವ ಸಂಭವ ಕೆಲವು ಕಡೆ ಇದೆ. ಅಂತೂ ಈಗ ಕಾನೂನು ಪ್ರಕಾರ ನಡೆದುಕೊಂಡ ಹಾಗೆ ಇದೆ. ಇದರ ಬಗ್ಗೆ ಈಗಾಗಲೇ ಮಾನ್ಯ ವಿರೋಧಪಕ್ಷದ ನಾಯಕರು ತಿಳಿಸಿದ್ದರಿಂದ ಅದನ್ನು ಪುನರುಕ್ತಿ ಮಾಡುವುದಕ್ಕೆ ಬಯಸುವುದಿಲ್ಲ. ೬ ಕೋಟಿ ೩೦ ಲಕ್ಷ ರೂಪಾಯಿ ಈ ಸೀಟುಗಳಿಂದ ಜನರೇಟಾಗುತ್ತದೆ. ಅದನ್ನು ೫ ವರ್ಷದ ಬ್ಯಾಚಸ್‌ಗೆ ಅವಕಾಶಕೊಟ್ಟಿದ್ದೀರಿ. ಆ ದೃಷ್ಟಿಯಿಂದ ಹೇಳುವುದಾದರೆ ನಮ್ಮ ಕರ್ನಾಟಕದ ವಿದ್ಯಾರ್ಥಿಗಳಿಗೆ ಯಾವರೀತಿಯಲ್ಲೂ ಸಹಾಯವಾಗುವುದಿಲ್ಲ, ನ್ಯಾಯ ಸಿಗುವುದಿಲ್ಲ ಮತ್ತು ಈ ಕ್ಯಾಪಿಟೇಷನ್ ಫೀಗೆ ಪುನಃ ಅವಕಾಶವಾಗುವಂಥ ಸ್ಥಿತಿ ಇದೆ. ಈ ಒಂದು ದೃಷ್ಟಿಯಿಂದ ಇದನ್ನು ನಾವು ಸಂಪೂರ್ಣವಾಗಿ ವಿರೋಧಿಸಬೇಕಾಗಿದೆ. ಇವತ್ತಿನದಿವಸ ಕರ್ನಾಟಕದಲ್ಲಿ ಕ್ಯಾಪಿಟೇಷನ್ ಫೀ ರದ್ದಾಗಬೇಕಾಗಿದೆ. ಇದಕ್ಕೆ ಕೇಂದ್ರ ಸರ್ಕಾರದ ಒಪ್ಪಿಗೆಯೂ ಇದೆ. ಪ್ರಾಕ್ಟಿಕಲ್ಲಾಗಿ ಕ್ಯಾಪಿಟೇಷನ್ ಫೀಯನ್ನು ರದ್ದುಮಾಡುವುದಕ್ಕೆ ಸಾಧ್ಯತೆ ಇದೆ. ನಾನು ಈ ಬಗ್ಗೆ ಪ್ರಾರಂಭದಲ್ಲೇ ಹೇಳಿದ್ದೇನೆ. ಈ ಬಗ್ಗೆ ಹೊರಡಿಸಿರುವ ನೋಟಿಫಿಕೇಷನ್ ಏನು ಇದೆ ಇದರಲ್ಲಿ ಸಾಕಷ್ಟು ದುರಸ್ತಿ ಆಗಬೇಕು. ೩೬೨ ಸೀಟುಗಳು ಏನಿವೆ ಇವಕ್ಕೆ ಯಾವ ಒಂದು ನಿರ್ಬಂಧವೂ ಇರಬಾರದು. ಈಗ ಏನು ನಿಗದಿಮಾಡಿದ್ದಾರೆ ಅದಕ್ಕಿಂತ ಹೆಚ್ಚು ದುಡ್ಡನ್ನು ತೆಗೆದುಕೊಳ್ಳದ ಹಾಗೆ ವಿದ್ಯಾರ್ಥಿಗಳನ್ನು ಆಯ್ಕೆಮಾಡಿ ಕಳಿಸಬೇಕಾಗುತ್ತದೆ. ನನ್ನ ಕ್ಷೇತ್ರದಲ್ಲಿ ಮಡಿವಾಳರ ಸೊಸೈಟಿಗೆ ಸೇರಿದ ಒಬ್ಬರಿಗೆ ಸೀಟು ಸಿಕ್ಕಿದೆ, ಅವರಿಗೆ ೨೫ ಸಾವಿರ ರೂಪಾಯಿ ಕೊಡಿ ಎಂದರೆ, ಹೇಗೆ ಕೊಡುವುದು ಎಂಬ ಚಿಂತೆ ಇದೆ. ಹೀಗಾಗಿ ಬಹಳ ಜನ ಈ ಒಂದು ಅನುಕೂಲದಿಂದ ವಂಚಿತರಾಗುವ ಸಂಭವವಿದೆ. ಆದುದರಿಂದ ಈ ನೋಟಿಫಿಕೇಷನ್ ಏನಿದೆ ಇದು ಕೆಟ್ಟ ರೀತಿಯಿಂದ ಜನರಿಗೆ ಅನ್ಯಾಯವಾಗುವ ರೀತಿಯಲ್ಲಿದೆ. ಅರ್ಹ ವಿದ್ಯಾರ್ಥಿಗಳಿಗೆ ಸೀಟುಗಳು

ಹೆಚ್ಚಿಗೆ ಆಗಬೇಕಾಗಿದೆ ಡಿಪಾಸಿಟ್ ಸಿಸ್ಟಂ ರದ್ದಾಗಬೇಕಾಗಿದೆ. ಈ ಬಗ್ಗೆ ಈಗಾಗಲೇ ಚರ್ಚೆ ಯಾಗಿರುವಂತೆ ಇದರಲ್ಲಿ ತೋರಿಸಿದಂಥ ಅನೇಕ ಲೋಪದೋಷಗಳು, ತಪ್ಪುಗಳು ನುಸುಳಿ ಕೊಂಡಿರುವುದನ್ನು ದುರಸ್ತಿ ಮಾಡಬೇಕಾದ ಹಿನ್ನೆಲೆಯಲ್ಲಿ ಇದು ಆಯ್ಕೆ ಸಮಿತಿಗೆ ಹೋಗುವಂಥಾದು ಸೂಕ್ತ ಎನ್ನುವ ಅಭಿಪ್ರಾಯವನ್ನು ಪಡುತ್ತಾ ಇದ್ದೇನೆ. ಹೇಳಿದ್ದನ್ನೇ ಪುನರುಕ್ತಿ ಮಾಡುವ ಅವಶ್ಯಕತೆ ಇಲ್ಲ. ಸೆಕ್ಷನ್-2ರಲ್ಲಿ ಪೆನಾಲ್ಟಿಸ್ ವಿಧಿಕೊಟ್ಟಿದ್ದಾರೆ. ಅದರಲ್ಲಿ ಕೆಲವು ಕಾಲೇಜುಗಳನ್ನು ಟೇಕ್ ಓವರ್ ಮಾಡಲಿಕ್ಕೆ ಸೆಕ್ಷನನ್ನು ಹಾಕುವಂಥಾದ್ದು ಅತೀ ಅಗತ್ಯವಿದೆ. ಯಾವ ಇನ್‌ಸ್ಟಿಟ್ಯೂಷನ್ ನಮ್ಮ ಶಿಸ್ತಿಗೆ ಒಳಪಡುವುದಿಲ್ಲವೋ ಅಂತಹ ಇನ್‌ಸ್ಟಿಟ್ಯೂಷನ್‌ಗಳನ್ನು ತೆಗೆದುಕೊಳ್ಳಬೇಕು ಎಂದು ಸೇರಿಸುವುದು ಅಗತ್ಯವಿದೆ. ಇಷ್ಟು ಹೇಳಿ, ಈ ಮಸೂದೆಯನ್ನು ಈಗ ತಂದಿರ ವ ರೂಪದಲ್ಲಿ ವಿರೋಧಮಾಡುವುದು ಇದೆ, ಕ್ಯಾಪಿಟೇಷನ್ ಫೀ ರದ್ದಾಗಬೇಕು, ಅದು ಆಗುವವರೆಗೆ ಅದಕ್ಕೆ ವಿರೋಧವನ್ನು ತೋರಿಸುವುದು ಅಗತ್ಯವಿದೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಉಪಾಧ್ಯಕ್ಷರೇ, ಸರ್ಕಾರದವರು ಈ ಸದನದ ಒಪ್ಪಿಗೆಗಾಗಿ ಮಂಡಿಸಿರತಕ್ಕ ಈ ಮಸೂದೆಯ ಬಗ್ಗೆ ವಿರೋಧಿಸಿ ನನ್ನ ಕೆಲವು ಅಭಿಪ್ರಾಯಗಳನ್ನು ಹೇಳ ಬೇಕೆಂದಿದ್ದೇನೆ. ಯಾವ ಸಮಾಜದಲ್ಲಿ ಜನತೆ ಇದೆ, ಯಾವ್ಯಾವ ವರ್ಗಗಳು ಇದ್ದಾವೆ, ಆ ವರ್ಗ ಗಳಲ್ಲಿ ಯಾವ ಒಂದು ಸಮಾಜ ವಿದ್ಯಾಕ್ಷೇತ್ರದಲ್ಲಿ ಮೇಲಕ್ಕೆ ಹೋದಾಗ, ಮಿಕ್ಕ ವರ್ಗಗಳೂ ಸಹ ನಾವು ಮೇಲಕ್ಕೆ ಹೋಗಬೇಕು ಎನ್ನತಕ್ಕ ಆಶೆ ಆಕಾಂಕ್ಷೆಗಳನ್ನು ಹೊತ್ತಿರುತ್ತವೆ. ಇದನ್ನು ಪಡೆಯಲು ಅವರಿಗೆ ಹಕ್ಕಿದೆ ಆ ರೀತಿ ಯಾದ ಯೋಜನೆಯಗಳನ್ನು ಮಾಡಬೇಕು ಎನ್ನುವ ದೃಷ್ಟಿಯಿಂದ ನಾನು ಈ ಮಾನನ್ನು ಆಡುತ್ತಿದ್ದೇನೆ. ಇವತ್ತು ಸಮಾಜದಲ್ಲಿರತಕ್ಕವರಿಗೆ, ಅದು ಹರಿಜನ ಗಿರಿಜನ ಇತ್ಯಾದಿ ಕೆಲವರ್ಗಗಳವರಿಗೆ ಮೀಸಲಾತಿ ವಿದ್ಯಾಕ್ಷೇತ್ರದಲ್ಲಿ ಇದೆ ಎನ್ನತಕ್ಕ ಅಂಶವನ್ನು ಮನಗೊಂಡಿದ್ದೇನೆ. ಯಾವುದೇ ಸರ್ಕಾರ ಅಧಿಕಾರದಲ್ಲಿರತ ಈ ವಿದ್ಯೆ ಎನ್ನತಕ್ಕದ್ದು ನ್ಯಾಯ ಬದ್ಧವಾಗಿ ಒಬ್ಬ ವ್ಯಕ್ತಿಗೆ ತಲುಪಬೇಕು ಅದು ಮೂಲಗುರಿಯಾಗಿರಬೇಕು. ಈ ದಿಶೆಯಲ್ಲಿ ನಾವು ಚಿಂತನೆ ಮಾಡಿದಕ್ಕೆ ಇದಕ್ಕೆ ನಾವು ನೀವು ಮೂಲಭೂತವಾಗಿ ಬದ್ಧರಾಗಿದ್ದೇವೆ. ಆದರೆ ಇದನ್ನು ಜಾರಿಗೆ ಕೊಡತಕ್ಕ ಮನಸ್ಸು ಅಧಿಕಾರದಲ್ಲಿರತಕ್ಕವರಿಗೆ ಇರಬೇಕು. ಸಾಮಾಜಿಕ ನ್ಯಾಯ ದೃಷ್ಟಿಯಿಂದ ನಮ್ಮ ತೀರ್ಮಾನಗಳು ಈ ದಿಶೆಯಲ್ಲಿ ಬಹಳ ವೇಗವಾಗಿ ಮತ್ತೆ ಒಳ್ಳೆಯ ರೂಪವನ್ನು ಪಡೆದು ಒಂದು ತೀರ್ಮಾನ ಹೊರಹೊಮ್ಮಿ ಬರಬೇಕಾಗಿರುತ್ತದೆ. ಸರ್ಕಾರದ ತೀರ್ಮಾನವನ್ನು ಆಜ್ಞೆ ಮುಖಾಂತರ ಸಮಾಜ ಅದನ್ನು ಬಯಸು ತ್ತದೆ. ಎಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕು. ಇವತ್ತು ಈ ಶುಲ್ಕವನ್ನು ಪಡೆಯತಕ್ಕ ಪ್ರವೃತ್ತಿ ಏನಿದೆ ಇದು ಒಂದು ಸಾಮಾಜಿಕ ಪಿಡುಗಾಗಿದೆ. ಈ ದೊಡ್ಡ ಪಿಡುಗನ್ನು ಹಿಡಿದುಹಾಕಬೇಕು ಎನ್ನು ತಕ್ಕ ವಿಚಾರದಲ್ಲಿ ಯಾವುದೇ ಭಿನ್ನಾಭಿಪ್ರಾಯವಿಲ್ಲ, ಈ ಕಡೆ ಕುಳಿತಿರತಕ್ಕವರಿಗೂ ಅದರಲ್ಲಿ ಭಿನ್ನಾಭಿ ಪ್ರಾಯವಿಲ್ಲ ಎನ್ನತಕ್ಕ ಅಂಶವನ್ನು ನಾನು ಎತ್ತಿ ಹೇಳುವುದಕ್ಕೆ ಬಯುಸುತ್ತೇನೆ. ನಾನು ಇಲ್ಲಿ ಕೆಲವು ವಿಚಾರಗಳನ್ನು ಯಾವ ಪ್ರಸ್ತಾಪ ಮಾಡುವಾಗ ರಾಜಕೀಯವನ್ನು ಬೆರೆಸಿ ಮಾತನಾಡುತ್ತಿಲ್ಲ. ರಾಜಕೀಯ ವನ್ನು ಯಾವ ಸಂದರ್ಭದಲ್ಲಿ ಮಾಡಬೇಕೋ ಆ ಸಂದರ್ಭದಲ್ಲಿ ಮಾಡೋಣ. ಏತಕ್ಕೆಂದರೆ ಇಲ್ಲಿ ನಾವು ಮಾಡತಕ್ಕ ಕಾರ್ಯದಿಂದ ಅದು ಜನಕ್ಕೆ ಅನುಕೂಲವಾಗುವ ಹಾಗಿರಬೇಕು. ಯಾವುದೇ ಪಕ್ಷ ಎಷ್ಟೇ ವರ್ಷಗಳ ಕಾಲ ಅಧಿಕಾರದಲ್ಲಿದ್ದರೂ ಜನತೆಗೆ ತರಸ್ಕಾರ ಮನೋಭಾವನೆ ಬಂದರೆ ಇಂದಲ್ಲ ನಾಳೆ ಜನತೆಯ ತಿರಸ್ಕಾರಕ್ಕೆ ಒಳಪಡಲೇ ಬೇಕಾಗುತ್ತದೆ, ಎನ್ನತಕ್ಕ ಅಂಶವನ್ನು ಗಮನದಲ್ಲಿಟ್ಟುಕೊಂಡರೆ ಒಳ್ಳೆಯದೆಂದು ಭಾವಿಸುತ್ತೇನೆ.

ಇನ್ನು ಈ ಕ್ಯಾಪಿಟೇಷನ್ ಶುಲ್ಕದ ಬಗ್ಗೆ ಮಾತನಾಡುವಾಗ ಡಾ. ಅಚಾರ್‌ರವರು ಪ್ರಸ್ತಾಪ ಮಾಡಿ ಹೇಳಿದ ಹಾಗೆ ಪಾಲಿಟೆಕ್ನಿಕ್‌ನಲ್ಲಿ ಮತ್ತು ಡಿಪ್ಲೊಮೋದಲ್ಲಿ ಓದತಕ್ಕವರು ಕೂಡ ಈ ಕ್ಯಾಪಿಟೇ ಷನ್ ಶುಲ್ಕವನ್ನು ಕೊಡಬೇಕಾದಂಥ ಪರಿಸ್ಥಿತಿ ಉಂಟಾಗಿದೆ. ಇವತ್ತು ವಿದ್ಯಾ ಸಂಸ್ಥೆಗಳು ಹಣವನ್ನು ದೋಚುವ ವ್ಯಾಪಾರಿ ಸಂಸ್ಥೆಗಳಾಗಬಾರದು. ಇವತ್ತು ನೀವು ಈ ಕ್ಯಾಪಿಟೇಷನ್ ಫೀಯನ್ನು ಕೇವಲ ಇಂಜಿನಿಯರಿಂಗ್ ಕಾಲೇಜ್‌ಗಳಿಗೆ ಮೆಡಿಕಲ್ ಕಾಲೇಜ್‌ಗಳಿಗೆ, ಅಥವಾ ಡಿಪ್ಲೊಮೊ ಕೋರ್ ಗಳಿಗೆ ಅಥವಾ ಪಾಲಿಟೆಕ್ನಿಕ್‌ಗಳಿಗೆ ಸೀಮಿತಗೊಳಿಸಿ ಮಾತನಾಡುವುದಕ್ಕೆ ಹೋದರೆ, ಮಾನ್ಯ ಅಧ್ಯಕ್ಷರೇ ತಮಗೇ ಗೊತ್ತಿರಬಹುದು ಬೆಂಗಳೂರು ನಗರದಲ್ಲಿ ಮತ್ತು ರಾಜ್ಯದ ಕೆಲವು ಕಡೆಗಳಲ್ಲಿ ನಾನು ವಿಚಾರ ಮಾಡಿ ತಿಳಿದುಕೊಂಡಿರುವ ಹಾಗೆ ಪ್ರೀ ಪ್ರೈಮರಿ, ನರ್ಸರಿ ಶಾಲೆಗಳಿಗೆ ಮಕ್ಕಳನ್ನು ಸೇರಿಸಬೇಕಾದರೆ ಅಲ್ಲೂ

ಕೂಡ ಇದೇ ರೀತಿಯಾದ ಶುಲ್ಕವನ್ನು ತಂದೆತಾಯಿಗಳು ತತ್ತಬೇಕಾಗಿದೆ. ಅದು ೫೦೦ ರೂಪಾಯಿಯಿಂದ ೧ ಸಾವಿರದ, ೨ ಸಾವಿರ ರೂಪಾಯಿಗಳವರೆಗೆ ಇದೆ. ೫೦೦ ರೂಪಾಯಿ ತೆಗೆದುಕೊಂಡರೂ ಕೂಡ ಆದನ್ನು ಡೊನೇಷನ್ ಎಂದು ಕರೆಯಿರಿ, ಕ್ಯಾಪಿಟೇಷನ್ ಫ್ರೀ ಎಂದು ಕರೆಯಿರಿ, ಇಲ್ಲವೇ ಆಡ್ಮಿಷನ್ ಫ್ರೀ ಎಂದು ಕರೆಯಿರಿ, ಮಕ್ಕಳು ಇವತ್ತು ಸ್ಕೂಲ್‌ಗೆ ಸೇರಿಸಬೇಕಾದರೆ ಒಂದು ದಂಡವನ್ನು ತೆರತಕ್ಕಂಥ ಪದ್ಧತಿಯಾಗಿದೆ. ಈ ಒಂದು ಪದ್ಧತಿ, ಪಿಡುಗು ಏನಿದೆ ಇದು ಇವತ್ತಿನಿಂದ ಅಲ್ಲ. ಅನೇಕ ವರ್ಷಗಳಿಂದ ನಮ್ಮ ಕರ್ನಾಟಕ ರಾಜ್ಯದಲ್ಲಿದೆ ಮತ್ತು ದೇಶದ ಇನ್ನಿತರ ಭಾಗಗಳಲ್ಲೂ ಇದೆ ಎನ್ನತಕ್ಕ ಅಂಶ ತಮ್ಮ ಗಮನಕ್ಕೂ ಬಂದಿರಬಹುದು. ಆದೇ ರೀತಿಯಾಗಿ ಕೇಂದ್ರ ಸರ್ಕಾರದವರಲ್ಲೂ ಒಂದು ಪಾರ್ಲಿಮೆಂಟಿನಲ್ಲಿ ಅನೇಕ ಸದಸ್ಯರುಗಳು ಇದರ ಬಗ್ಗೆ ಪ್ರಶ್ನೋತ್ತರ ಕಾಲದಲ್ಲಿ ಚರ್ಚೆ ಮಾಡಿದ್ದಾರೆ ಎನ್ನುವ ಬಗ್ಗೆ ಪ್ರಶ್ನೋತ್ತರ ಕಾಲದಲ್ಲಿ ಚರ್ಚೆ ಮಾಡಿದ್ದಾರೆ ಎನ್ನುವ ಬಗ್ಗೆ ಪತ್ರಿಕೆಗಳಲ್ಲಿ ಬಂದಿರತಕ್ಕದ್ದನ್ನು ಸಹ ನಾವು ತಿಳಿದುಕೊಂಡಿದ್ದೇವೆ. ಅದಕ್ಕೆ ಇವತ್ತು ತಾವು ಏನು ಕ್ಯಾಪಿಟೇಷನ್ ಫೀ ರದ್ದಿಯಾತಿ ಮಸೂದೆಯನ್ನು ತಂದಿದ್ದೀರಿ ಅದನ್ನು ಕೇವಲ ಇಂಜಿನಿಯರಿಂಗ್ ಕಾಲೇಜ್‌ಗಳಿಗೆ, ಮೆಡಿಕಲ್ ಕಾಲೇಜ್‌ಗಳಿಗೆ ಅನ್ವಯಿಸುವ ಹಾಗೆ ಪ್ರಾಯೋಗಿಕವಾಗಿ ಏನು ತಂದಿದ್ದೀರಿ ಆದರಲ್ಲಿ ಪ್ರಿ ಪ್ರೈಮರಿ ಸ್ಕೂಲಿನಿಂದ ಹಿಡಿದು ಕಾಲೇಜ್‌ವರೆಗೂ ತರುವುದು ಒಳ್ಳೆಯದು ಇತ್ತು.

ಶ್ರೀ ಎ. ಲಕ್ಷ್ಮೀಸಾಗರ್ —ಸಮಗ್ರ ವಿದ್ಯಾ ಮಸೂದೆಯನ್ನು ಈ ಸದನದಲ್ಲಿ ಮಂಡಿಸಲಾಗಿದೆ. ಅದು ಜಾಯಿಂಟ್ ಸಲೆಕ್ಟ್ ಕಮಿಟಿಯ ಮುಂದೆ ಇದೆ ಆದರಲ್ಲಿ ಈ ಎಲ್ಲಾ ಅಂಶಗಳೂ ಒಳಗೊಂಡಿದೆ.

ಶ್ರೀ ಎಸ್. ಬಂಗಾರಪ್ಪ.—ಈ ಸದನಕ್ಕೆ ಬಂದಿದೆ ಆದರೆ ಅದು ಇನ್ನೂ ಜಾರಿಗೆ ಬಂದಿಲ್ಲ. ಸಮಗ್ರ ಶಿಕ್ಷಣ ಕಾಯಿದೆ ಮಂಡನೆ ಮಾಡಿದ್ದೀರಿ. ಅದು ಈಗ ಜಾಯಿಂಟ್ ಸಲೆಕ್ಟ್ ಕಮಿಟಿ ಮುಂದೆ ಹೋಗಿದೆ ಆದನ್ನು ಜಾರಿಗೆ ತರುತ್ತೇವೆ ಎನ್ನತಕ್ಕ ಮಾತನ್ನು ತಾವು ಹೇಳುತ್ತಿದ್ದೀರಿ ಅದನ್ನು ನಾನು ಸಹ ಒಪ್ಪುತ್ತೇನೆ ಆದುದರಿಂದ, ಈ ಸಂದರ್ಭದಲ್ಲಿ ಈ ಒಂದು ಪಿಡುಗನ್ನು ತಡೆಹಿಡಿಯಬೇಕೆಂಬ ಆಸೆ ಮೂಲಭೂತವಾಗಿ ಸರ್ಕಾರಕ್ಕೆ ಇದ್ದಿದ್ದರೆ ಒಳ್ಳೆಯದಿತ್ತು. ಕಾಂಪ್ರಹೆನ್‌ಸೀವ್ ಎಜುಕೇಷನ್ ಬಿಲ್ ಏನಿದೆ ಅದು ಜಂಟಿ ಸಲಹಾ ಸಮಿತಿಗೆ ಹೋಗುವ ವಿಚಾರ ಗೊತ್ತು. ಅದನ್ನು ತಾವು ಈ ಸದನದಲ್ಲಿ ಮೂವ್ ಮಾಡಿದ್ದೀರಿ. ಈಗಾಗಲೇ ಈ ವರ್ಷದ ಅಡ್ಮಿಷನ್ ಮುಗಿಯಿತು, ಅಂದರೆ ಪ್ರೀ-ಪ್ರೈಮರಿ, ಪ್ರೈಮರಿ ಮತ್ತು ಪ್ರೌಢ ಶಾಲೆ ಯದು ಮುಗಿಯಿತು ಅತಿ ಶೀಘ್ರವಾಗಿ ಈ ಒಂದು ಪಿಡುಗನ್ನು ತಡೆಹಿಡಿಯಬೇಕೆಂಬ ಆಸೆ ನಿಮಗೆ ಇದಿದ್ದರೆ ತ್ವರಿತವಾಗಿ ಒಂದು ಆರ್ಡಿನೆನ್ಸನ್ನು ಇಶ್ಯೂ ಮಾಡ ಬಹುದಾಗಿತ್ತು ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳಿಗೆ ಆರ್ಡಿನೆನ್ಸನ್ನು ಜೂನ್-ಜುಲೈ ನಲ್ಲಿ ತಂದ ಹಾಗೆ ಅದಕ್ಕೂ ತರಬಹುದಾಗಿತ್ತು. ಆದರೆ ಆ ಪ್ರಕಾರ ಏತಕ್ಕೆ ಮಾಡಲಿಲ್ಲ ? ಸಮಾಜದ ದೊಡ್ಡ ಹಾಗೂ ಅವಿಭಾಜ್ಯ ಅಂಗಗಳಾದ ಪ್ರೀ-ಪ್ರೈಮರಿ ಮತ್ತು ಪ್ರೈಮರಿ ಶಾಲೆಗಳು ಏನಿವೆ ಅವಕ್ಕೆ ಲಕ್ಷಾಂತರ ಮಕ್ಕಳು ಸೇರುತ್ತಾರೆ. ನೀವು ಆ ಮಕ್ಕಳಿಂದ ವಸೂಲ್ಮಾಡತಕ್ಕ ಶುಲ್ಕ ಏನಿದೆ ಆದನ್ನು ತಡೆಹಿಡಿಯುವುದಕ್ಕೆ ಏಕೆ ಆರ್ಡಿನೆನ್ಸನ್ನು ತರಲಿಲ್ಲವೆಂದು ಕೇಳುತ್ತೇನೆ. ಮೇಡಿಕಲ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳಿಗೆ ಸಂಬಂಧಪಟ್ಟ ಹಾಗೆ ಮಾತ್ರ ತಂದು ಪ್ರಾಥಮಿಕ ಶಾಲೆಗಳಿಗೆ ತರದಿರಲು ಈ ದಿಸೆಯಲ್ಲಿ ನಿಮಗೆ ಮನಸು ಇಲ್ಲವೆಂದು ಹೇಳಬಹುದು. ನಿಮಗೆ ನಿಜವಾಗಿಯೂ ಮನಸ್ಸು ಇದ್ದರೆ ಅದನ್ನು ಕಾರ್ಯರೂಪದಲ್ಲಿ ತೋರಿಸಬೇಕು. ಕಾರ್ಯರೂಪದಲ್ಲಿ ತೋರಿಸತಕ್ಕ ಇಚ್ಛೆ ನಿಮಗೆ ನಿಜವಾಗಿಯೂ ಇದ್ದಿದ್ದರೆ ನೀವು ಆರ್ಡಿನೆನಸ್ಸನ್ನು ತಂದು ಇದನ್ನೆಲ್ಲ ಅಬಾಲಿಷ್ ಮಾಡುತ್ತೇವೆಂದು ಹೇಳಿದ್ದರೆ ನಿಜವಾಗಿ ಸಮಾಜದಲ್ಲಿರತಕ್ಕ ಎಲ್ಲ ವರ್ಗದ ಮಕ್ಕಳಿಗೆ ಪ್ರೀ-ಪ್ರೈಮರಿಯಿಂದ ಸ್ನಾತಕೋತ್ತರ ಶಿಕ್ಷಣದವರಗೆ ಮೆಡಿಕಲ್, ಇಂಜಿನಿಯರಿಂಗ್ ಎಲ್ಲ ವಿಷಯಗಳನ್ನು ಒಳಗೊಂಡ ವಿಚಾರಧಾರೆ ನಿಮ್ಮ ಹತ್ತಿರ ಇದೆ ಎಂಬ ವಿಚಾರ ಇರುತ್ತಿತ್ತು ಆದರೆ ನಿಮ್ಮ ವಿಚಾರಧಾರೆ ಮೇಡಿಕಲ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳಿಗೆ ಮಾತ್ರ ಸೀಮಿತಗೊಂಡಿರುವುದಕ್ಕೆ ಏನು ಕಾರಣ ? ಇದೆ ಪ್ರಮುಖವಾಗಿರತಕ್ಕ ಪ್ರಶ್ನೆ. ನಾನು ಒಂದು ಮಾತನ್ನಾಡಿದರೆ ಅದು ಲಕ್ಷ್ಮೀಸಾಗರ್‌ರವರಿಗೆ ಅನ್ವಯವಾಗುತ್ತದೆಂದು ಭಾವಿಸಬಾರದು.

SRI A. LAKSHMISAGAR.—Personally it need not apply to me. But I am speaking on behalf of the Government.

ಶ್ರೀ ಎಸ್. ಬಂಗಾರಪ.—ಹೌದು. ನೀವು ಸರ್ಕಾರದ ಒಂದು ಅವಿಭಾಜ್ಯ ಅಂಗ ಎಂಬುದು ನನಗೆ ಗೊತ್ತಿದೆ.

SRI Y. K. RAMAIAH.—Mr. Lakshmisagar is undisputedly a member of the Cabinet and paret and parcel of the Government. Why do you entertain suspicion about it ?

ಶ್ರೀ ಎಸ್. ಬಂಗಾರಪ್ಪ.—ನಾನು, ಅವರು ಮಂತ್ರಿಮಂಡಲದ ಒಂದು ಭಾಗ ಎಂದು ತಿಳಿದುಕೊಂಡಿದ್ದೆ. ನೀವು ಹೇಳುವುದು ನೋಡಿದರೆ ಈಗ ನನಗೆ ಅನುಮಾನ ಕಾಣುತ್ತದೆ. ನೀವು ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳಿಗೋಸ್ಕರ ಸೀಮಿತವಾಗಿ ಜೂನ್ ಮತ್ತು ಜುಲೈನಲ್ಲಿ ಹೊರಡಿಸಿರತಕ್ಕ ಆರ್ಡಿನೆನ್ಸ್‌ಗಳನ್ನು ನೋಡಿದರೆ ಇದಕ್ಕೆ ಪ್ರತ್ಯೇಕವಾಗಿರತಕ್ಕ ಗುರಿ ನಿಮ್ಮಲ್ಲಿದೆ. ಇದನ್ನು ಅನಂತರ ಪ್ರಸ್ತಾಪ ಮಾಡೋಣ. ನಾನು ನನ್ನ ವಿಚಾರವನ್ನು ಹೇಳತಕ್ಕ ಸಂದರ್ಭದಲ್ಲಿ ಪ್ರೀ-ಪ್ರೈಮರಿ ಮತ್ತು ಪ್ರೈಮರಿ ಶಾಲೆಗಳಲ್ಲಿರತಕ್ಕ ಪಿಡುಗಿನ ಬಗ್ಗೆ ಪ್ರಸ್ತಾಪ ಮಾಡಿದೆ. ಪಿಡುಗು ಎಂಬ ಪದವನ್ನು ಪ್ರಯೋಗ ಮಾಡಿದರೆ ಅದು ಸಮಾಜದ ಎಲ್ಲ ವರ್ಗಗಳನ್ನು ಒಳಗೊಂಡಿರುತ್ತದೆಂಬ ದೃಷ್ಟಿಯಿಂದ ಈ ಮಾತನ್ನು ಆಡಿದ್ದೇನೆ. ಸಮಗ್ರ ಶಿಕ್ಷಣ ಕಾಯಿದೆಯನ್ನು ತರತಕ್ಕ ಯೋಚನೆ ಏನಿದೆ ...

ಒಬ್ಬರು ಮಾನ್ಯ ಸದಸ್ಯರು.—ಸಮಗ್ರ ಎಂದರೆ ಅದರ ವ್ಯಾಪ್ತಿ ಬಹಳವಾಗುತ್ತದೆ. ಕಾಂ... ಹೆನ್‌ಸೀವ್ ಎಂಬುದು ಹೊರಟು ಹೋಗಿದೆ ; ಬರೀ ಶಿಕ್ಷಣ ಕಾಯಿದೆ ಅಷ್ಟೆ. ...ಹುದು. ಈ

ಮಸೂದೆಗಳು

ಶ್ರೀ ಎಸ್. ಬಂಗಾರಪ್ಪ.—ಹೌದು. ನಾನು ನನ್ನ ಮಾತನ್ನು ಪೂರ್ವಭಾವಿಯಾ...ಡಿದ್ದೇನೆ. ಕೆಲ ಮಾಡದ ಹೊರತು ವಿವರಗಳಿಗೆ ಹೋಗುವುದಿಲ್ಲ. ಪಿಡುಗನ್ನು ತಡೆಹಿಡಿಯಬೇಕೆಂಬ ...ರಿಟಿ ಇರಬಹುದು ಎಲ್ಲವನ್ನು ಒಳಗೊಂಡ ಕಾನೂನು ತಂದರೆ ಒಳ್ಳೆಯದು. ಈಗ ಸರ್ಕಾರದವರು ...ಎತ್ತತಕ್ಕ ಪರಿಸ್ಥಿತಿ ಆಜ್ಞೆಗಳು ಮತ್ತು ಸುಗ್ರೀವಾಜ್ಞೆಗಳನ್ನು ವಯಲೇಟ್ ಮಾಡತಕ್ಕ ಮಸೂದೆ ಏನಿದೆ ...ಲ ...ನು. ಎಂಬ ಪ್ರಶ್ನೆಗೆ ವಿಚಾರಗಳನ್ನು ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ. ಈಗಾಗಲೇ ಡಾ: ...ಷಣ ಮಾಡುವುದಂ ಕೃಷ್ಣನ್‌ರವರು ಮಾತನಾಡುವಾಗ ಸ್ಪಷ್ಟವಾಗಿ ಹೇಳಿದರು. ಇದಕ್ಕೆ ಹೆಸರಿಟ್ಟಿರ...ಮನಸ್ಸಿನಲ್ಲಿ ಇಟ್ಟು Karnataka Educational Institutions (Prohibition of Capit...ಭಿನ್ನಾಭಿಪ್ರಾಯವೂ Bill, 1983' ಎಂದು. ಇದರ ನಾಮಕರಣ ಬಹಳ ಚನ್ನಾಗಿದೆ. ತೊಟ್ಟಿಲಲ್ಲಿ ಹಾ... ಮೂಲಭೂತವಾಗಿ ಮಾಡಿದ್ದೀರಿ.

...ರ್ ಅವರು ಮಾತ

ಶ್ರೀ ಪಿ. ರಾಮದೇವ್.—ಅದು ನಿಮ್ಮ ಬೇಬಿ. ...ಕೃಷ್ಣನ್ ಅವರೂ

ಶ್ರೀ ಎಸ್. ಬಂಗಾರಪ್ಪ.—ಅದು ನಿಜವಾಗಿ ನನ್ನ ಬೇಬಿ ಆಗಿದ್ದರೆ, ಅದು ...ವುದಿಲ್ಲ. ಅದರಲ್ಲಿ ನಾನೇ ಅದರ ತಂದೆ ಎಂದು ಹೇಳಿಕೊಂಡು ರಾಜಕಾರಣ ಮಾಡುತ್ತಿದ್ದೆ. ಬಹುಶಃ ಬೇಬಿ ಇರಬಹುದು. ...ಹ...

ಶ್ರೀ ಪಿ. ರಾಮದೇವ್.—ಅದು ನಮ್ಮ ಬೇಬಿ ಆಗುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಇದಕ್ಕೆ ಇಟ್ಟಿರತಕ್ಕ ಹೆಸರು ಪ್ರೊಹಿಬಿಷನ್ ಆಫ್ ಕ್ಯಾಪಿಟೇಷನ್ ಫೀ ಬಿಲ್ ಎಂದು. ಇದರ ಬಗ್ಗೆ ಡಾ: ಆಚಾರ್ಯ ಅವರು ಚನ್ನಾಗಿ ಹೇಳಿದ್ದಾರೆ. ಮೊಟ್ಟಮೊದಲ ಬಾರಿಗೆ ತುತ್ತೂರಿ ತೆಗೆದುಕೊಂಡು ಕಹಳೆ ಊದಿದರು ಎನ್ನುವ ರೀತಿಯಲ್ಲಿ ಈ ಪಿಡುಗನ್ನು ತಡೆಹಿಡಿಯಬೇಕೆಂಬ ಭಾಷಣವನ್ನು ನಾವು ನೀವು ಎಲ್ಲರೂ ಮಾಡಿದ್ದೇವೆ. ಈ ಮಸೂದೆಯನ್ನು ಈ ಸದನದಲ್ಲಿ ಮಂಡನೆ ಮಾಡಿ ವಿವರಣೆ ಕೊಡತಕ್ಕ ಕಾಲದಲ್ಲಿ ವಿದ್ಯಾ ಸಚಿವರ ಪರವಾಗಿ ಲಕ್ಷ್ಮೀಸಾಗರ್‌ರವರ ಹೇಳಿದರು 'ನೀವು ಹಿಂದೆ ಇಂಥ ಮಸೂದೆಯನ್ನು ಈ ಸದನದಲ್ಲಿ ತರುವುದಕ್ಕೆ ಸಾಧ್ಯವಾಗಿರಲಿಲ್ಲ ನಾವು ಇದಕ್ಕೆ ಹೊಸ ರೂಪ ಕೊಟ್ಟು ತರುತ್ತಿದ್ದೇವೆ' ಎಂದು. ಎಂತಹ ಧೈರ್ಯ ? ಆ ಪ್ರಯತ್ನವನ್ನು ಮಾಡಿದ್ದಾರೋ ಇಲ್ಲವೋ ಆ ಪ್ರಶ್ನೆ ಬೇರೆ. ಮಾಡಿದ್ದಾರೆ, ಇದನ್ನು ಈ ಮಟ್ಟಕ್ಕೆ ತರತಕ್ಕ ಧೈರ್ಯವನ್ನು ಯಾರೂ ಮಾಡಿಲ್ಲ. ಅದನ್ನು ಬದಲಾವಣೆ ಮಾಡತಕ್ಕ ಅವಕಾಶವನ್ನು ನೋಟಿಫಿಕೇಷನ್ ಮತ್ತೊಂದು ರೂಪದಲ್ಲಿ ಕಲ್ಪಿಸಿಕೊಂಡಿದ್ದಾರೆ. ನನಗೆ ಗೊತ್ತಿರುವ ಹಾಗೆ ಎಕ್ಸಿಕ್ಯೂಟೀವ್ ಆರ್ಡರ್‌ನ್ನು ಮಾತ್ರ ಹ್ಯಾಂಡಲ್ ಮಾಡಿದ್ದಾರೆ.

ಶ್ರೀ ಪಿ. ರಾಮದೇವ್.—ಕಾನೂನನ್ನು ಜನರಲ್ ಆಗಿ ತೆಗೆದುಕೊಳ್ಳದೆ ಎಕ್ಸಿಕ್ಯೂಟೀವ್ ಆರ್ಡರ್ ಹೊರಡಿಸಿ ಸಾಕಷ್ಟು ಪ್ರಯೋಜನ ಪಡೆದು ಸದನದಲ್ಲಿ ಚರ್ಚೆಯಾಗಿದೆ.

ಶ್ರೀ ಎಸ್. ಬಂಗಾರಪ್ಪ.—ಇದರ ಲಾಭ ಕಾನೂನು ಚೌಕಟ್ಟಿನೊಳಗೆ ಏನು ಬರುತ್ತದೆ? ಎಷ್ಟು ಬರುತ್ತದೆ?

ಬರೀ ಎಗ್ಸಿಕ್ಯುಟಿವ್ ಆರ್ಡರ್ಸ್ ಮಾಡಿ ಸಂದರ್ಭ ಬಂದರೆ ಸಮಾಜದಲ್ಲಿ ತೊಡಕು ಕೆಡಕು ಬಂದಾಗ ತಕ್ಷಣ ಬದಲಾವಣೆ ಮಾಡತಕ್ಕ ಹಕ್ಕನ್ನು ಅವರು ಇಟ್ಟಿದ್ದರು. ಈಗ ನೀವು ಏನು ಮಾಡಿದ್ದೀರಿ ಸ್ವಾಮಿ? ಈ ಒಂದು ಮಸೂದೆಯನ್ನು ಮಂಡನೆ ಮಾಡತಕ್ಕ ಧೈರ್ಯಕ್ಕೆ ಹೋಗಿದ್ದೀರಿ, ಯಾವ ಧೈರ್ಯ ನಿಮ್ಮ ಹತ್ತಿರ ಇದೆ ಎಂದರೆ ಹುಚ್ಚು ಧೈರ್ಯ, ಯಮ ಧೈರ್ಯ ನಿಮಗೆ. ಚುನಾವಣೆ ಕಾಲದಲ್ಲಿ ತಾವು ಜನತೆಗೆ ಮಾತು ಕೊಟ್ಟಿದ್ದಿರಿ. ಕ್ಯಾಪಿಟೇಷನ್ ಎಂಬುದು ಸಮಾಜಕ್ಕೆ ದೊಡ್ಡ ಪಿಡುಗು, ಕಾಂಗ್ರೆಸ್ ಸರ್ಕಾರದವರು ಇದಕ್ಕೆ ಅವಕಾಶ ಕೊಟ್ಟಿದ್ದಾರೆ, ನಾವು ಅಧಿಕಾರಕ್ಕೆ ಬಂದರೆ ಇದನ್ನು ತೊಡೆದುಹಾಕುತ್ತೇವೆ. ಇದು ಇಲ್ಲದಹಾಗೆ ಮಾಡುತ್ತೇವೆ, ಇದರ ಮೂಲೋಚ್ಚಾಟನೆ ಮಾಡುತ್ತೇವೆ, ಬೇರುಸಹಿತ ಕಿತ್ತು ಬಿಸಾಕುತ್ತೇವೆ ಎಂಬ ಮಾತನ್ನು ಚುನಾವಣೆ ಕಾಲದಲ್ಲಿ ನಾವು ನೀವು ಹೇಳಿದ್ದೇವೆ.

ಶ್ರೀ ಕೆ.ಜಿ. ಮಹೇಶ್ವರಪ್ಪ.—ತೆಗೆದುಹಾಕುತ್ತೇವೆ ಎಂದು ಹೇಳಿದ್ದೆವು. ಬೇರು ಸಹಿತ ಕಿತ್ತು ಹಾಕುತ್ತೇವೆ ಎಂದು ಹೇಳಿದ್ದೆವು?

ಸ್. ಬಂಗಾರಪ್ಪ.—ರದ್ದು ಮಾಡುತ್ತೇವೆಂದರೆ ಬೇರು ಸಹಿತ ಕಿತ್ತು ಹಾಕುತ್ತೇವೆ ಎಂದೇ ತ್ತು ಗೊತ್ತಾಗುವುದಿಲ್ಲವೆ? ಬೇರು ಉಳಿಸಿಕೊಳ್ಳುತ್ತೀರಾ ಚಿಗಿರುವುದಕ್ಕೆ? ಕ್ಯಾಪಿಟೇಷನ್ ಮಾಡುತ್ತೇವೆ ಎಂಬ ಮಾತನ್ನು ಹೇಳಿದ್ದೆವು. ಶ್ರೀಮಾನ್ ಮಹೇಶ್ವರಪ್ಪನವರ ಹೋಗಿದ್ದೆವು ಆಗ.

ಾರಪ್ಪ.—ನೀವು ಪೂರ್ತಿ ಬೇರು ಸಹಿತ ತೆಗೆಯುವುದಕ್ಕೆ ತೀರ್ಮಾನ ಮಾಡಿದ್ದಿರೋ ರ್ಧ ತೆಗೆಯುವುದಕ್ಕೆ ಮಾಡಿದ್ದಿರೊ?

ಬಂಗಾರಪ್ಪ.—ನನಗೆ ಕೂಸು ಹುಟ್ಟಿದರೆ ಅದರ ತಂದೆ ನಾನೇ ಎಂದು ಹೇಳಿ ಹಕ್ಕು ಇಟ್ಟುಕೊಂಡೇ ರಾಜಕಾರಣ ಮಾಡಿದ್ದೇನೆ. ಆಗಿನ ಸರ್ಕಾರಕ್ಕೂ ನಾನು ಈ ವಿಷಯದಲ್ಲಿ, ಮಂತ್ರಿಮಂಡಲದ ಸಭೆಯಲ್ಲೂ ವಿರೋಧ ಮಾಡಿದ್ದೇನೆ, ನಿಲುವನ್ನು ಬದಲಾವಣೆ ಮಾಡುವುದಿಲ್ಲ. ಪೂರ್ವ ಪೀಠಿಕೆಯಲ್ಲೇ ನಾನು ಈ ದ್ದೇನೆ. ಮೂಲಭೂತನಾಗಿ ಈ ವಿಚಾರದ ಬಗ್ಗೆ ಒಂದೇ ಅಭಿಪ್ರಾಯವನ್ನು ು ನಾನು. ಇವತ್ತು ಪಕ್ಷದ ಪ್ರಶ್ನೆಯಲ್ಲ. ಅಧಿಕಾರದ ಪ್ರಶ್ನೆಯಲ್ಲ. ನಾವೆಲ್ಲಾ ರ ಕೊಡತಕ್ಕ ಪ್ರಶ್ನೆ ನಾಳೆ ಬರುತ್ತದೆ. ಚುನಾವಣೆ ಕಾಲದಲ್ಲಿ ಜಂಟಿಯಾಗಿ ನಾವು ಬಿಡುಗಡೆ ಮಾಡಿದಾಗ ಸ್ಪಷ್ಟವಾಗಿ ಬರೆದಿದ್ದೇವೆ; ದೇಶದ ಜನತೆಗೆ ಈ ಬಗ್ಗೆ ನಾವು ಅಧಿಕಾರಕ್ಕೆ ಬಂದರೆ ಆದಷ್ಟೂ ಒಳ್ಳೆಯ ಸರ್ಕಾರವನ್ನು ಕೊಡುತ್ತೇವೆ, ಸಾಧ್ಯ ಕ್ಷ ಮತ್ತು ದಕ್ಷ ಸರ್ಕಾರವನ್ನು ಜನತೆಗೆ ಕೊಡುತ್ತೇವೆ ಎಂದು ಹೇಳಿದ್ದೇವೆ. ಅದರ ಣಿಕತನ ಇರಬೇಕಲ್ಲ? ಸಕಾರಣ ಕೊಟ್ಟು ನಿಮಗಿರುವ ತೊಂದರೆಯನ್ನು ಹೇಳಿದರೆ ಒಪ್ಪಲಿ, ನನ್ನ ಅಭ್ಯಂತರವಿಲ್ಲ. ನಿಮ್ಮಲ್ಲಿ ಪ್ರಾಮಾಣಿಕತನ ಇಲ್ಲದೇ ಇದ್ದಾಗ ನಿಮ್ಮ ಉದ್ದೇಶದ ಬಗ್ಗೆ ಕೇಳತಕ್ಕ ಪ್ರಶ್ನೆ ಸಹಜವಾಗಿ ಉದ್ಭವವಾಗುತ್ತದೆ. ಚುನಾವಣೆ ಹೇಳಿರುವುದು ತಮಗೂ ಗೊತ್ತು ಮಾನ್ಯ ಉಪಾಧ್ಯಕ್ಷರೆ, ಕೊರಟಗೆರೆಯಲ್ಲಿ ಬಂದು ಮಾತ ದ್ದೇವೆ. ಈ ಕ್ಯಾಪಿಟೇಷನ್ ಪಿಡುಗು ಸರ್ವವ್ಯಾಪಿಯಾಗಿರತಕ್ಕದ್ದು. ೧೯ ಜಿಲ್ಲೆಯನ್ನೂ ಸಿಕೊಂಡಿದೆ. ಇವತ್ತು ಬಂಡವಾಳ ಶಾಹಿಗಳ ಮಕ್ಕಳು ಮಾತ್ರ ಡಾಕ್ಟರುಗಳು ಇಂಜಿನಿಯರುಗಳು ಆಗುತ್ತಿದ್ದಾರೆಂಬುದನ್ನು ಮರೆಯಬೇಡಿ. ೧೦೦ ಸೀಟುಗಳಲ್ಲಿ ೭೫ ಸೀಟುಗಳು ಮ್ಯಾನೇಜ್‌ಮೆಂಟಿಗೆ, ಇನ್ನು ೨೫ರಲ್ಲಿ ೧೦ ಸೀಟು ಮೆರಿಟ್ ಪ್ರಕಾರ, ಫ್ರೀ ಸೀಟುಗಳು ೧೫ ಹೀಗೆ ವ್ಯತ್ಯಾಸ ಮಾಡಬಹುದು. ಟಿಫಿಕೇಷನ್ ಇಷ್ಯೂ ಮಾಡಿ ಮಧ್ಯೆ ಮಧ್ಯೆ ಸೀಟುಗಳನ್ನು ಕೊಡುವುದಕ್ಕೆ ಸಂಪೂರ್ಣ ಅಧಿಕಾರ ಸರ್ಕಾರದವರು ಇಟ್ಟುಕೊಂಡಿದ್ದೀರಿ. ಅದನ್ನು ೫ ಮಾಡಬಹುದು, ೫೦ ಮಾಡಬಹುದು, ೨ ಡಬಹುದು, ಮನಸ್ಸಿಗೆ ಬಂದಹಾಗೆ ಮಾಡಬಹುದು. ಪೂರ್ಣ ಅಧಿಕಾರವನ್ನು ತಾವಿಟ್ಟು ಡಿದ್ದೀರಿ. ಮಾನ್ಯ ಉಪಾಧ್ಯಕ್ಷರೂ ಕೂಡ ವಕೀಲರು, ತಾವು ಅರ್ಥ ಮಾಡಿಕೊಳ್ಳಬೇಕು. ಹಣ ಕ್ಕ ಶಕ್ತಿ ಇರುವವರು ಯಾರು ಎಂಬುದನ್ನು ಯೋಚನೆ ಮಾಡಬೇಕು. ಬಡತನದ ರೇಖೆಗಿಂತ

ಕೆಳಗಡೆ ಇರುವವರ ಪ್ರಮಾಣ ಎಷ್ಟು? ಬಡತನ ರೇಖೆ ಬಿಟ್ಟರೂ ಕೂಡ ಕ್ಯಾಪಿಟೇಷನ್ ರೇಖೆ ಬೇರೆ, ಬಡತನದ ರೇಖೆ ಒಂದು ರೀತಿಯಾದರೆ ಕ್ಯಾಪಿಟೇಷನ್ ರೇಖೆ ಬೇರೆ, ಅದನ್ನು ದಾಟಿ ಹೋಗಿ ನಿಂತು ಕ್ಯಾಪಿಟೇಷನ್ ಫೀಸ್ ಕೊಟ್ಟು ತನ್ನ ಮಗಳನ್ನು ಅಥವಾ ಮಗನನ್ನು ಡಾಕ್ಟರು ಇಂಜಿನಿಯರನ್ನಾಗಿ ಮಾಡಬೇಕಾಗುತ್ತದೆ. ಒಪ್ಪತ್ತಿಗೆ ರೊಟ್ಟಿ ಇಲ್ಲ ಎನ್ನತಕ್ಕ ಜನರಿರುವ ಸಮಾಜ ಪರಿಸ್ಥಿತಿ ಗೊತ್ತಿದ್ದರೂ ಶಕ್ತಿವಂತ ವರ್ಗದ ಬಗ್ಗೆ ನಾವು ನೀವು ಭಾಷಣ ಮಾಡಬೇಕಾಗಿಲ್ಲ. ಶಕ್ತಿವಂತ ವರ್ಗದವರು ಹೇಗೋ ಸೀಟುಗಳನ್ನು ಪಡೆಯುತ್ತಾರೆ. ಅದನ್ನು ಬಿಟ್ಟುಬಿಡೋಣ. ನಮ್ಮ ಯೋಚನೆ ಏನಿರಬೇಕು ಎಂದರೆ ಯಾರು ನಿರ್ಭಾಗ್ಯರಿದ್ದಾರೆ, ಆರ್ಥಿಕವಾಗಿ ಹಿಂದುಳಿದಿರುವವರಿದ್ದಾರೆ ಅವರ ಬಗ್ಗೆ ಇರಬೇಕು, ಎಲ್ಲ ಜಾತಿಯಲ್ಲೂ ಆರ್ಥಿಕವಾಗಿ ಹಿಂದಿರುವವರಿದ್ದಾರೆ. ಬಡವರಿದ್ದಾರೆ. ಆ ವರ್ಗಕ್ಕೆ ಊರುಗೋಲಾಗಿರುವ ಹಾಗೆ ನಿಲ್ಲಬೇಕು. ಅದು ಸರ್ಕಾರದ ನೀತಿಯಾಗಿರಬೇಕು. ಅಂಥ ವಿಚಾರಧಾರೆ ಹೊಂದದೆ ಕಾನೂನನ್ನು ಮಾಡಿದರೆ ಆಗ ಸಮಾಜದಲ್ಲಿರತಕ್ಕ ಬಂಡವಾಳ ಶಾಹಿಗಳ ಮಕ್ಕಳು ಡಾಕ್ಟರು, ಇಂಜಿನಿಯರು ಆಗತಕ್ಕ ಅವಕಾಶವನ್ನು ಕಲ್ಪಿಸಿಕೊಡುತ್ತಿದ್ದೀರಿ ಎಂಬ ಭಾವನೆ ಬರುತ್ತದೆ. ಆಗ ಸಹಜವಾಗಿ ಸಾಮಾನ್ಯ ಜನರ ಆಕ್ರೋಶ ಅಥವಾ ಅಸಂತೋಷಕ್ಕೆ ನಾವು ನೀವು ಕಾರಣರಾಗತಕ್ಕ ಸಂದರ್ಭ ಬರುತ್ತದೆ. ಈ ಕ್ಯಾಪಿಟೇಷನ್ ಫೀಸನ್ನು ತೆಗೆದುಹಾಕುವ ಕೆಲಸ ಯಾರು ಮಾಡುತ್ತಾರೆ ಅವರು ಒಳ್ಳೆಯ ಆಡಳಿತಗಾರರು, ಒಳ್ಳೆಯ ಆಡಳಿತ ಕೊಡುವ ಪಕ್ಷ ಎಂದು ಪರಿಗಣಿಸಬ ಬಗ್ಗೆ ವಿಚಾರ ಮಾಡೋಣ. ನನ್ನ ೧೬ ವರ್ಷಗಳ ಅನುಭವದಲ್ಲಿ ಅನೇಕ ಪಾಸಾಗಿರುವುದನ್ನು ಕಂಡಿದ್ದೇನೆ. ೧೯೬೭ನೇ ಸಾಲಿನಿಂದ ಸದಸ್ಯನಾಗಿ ನಾನು ನೋ ವೊಮ್ಮೆ ಬ್ರೂಟ್ ಮೆಜಾರಿಟಿ ಇರಬಹುದು, ಇನ್ನು ಕೆಲವೊಮ್ಮೆ ಸಿಂಪಲ್ ಮೆಜಾ ಮಸೂದೆಗಳು ಪಾಸಾಗುತ್ತವೆ. ಕೆಲವೊಮ್ಮೆ ವಿಪ್ ಇದ್ದು ಆ ಕಾರಣದಿಂದ ಕೆ ಬರುತ್ತದೆ, ಆದರೆ ನಂತರ ನೋವಿನಲ್ಲಿ ನರಳುತ್ತಿರತಕ್ಕ ಜನರ ಪರಿಸ್ಥಿತಿ ಉತ್ತರ ಕೊಡುವುದು ಸಂಬಂಧಪಟ್ಟ ಶಾಸಕರಿಗೆ ಕಷ್ಟವಾಗುತ್ತದೆ. ಇಲ್ಲಿ ಭಾ ಸುಲಭ. ಆದರೆ ಜನಸಾಮಾನ್ಯರಿಗೆ ಉತ್ತರ ಕೊಡುವುದು ಕಷ್ಟ ಎಂಬುದನ್ನು ಕೊಳ್ಳಬೇಕಾಗುತ್ತದೆ. ಕ್ಯಾಪಿಟೇಷನ್ ಪಿಡುಗನ್ನು ತೊಡೆದುಹಾಕುವಲ್ಲಿ ಯಾರ ಇಲ್ಲ. ಆದರೆ ಆ ಹೆಸರಿನಲ್ಲಿ ಮಾಡತಕ್ಕ ಇಂಥ ಒಂದು ಕಾರ್ಯಕ್ರಮವನ್ನು ನಾವು ವಿರೋಧ ಮಾಡಬೇಕಾಗುತ್ತದೆ. ಈಗಾಗಲೇ ಈ ವಿಷಯದಲ್ಲಿ ಮಾನ್ಯ ಆಚಾರ್ಯ ನಾಡಿದ್ದಾರೆ, ವೀರಪ್ಪ ಮೊಯಿಲಿಯವರು ಮಾತನಾಡಿದ್ದಾರೆ, ಮತ್ತು ಎಂ. ಎಸ್. ಮಾತನಾಡಿ ವಿವರವಾಗಿ ಹೇಳಿದ್ದಾರೆ. ಪುನ: ನಾನು ಅದನ್ನೇ ರಿಪೀಟ್ ಮಾಡ ನನಗೆ ಆಸಕ್ತಿ ಇಲ್ಲ.

ಶ್ರೀ ಕೆ.ಬಿ. ಮಲ್ಲಪ್ಪ.—ಮಾನ್ಯ ಬಂಗಾರಪ್ಪನವರು ಈ ಮಸೂದೆ ಬಗ್ಗೆ ತಮ್ಮ ವಿಚಾರಧಾರೆಯನ್ನು ಹರಿಸಿದ್ದಾರೆ. ಬಹಳ ಸಂತೋಷ. ಕ್ಯಾಪಿಟೇಷನ್ ಫೀ ವುದರಲ್ಲಿ ನಮಗೆ ಮತ್ತು ಅವರಿಗೆ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಕ್ಯಾಪಿಟೇಷ ಮಾಡುವುದು ಒಂದು ಕಡೆ. ಇನ್ನೊಂದು ಕಡೆ ಬಡವರು, ದಲಿತವರ್ಗದವರು ಏನಿ ಸಹಾಯ ಮಾಡುವಂಥ ಮಸೂದೆಯನ್ನು ತರಬೇಕೆನ್ನುವುದು ಎರಡನ್ನೂ ಮಾಡ ರೋಸ್ಟರ್ ಪದ್ಧತಿ ಪ್ರಕಾರ ಸೀಟ್ ಹಂಚುತ್ತೇವೆ. ೧೮ ಪರ್ಸೆಂಟ್ ಪ್ರಕಾರ ದಲಿತ ಸೀಟುಗಳನ್ನು ಹಂಚುವಾಗ ಆ ಸಮಾಜದಲ್ಲಿ ಮುಂದುವರೆದ ಜನಾಂಗದವರೆ ಅನುಕೂಲವ ಅದು ಹೇಗೆ ಎಂದರೆ ಉದಾಹರಣೆಗೆ ರಾಚಯ್ಯನವರು ೧೮ ಪರ್ಸೆಂಟ್ ವರ್ಗಕ್ಕೆ ಸೇರಿದ ಸಮಾಜ

ಶ್ರೀ ಎಚ್. ಗಂಗಾಧರನ್.—ನಿಮ್ಮ ಪ್ರಶ್ನೆ ಏನು?

ಶ್ರೀ ಕೆ. ಬಿ. ಮಲ್ಲಪ್ಪ.—ನನ್ನ ಪ್ರಶ್ನೆ ಇಷ್ಟು. ಮಾನ್ಯ ಬಂಗಾರಪ್ಪನವರಿಗೆ ಒಂದು ಕ್ಯಾಪಿಟೇಷನ್ ಫೀ ರದ್ದು ಮಾಡಬೇಕು ಮತ್ತೊಂದು ಕಡೆ ಬಡವರಿಗೆ ಸಹಾಯ ಮಾಡಬೇಕು ಅಭಿಪ್ರಾಯ ಇದ್ದರೆ ಅದನ್ನು ಯಾವರೀತಿ ಮಾಡಬಹುದು ಯಾವರೀತಿ ತಿದ್ದುಪಡಿ ತರಬ ಎಂಬುದನ್ನು ಹೇಳಲಿ.

ಬಡವರು ಯಾರಿದ್ದಾರೆ, ತುಳಿತಕ್ಕೆ ಸಿಲುಕಿರುವ ದಲಿತವರ್ಗದವರು ಯಾರಿದ್ದಾರೆ ಅವರಿಗೆ ಮಾಡಬಹುದು ಎನ್ನುವ ಬಗ್ಗೆ ತಮ್ಮ ಸಲಹೆಯನ್ನು ಕೊಡುತ್ತೀರಾ ?

ಶ್ರೀ ಪಂಪಾಪತಿ.—ಅವರು ಆಡಿದ್ದನ್ನು ಮಾಡಿದರೆ ಬಹಳ ದೊಡ್ಡದಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸದಸ್ಯರು ಏನೊಂದು ವಿವರವಾಗಿ ಒಂದು ಸಲಹೆಯನ್ನು ಕೇಳಿದ್ದಾರೆ ಅದಕ್ಕೆ ನಾನು ಒಂದು ಸಿಂಪಲ್ಲಾದ ಉತ್ತರವನ್ನು ಕೊಡಬೇಕು ಎಂದರೆ, ಕೋರ್ಟ್, ಕಾನೂನು ಮತ್ತೊಂದು ಪ್ರಶ್ನೆ ಆಮೇಲೆ. ಅದನ್ನು ಯಾವ ರೀತಿ ಪರಿಹಾರ ಮಾಡಬಹುದು ಎನ್ನುವುದನ್ನು ಸದನದ ಗಮನಕ್ಕೆ ತರಲಿ. ನಾನು ಈ ಬಗ್ಗೆ ಸ್ಪಷ್ಟವಾಗಿ ಹೇಳುತ್ತೇನೆ. ಈ ಕ್ಯಾಪಿಟೇಷನ್ ಶುಲ್ಕದ ಪದ್ಧತಿಯನ್ನು ತೊಡೆದು ಹಾಕಬೇಕೆನ್ನುವ ಬಗ್ಗೆ ಈ ಸದನದಲ್ಲಿ ಯಾರಲ್ಲೂ ಭಿನ್ನಾಭಿಪ್ರಾಯ ಇಲ್ಲದೇ ಇರುವುದರಿಂದ, ಅದನ್ನು ತೊಡೆದುಹಾಕುವ ಬಗ್ಗೆ ಅವರು ಧೈರ್ಯಮಾಡಿ ಕಾನೂನನ್ನು ತಂದರೆ ನಾವೆಲ್ಲೂರೂ ಒಕ್ಕೊರಲಿನಿಂದ ಬೆಂಬಲ ಕೊಡುವುದಕ್ಕೆ ಸಿದ್ಧರಿದ್ದೇವೆ. ಈ ಬಗ್ಗೆ ಅವರು ಪ್ರತ್ಯೇಕ ಬಿಲ್ಲನ್ನೇನೂ ತರಬೇಕಾಗಿಲ್ಲ. ಈ ಬಿಲ್‌ನಲ್ಲಿರುವ ೩ನೇ ಪ್ರಾವಿಸೋವನ್ನು ತಿದ್ದುಪಡಿ ಮಾಡಿದರೆ ಬಹಳ ಸುಲಭವಾಗುತ್ತದೆ. ಆಗ ಒಂದುನಿಮಿಷದಲ್ಲಿ ಅದನ್ನು ಪಾಸ್ ಮಾಡಿಕೊಡುತ್ತೇವೆ. ಮಾನ್ಯ ಸದಸ್ಯರಿಗೆ ಹೇಳುತ್ತೇನೆ. ಪರಿಸ್ಥಿತಿ ಏನಾಗಿದೆ, ಅದರ ಆಳ ಏನು ಎಂಬುದು ಅವರಿಗೆ ಗೊತ್ತೋ ಇಲ್ಲವೊ ಎಂದು. ಇದರ ಪರಿಣಾಮ ಬಹಳ ವಿಪರೀತವಾಗಿದೆ. ಇದು ವಿಷಯನ್ನು ಬಹಳ ದೂರ ತೆಗೆದುಕೊಂಡು ಹೋಗುತ್ತದೆ. ಅದನ್ನು ತಾವು ಒಪ್ಪುತ್ತೀರಿ.

ಶ್ರೀ ಕೆ. ಬಿ. ಮಲ್ಲಪ್ಪ.—ಈ ಬಿಲ್ಲಿಗೆ ಏನು ಆಗುತ್ತದೆಂದು ನಮಗೂ ಗೊತ್ತಿದೆ. ಆದರೂ ತಮಗೆ ೧೬ ವರ್ಷಗಳ ಅನುಭವ ಇದೆ ಎಂದು ಹೇಳಿದಿರಿ. ಆ ೧೬ ವರ್ಷಗಳ ಅನುಭವವನ್ನು ಸ್ವಲ್ಪ ನಮಗೆ ಕೊಡಿ. ಏನು ಮಾಡಬೇಕೆಂಬುದನ್ನು ಹೇಳಿ.

SRI K. G. MAHESWAPPA.—Under the present circumstances, please suggest a sample draft bill to abolish the capitation fees.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಮಹೇಶ್ವರಪ್ಪನವರು ಸ್ಯಾಂಪಲ್ ಬಿಲ್ಲನ್ನು ಕೇಳುತ್ತಿದ್ದಾರೆ. ನಮ್ಮ ಹತ್ತಿರ ಬಿಲ್ಲುಗಳೂ ಇವೆ ಹಾಗೂ ಬಾಣಗಳೂ ಇವೆ.

ಶ್ರೀ ಕೆ. ಜಿ. ಮಲ್ಲಪ್ಪ.—ವಾಸ್ತವಾಂಶಗಳು ವಿಚಾರ ಮಾಡುವುದಕ್ಕೆ ಅವಕಾಶ ಕೊಡಿ.

† ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ. ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗೆ ನೇರವಾಗಿ ಉತ್ತರವನ್ನು ಕೊಡುವುದು ಒಳ್ಳೆಯದು. ಸೆಕ್ಷನ್‌ವೈಸ್ ವ್ಯಾಖ್ಯಾನ ಮಾಡುತ್ತಾ ಹೋದರೆ ಕಾಲ ಹೆಚ್ಚು ಬೇಕಾಗುತ್ತದೆ. ಏಕೆಂದರೆ ಈ ಬಗ್ಗೆ ಇಬ್ಬರು ಮಾನ್ಯ ಸದಸ್ಯರು ಕೇಳಿದ್ದಾರೆ. ನಿಮಗೆ ಏನಾದರೂ ಜನವರಿ ತಿಂಗಳಲ್ಲಿ ನೀವು ಜನತೆಗೆ ಕೊಟ್ಟಿರತಕ್ಕ ಮಾತನು ಉಳಿಸಿಕೊಳ್ಳಬೇಕೆಂದಿದ್ದರೆ, ಪ್ರಜಾಪ್ರಭುತ್ವದ ಚೌಕಟ್ಟಿನಲ್ಲಿ ನಿಮಗೆ ನಂಬಿಕೆ ಇದ್ದಿದ್ದರೆ ನೀವು ಎಂದೂ ಈ ರೀತಿಯ ಬಿಲ್ಲನ್ನು ತರುತ್ತಿರಲಿಲ್ಲ. ಮೆಡಿಕಲ್ ಹಾಗೂ ಎಂಜಿನಿಯರಿಂಗ್ ಕಾಲೇಜುಗಳನ್ನು ಯಾರು ಖಾಸಗಿಯಾಗಿ ನಡೆಸುತ್ತಿದ್ದಾರೆ ಅವನ್ನೆಲ್ಲಾ ಸರ್ಕಾರವೇ ತೆಗೆದುಕೊಂಡಿದೆ, ಸಾಮಾಜಿಕ ನ್ಯಾಯ ದೊರಕಿಸಿಕೊಡುವ ದೃಷ್ಟಿಯಿಂದ ಇದನ್ನು ಮಾಡುತ್ತಿದ್ದೇವೆ, ಕ್ಯಾಪಿಟೇಷನ್ ಶುಲ್ಕದ ವಾತಾವರಣವನ್ನು ನಿರ್ನಾಮ ಮಾಡಿದ್ದೇವೆ ಎಂದು ತಾವು ಜನವರಿಯಲ್ಲೇ ಆರ್ಡಿನೆನ್ಸ್‌ನ್ನು ತರಬೇಕಾಗಿತ್ತು. ಇಷ್ಟು ತಂದಿದ್ದರೆ ಅದು ಸಾಕಾಗುತ್ತಿತ್ತು. ಈ ಮಾತನ್ನು ಹೇಳಿಲ್ಲ. ಹಣಕಾಸಿನ ಪರಿಣಾಮ ಏನಾಗುತ್ತದೆಂಬುದನ್ನು ಬಿಡಿ. ಇವತ್ತು. ನಿಮ್ಮ ಮನಸ್ಸಿನಲ್ಲಿ ಏನಿದೆ ಎಂಬುದನ್ನು ಆರ್ಡಿನೆನ್ಸ್ ಮೂಲಕ ತೆಗದುಕೊಂಡು ಬನ್ನಿ. You please withdraw this Bill. ಆ ಬಗ್ಗೆ ನಾಳೆ ಖಾಸಗೀ ಸಂಸ್ಥೆಯವರು ಕೋರ್ಟಿಗೆ ಹೋದರೆ let us test it in the Court of Law. ನಾವು ಟೆಸ್ಟ್ ಮಾಡೋಣ. ಹಣಕಾಸಿನ ಪರಿಸ್ಥಿತಿ ಸರಿಯಿಲ್ಲವೆಂದು ಹೇಳುತ್ತೀರಿ. ಹಿಂದಿನ ಸರ್ಕಾರದಲ್ಲೂ ಹಣಕಾಸಿನ ಸರಿಯಿಲ್ಲವಾದ್ದರಿಂದ ಅದನ್ನು ಮಾಡಿಲ್ಲವೆಂದು ಹಿಂದಿನ ಸರ್ಕಾರದಲ್ಲಿ ಅರ್ಥ ಮಂತ್ರಿಗಳಾಗಿದ್ದ ಮಾನ್ಯ ವೀರಪ್ಪ ಮೊಯ್ಲಿಯವರು ಹೇಳಿದ್ದಾರೆ. ಸಮಾಜದಲ್ಲಿ ಹತ್ತಾರು ಕಾರ್ಯಕ್ರಮಗಳನ್ನು ಎತ್ತಿಕೊಂಡಾಗ ಅವಕ್ಕೆ ಹಣ ಬೇಕಾಗಿದ್ದು ಅದನ್ನು through taxes or through some other means. resources could be found out. ಈ ರೀತಿ ಸೂಚಿಸತಕ್ಕದ್ದು ನಮ್ಮ ಕರ್ತವ್ಯವೆಂದು ಸ್ಪಷ್ಟವಾಗಿ ಹೇಳಬಯಸುತ್ತೇನೆ. ನಾಳೆ ಇವನ್ನೆಲ್ಲಾ ಸರ್ಕಾರಕ್ಕೆ ವಹಿಸಿಕೊಂಡಾಗ ಹಣ ಯಾವ ರೀತಿ ಹೂಡಿಕೆ ಮಾಡಬೇಕೆಂಬುದರ ಬಗ್ಗೆ ತಾವು ತಿಳಿಸಿ, ಅದಕ್ಕೆ ನಾವು ಬೆಂಬಲ ಕೊಡುತ್ತೇವೆ. ಈ ಬಗ್ಗೆ ನನ್ನ ಸಲಹೆಯನ್ನು ಸರ್ಕಾರ ತೆಗೆದುಕೊಳ್ಳಬೇಕು. ಹಿಂದೆ ಶ್ರೀಮಾನ್ ದೇವರಾಜ ಅರಸ್‌ರವರು

ಖಾಸಗೀ ಬಸ್‌ಗಳನ್ನು ರಾಷ್ಟ್ರೀಕರಣ ಮಾಡಿದಾಗ ವಿಷಯ ಸುಪ್ರೀಮ್ ಕೋರ್ಟಿನವರೆಗೆ ಹೋಗಿ ಅಲ್ಲಿಯೂ ರಾಜ್ಯ ಸರ್ಕಾರವೇ ಗೆದ್ದಿತು. ಈವತ್ತು ಆ ಬಸ್‌ಗಳು ಓಡಾಡುತ್ತಿವೆ, ಬಹುಶಃ ಈ ವಿಷಯದಲ್ಲಿ ಕೋರ್ಟಿಗೆ ಹೋದರೂ ಕೂಡ ಸಾಮಾಜಿಕ ನ್ಯಾಯ ದೊರೆಯುವ ವಿಷಯದಲ್ಲಿ ಕೋರ್ಟಿನವರೂ ವಿರೋಧವಾಗುತ್ತಾರೆಂದು ನಾನು ಭಾವಿಸುವುದಿಲ್ಲ. ನಿಮಗೆ ಏನಾದರೂ ಆ– ಆಕಾಂಕ್ಷೆ ಇದ್ದು ಸಾಮಾಜಿಕ ಸೇವೆ ಮಾಡಬೇಕು, ಈ ಪಿಡುಗನ್ನು ತೊಡೆದುಹಾಕಬೇಕು ಎಂದು ಆಸೆ ಇದ್ದರೆ ಈ ರೀತಿಯಾದ ಮಸೂದೆಯನ್ನು ಸದನದ ಒಪ್ಪಿಗೆಗೆ ತರುತ್ತಾ ಇರಲಿಲ್ಲ. ನಾನು ಹೇಳಿದಹಾಗೆ ನೀವು ಮಾಡುತ್ತೀರೋ ಅಥವಾ ಹಿಂದಿನ ಸರ್ಕಾರದವರು ಮಾಡಿದ್ದನ್ನೇ ಮುಂದುವರಿಸಿಕೊಂಡು ಹೋಗುತ್ತೀರೋ ? ೨೦.೬.೧೯೭೩ ಹಾಗೂ ೭.೭.೧೯೭೩ರಂದು ಎರಡು ನೋಟಿಫಿಕೇಷನ್‌ಗಳನ್ನು ತಂದು ಅವತ್ತಿನಿಂದ ಆಕ್ಟ್ ಜಾರಿಗೆ ಬಂದಿದೆಯೆಂದು ಹೇಳಿದ್ದೀರಿ. ಈ ರೀತಿಯ ಮಸೂದೆ ತರುವುದಕ್ಕೆ ಸಾಧ್ಯವಿಲ್ಲ. ನಿಮಗೆ ಅವರ ಮೇಲೆ ವ್ಯಾಖ್ಯಾನ ಮಾಡುವುದಕ್ಕೆ, ಒಂದುವೇಳೆ ವ್ಯಾಖ್ಯಾನ ಮಾಡುವುದಕ್ಕೆ ಇಂತಹ ಮಸೂದೆ ತರುವುದಕ್ಕೆ ಏನು ಹಕ್ಕು ಇದೆ, ತಾವು ಕೊಟ್ಟಿರತಕ್ಕ ಮಾತು ಏನು ? ಹಿಂದಿನ ಸರ್ಕಾರದವರೂ ೫ ವರ್ಷಗಳಲ್ಲಿ ತೊಡೆದು ಹಾಕುತ್ತೇವೆಂದು ಹೇಳಿದ್ದರು ನೀವೂ ಕೂಡಾ ೫ ವರ್ಷಗಳಲ್ಲಿ ಇದನ್ನು ತೊಡೆದು ಹಾಕುತ್ತೇವೆಂದು ಹೇಳುತ್ತಿದ್ದೀರಿ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಅವರು ೫ ವರ್ಷಗಳಲ್ಲಿ ಮಾಡುತ್ತೇವೆಂದು ಹೇಳಿಲ್ಲ. ಸಂಪೂರ್ಣವಾಗಿ ತಕ್ಷಣವೇ ಕ್ಯಾಪಿಟೇಷನ್‌ನ್ನು ನಿರ್ಮೂಲನ ಮಾಡುತ್ತೇವೆಂದು ಹೇಳಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಇವತ್ತು ದೇಶದ ಜನರು ಚೆನ್ನಾಗಿ ತಿಳಿದುಕೊಂಡಿದ್ದಾರೆ. ನೀವು ನಿರ್ಮೂಲನ ಮಾಡುತ್ತೀರೆಂದು ಅವರು ಅಧಿಕಾರವನ್ನು ನಿಮ್ಮ ಕೈಗೆ ಕೊಟ್ಟರು. ತಾವು ಕೊಟ್ಟ ಮಾತನ್ನು ನಡೆಸಿ. ತಾವು ಕೊಟ್ಟ ಮಾತುಗಳು ಇನ್ನೂ ಬಹಳ ಇವೆ. ಕೊಟ್ಟ ಮಾತುಗಳನ್ನು ಕೆಲವು ಜನರು ಓದಿಲ್ಲವೆಂದು ಕಾಣುತ್ತದೆ. ಏನು ಪ್ರಕಾಶ್‌ರವರೇ ತಾವು ಓದಿದ್ದೀರಾ ? ಅದನ್ನು ಓದುವುದಕ್ಕೆ ತಮಗೆ ಎಲ್ಲಿ ಪುರುಸೊತ್ತು ಇದೆ.

ಶ್ರೀ ಕೆ. ಜಿ. ಮಹೇಶ್ವರಪ್ಪ.—ಶ್ರೀಮತಿ ಇಂದಿರಾಗಾಂಧಿಯವರು ಬಡತನ ನಿರ್ಮೂಲನ ಮಾಡುತ್ತೇವೆಂದೂ, ಗರೀಬಿ ಹಠಾವೋ ಮಾಡುತ್ತೇವೆಂದು ಹೇಳಿದರು.

ಶ್ರೀ ಎಸ್. ಬಂಗಾರಪ್ಪ.—ಅಗು ಹಳೇ ರಾಗ.

ಶ್ರೀ ಎ. ಲಕ್ಷ್ಮೀಸಾಗರ್.—ಕರ್ನಾಟಕ ಸಂಗೀತ ಶಾಸ್ತ್ರದಲ್ಲಿ ಮೇಳಕರ್ತ ರಾಗ, ಜನ್ಯರಾಗ, ಜನಕರಾಗ ಎಂದು ಇವೆ ಇವು ಯಾಗಲೂ ಉಳಿಯುತ್ತವೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಇವರು ಜನವರಿಯಲ್ಲಿ ಶುದ್ಧ ಕಲ್ಯಾಣಿರಾಗ, ಶಂಕರರಾಗ ಹಾಡಿ ಅಧಿಕಾರಕ್ಕೆ ಬಂದರು. ಅಧಿಕಾರಕ್ಕೆ ಬಂದ ಕೂಡಲೇ ಗಾರ್ದಭರಾಗ, ಸಂಚೇಮಿನಿ ರಾಗ ಹಾಡಲಿಕ್ಕೆ ಶುರು ಮಾಡಿದ್ದಾರೆ.

ಶ್ರೀ ಕೆ. ಹೆಚ್. ರಂಗನಾಥ್.—ಅವರು ಹೇಳಿದ್ದು ಗಾರ್ದಭ ರಾಗ.

ಶ್ರೀ ಎ. ಲಕ್ಷ್ಮೀಸಾಗರ್.—ನಾವು ಧನ ರಾಗವನ್ನೇ ಹಾಡುತ್ತಿದ್ದೇವೆ,

ಶ್ರೀ ರಾಮಯ್ಯ.—ಮಾನ್ಯ ಬಂಗಾರಪ್ಪನವರದು ಯಾವರಾಗ ಎಂದು ನಾವು ಕೇಳಬೇಕಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ನಿಮ್ಮನ್ನು ಹಾಡಲಿಕ್ಕೆ ಹಚ್ಚಿದ್ದೇವೆ. 'ಡಿಸ್ಕ್ರಿಷನರಿ' ಎನ್ನುವ ಪದದ ಬಗ್ಗೆ ಮಾನ್ಯ ಬೊಮ್ಮಾಯಿಯವರು, ಲಕ್ಷ್ಮೀಸಾಗರ್‌ರವರು, ದೇವೇಗೌಡರು ದೊಡ್ಡ ದೊಡ್ಡ ವ್ಯಾಖ್ಯಾನ ಮಾಡಿದ್ದಾರೆ. ಆದರೇ, ಇವತ್ತು ಸರ್ಕಾರ ತನ್ನ ಮನಸ್ವೇಚ್ಛೆಯಾಗಿ ನಡೆದುಕೊಂಡಿದೆ. ಇಡೀ ಸಮಾಜದಲ್ಲಿ ಮೂಲಭೂತವಾಗಿ ಈ ಒಂದು ಪಿಡುಗನ್ನು ಹೋಗಲಾಡಿಸುವಂಥ ಮಾತನ್ನು ಕೊಟ್ಟಿದ್ದಿರಿ. ತಮಗೆ ವ್ಯಾಖ್ಯಾನ ಮಾಡತಕ್ಕಂಥ ಶಕ್ತಿ ಇದ್ದರೂ ಇವತ್ತು ಅಲ್ಲಿಗೆ ಹೋದಮೇಲೆ ಸುಸ್ತಾಗಿದ್ದೀರಿ.

ಶ್ರೀ ಎ. ಲಕ್ಷ್ಮೀಸಾಗರ್.—ಸುಸ್ತು ಎನ್ನುವ ಶಬ್ಧ ನನ್ನ ಡಿಕ್ಷನರಿಯಲ್ಲಿಯೇ ಇಲ್ಲ. ನಾನು ಶಿಸ್ತಿನಿಂದ ಬೆಳೆದವನು.

ಶ್ರೀ ಎಸ್. ಬಂಗಾರಪ್ಪ.—ಮಂತ್ರಿಮಂಡಲದಲ್ಲಿ ಕೊನೆಯ ಪಕ್ಷ ದೇಶದ ಜನತೆಗೆ ಕೊಟ್ಟಿರತಕ್ಕಂಥ ಮಾತಿನ ಅನುಗುಣವಾಗಿ ತೀರ್ಮಾನ ಮಾಡಬೇಕೆಂಬ ಅಂಶದ ಅರ್ಥವನ್ನು ಗ್ರಹಿಸತಕ್ಕಂಥ ಕೆಲವರಾದರೂ ಇದ್ದಾರೆಂಬ ಭಾವನೆಯನ್ನು ಇಟ್ಟುಕೊಂಡಿದ್ದೆ. ಆದರೆ ನೀವುಗಳು ತೀರ್ಮಾನ ಮಾಡಿ, ಈ ಒಂದು

ಮಸೂದೆಯನ್ನು ತರುವಂಥ ಜವಾಬ್ದಾರಿಯನ್ನು ಮಾನ್ಯ ಲಕ್ಷ್ಮೀಸಾಗರ್‌ರವರು ವಹಿಸಿ ಕೊಂಡಿರುವುದನ್ನು ನೋಡಿದರೆ, ಕೆಲವರ ವ್ಯವಹಾರಕ್ಕೆ ಬಲಿ ಬಿದ್ದಿದ್ದಾರೆಂಬುದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಅನಿವಾರ್ಯವಾಗಿ ಬಲಿ ಬಿದ್ದಿರಬೇಕು.

ಶ್ರೀ ಜಿ. ಎನ್. ನಾಯಕ.—ಸಚಿವರುಗಳು ಅಧಿಕಾರದ ಆಸೆ ಇಟ್ಟುಕೊಂಡು ಮುಖ್ಯ ಮಂತ್ರಿಯವರು ಏನು ಹೇಳುತ್ತಾರೆ ಅದಕ್ಕೆಲ್ಲಾ ರುಜು ಹಾಕುತ್ತಾರೆ.

ಶ್ರೀ ಕೆ. ಜಿ. ಮಹೇಶ್ವರಪ್ಪ —ಬಿಳಿ ಕಾಗದದಲ್ಲಿ ಸೈನ್ ಮಾಡಿಕೊಟ್ಟಿದ್ದರಲ್ಲ.

ಶ್ರೀ ಎಸ್. ಬಂಗಾರಪ್ಪ —ಮಾನ್ಯ ಅಧ್ಯಕ್ಷರೇ, ಹೆಲಿಕ್ಯಾಪ್ಟರ್ ಒಳ್ಳೆಯ ಕೆಲಸಕ್ಕೆ ಬಳಸಲಿ ನಾನು ಅದನ್ನು ಬೇಡವೆಂದು ಹೇಳುವುದಿಲ್ಲ. ಅದನ್ನು ಬಳಸುವುದಕ್ಕೆ ಸಕಾರಣ ಇರಬೇಕು. ಅವರೇನೂ ಉಪಯೋಗಿಸುವುದಿಲ್ಲವೆಂದು ಬರೆದುಕೊಟ್ಟಿಲ್ಲ. ನೀವು ಕೊಟ್ಟಿರತಕ್ಕಂಥ ಮಾತುಗಳನ್ನು ಪ್ರಾಮಾಣಿಕ ಪ್ರಯತ್ನದಿಂದ ಈ ಮಸೂದೆಯಲ್ಲಿ ಬರಬೇಕಾಗಿತ್ತು, ಅದು ಬಂದಿಲ್ಲ, ಇದಕ್ಕೆ ಇಟ್ಟಿರತಕ್ಕ ಹೆಸರು ಹೇಗಿದೆ ಅಂದರೆ ನಮ್ಮ ರಾಮಪ್ಪನವರು ಹೇಳಿದ ಹಾಗೆ "ಸಿಗರೇಟು ಸೇದುವುದು ಆರೋಗ್ಯಕ್ಕೆ ಮಾರಕ" ಎಂದು ಇದ್ದರೂ ಇನ್ನೊಂದು ಕಡೆಯಿಂದ ಸಿಗರೇಟು ಸೇದುವುದರಿಂದ ಬಹಳ ರುಚಿಕರ, ಆಹ್ಲಾದಕರ ತುಂಬಾ ಸ್ವಾದ ಎಂದು ಹೇಳುವಂತೆ. ಕ್ಯಾಪಿಟೇಷನ್ ಫೀ ರದ್ದು ಮಾಡುತ್ತೇವೆಂದು ಹೇಳಿ, ಇವತ್ತು ಎರಡು ಲಕ್ಷ ಮೂರು ಲಕ್ಷ ಹಾಗೂ ಒಂದೂವರೆ ಲಕ್ಷ, ಮಾನ್ಯ ಆಚಾರ್ಯರವರು ಹೇಳಿದಹಾಗೆ ೨೫,೦೦೦ ರಶೀದಿ, ೫೦,೦೦೦ ರಶೀದಿ ಕೊಡುವುದು, ಖಾಸಗೀ ಸಂಸ್ಥೆಯವರು ದುರ್ವ್ಯವಹಾರ ಮಾಡುವುದಕ್ಕೆ ಅವಕಾಶಕೊಡತಕ್ಕಂಥ ಈ ಮಸೂದೆಯನ್ನು ತಂದಿರುವ ನಿಮ್ಮ ಧೈರ್ಯವನ್ನು ಮೆಚ್ಚಿದ್ದೇನೆ. ಏಕೆಂದರೆ, ಕಾನೂನು ಪ್ರಕಾರ ಇದನ್ನು ತರುವುದಕ್ಕೆ ಕೈಹಾಕಿರುವುದನ್ನು ನೋಡಿದರೆ, ದೇಶದ ಜನತೆಯ ಮುಂದೆ ನೀವು ಮತ್ತೆ ಹೋಗುವುದಿಲ್ಲವೆಂಬ ಭಾವನೆ ಇದ್ದಂತೆ ಕಾಣುತ್ತದೆ. ಅಂತವರು ಮಾತ್ರ ಇದಕ್ಕೆ ಕೈ ಹಾಕುತ್ತಾರೆ. ಹಿಂದಿನ ಸರ್ಕಾರದವರು ಕೂಡ ಇದನ್ನು ೫ ವರ್ಷಗಳಲ್ಲಿ ಸಂಪೂರ್ಣವಾಗಿ ತೆಗೆಯುತ್ತೇವೆಂದು ಹೇಳಿದ್ದರು. ನಾನು ಹಿಂದೆ ವ್ಯವಸಾಯ ಮಂತ್ರಿಯಾಗಿದ್ದಾಗ ಹಳ್ಳಿಗಾಡಿನ ಮಕ್ಕಳಿಗೆ ಅನುಕೂಲವಾಗಲಿ ಎನ್ನುವ ದೃಷ್ಟಿಯಿಂದ ೧೦ ಅಂಕಗಳನ್ನು ಕೊಡುವ ಪದ್ಧತಿಯನ್ನು ಮುಂದುವರಿಸಿಕೊಂಡು ಬಂದಿದ್ದೆವು.

ಉಪಾಧ್ಯಕ್ಷರು.—ತಾವು ಸಲಹೆ ಕೊಡಲೇ ಇಲ್ಲ.

ಶ್ರೀ ಎಸ್. ಬಂಗಾರಪ್ಪ.—ಮಕ್ಕಳಿಗೆ ಸೀಟು ಕೊಡುವ ಇಚ್ಛೆಯನ್ನು ತಾವು ವ್ಯಕ್ತಪಡಿಸ ಬಹುದಾಗಿತ್ತು. ಇವತ್ತು ಪಟ್ಟಣಗಳಲ್ಲಿರತಕ್ಕ ಕೆಲವು ಮಕ್ಕಳು ನೂರಕ್ಕೆ ೯೯, ೯೮, ೯೫ ಹಾಗೂ ೯೦ ಪರ್ಸೆಂಟ್ ಅಂಕಗಳನ್ನು ಪಡೆಯುತ್ತಾರೆ. ಆದರೆ, ಹಳ್ಳಿಗಾಡಿನ ಮಕ್ಕಳಿಗೆ ಆ ಒಂದು ಸೌಲಭ್ಯ ಇಲ್ಲ. ಮಾನ್ಯ ದೇವೇಗೌಡರಿಗೆ ಗೊತ್ತಿದೆ, ಐ.ಎ.ಎಸ್. ಐ.ಪಿ.ಎಸ್. ಅಧಿಕಾರಿಗಳ ಮಕ್ಕಳು ಹುಟ್ಟುವಾಗಲೇ ಸ್ಲೇಟು ಪುಸ್ತಕಗಳನ್ನು ಹಿಡಿದುಕೊಂಡು ಹುಟ್ಟುತ್ತವೆ. ಅವರಿಗೆ ಇದೇ ನನ್ನ ಆಸ್ತಿ ಎಂದು ತಿಳಿದುಕೊಂಡು ಓದುತ್ತಾ ಓದುತ್ತಾ ಚೆನ್ನಾಗಿ ಅಂಕಗಳನ್ನು ಪಡೆಯುತ್ತಾರೆ. ಆದರೆ, ಮಾನ್ಯ ಅಧ್ಯಕ್ಷರೇ ತಮಗೆ ಗೊತ್ತಿರುವಂತೆ ಕೊರಟಗೆರೆ ತಾಲ್ಲೂಕಿನಲ್ಲಿ ಎಷ್ಟು ಮಕ್ಕಳಿಗೆ ಕಣ್ಣು ಬಿಟ್ಟ ಕೂಡಲೇ ಸ್ಲೇಟು ಪುಸ್ತಕಗಳು ಕಾಣುತ್ತವೆ. ಅವರ ಕಣ್ಣಿಗೆ ಕಾಣುವುದು ಕುರಿ, ಮೇಕೆ, ದನಗಳು, ಗಾಡಿ, ಎತ್ತು, ಕಾಣಿಸುತ್ತವೆ.

ಶ್ರೀ ಕೆ. ಜಿ. ಮಹೇಶ್ವರಪ್ಪ.—ಇದರ ಬಗ್ಗೆ ನಾವು ಕೂಡ ತಲೆ ಕೆಡಿಸಿಕೊಂಡಿದ್ದೇವೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಎಲ್ಲರಿಗೂ ಕೂಡ ಇದು ಗಮನಕ್ಕೆ ಬಂದಿದೆ. ಎಲ್ಲರಿಗೂ ಇದರ ಬಗ್ಗೆ ಯೋಚನೆ ಬಂದಿದೆ.

ಏಕೆಂದರೆ ಈ ಬಿಲ್‌ಗೆ ಇದು ಸಂಬಂಧ ಇದೆ. ಇವತ್ತು ಒಂದು ಕಾಲೇಜಿಗೆ ೧೨೦ ಸೀಟುಗಳನ್ನು ಕೊಟ್ಟರೆ ಮೆರಿಟ್ ಮೇಲೆ ೧೦–೧೫ ಸೀಟುಗಳನ್ನು ಯಾವ ಆಧಾರದ ಮೇಲೆ ಕೊಡುತ್ತಿದ್ದೀರಿ ಗೊತ್ತೇ? ಈ ಸೀಟುಗಳು ಸಿಕ್ಕುವುದಾದರೂ ಯಾರಿಗೆ ಗೊತ್ತೆ ? ಪಟ್ಟಣದ ಮಕ್ಕಳಿಗೆ ಇದು ಸಿಕ್ಕಬಾರದು ಎನ್ನುವ ಭಾವನೆ ನನ್ನದಲ್ಲ. ಆ ಅಭಿಪ್ರಾಯದಲ್ಲಿ ನಾನು ಮಾತನಾಡುವುದಿಲ್ಲ. ಪಟ್ಟಣ ಪ್ರದೇಶದ ಮತ್ತು ಗ್ರಾಮೀಣ ಪ್ರದೇಶದ ಎಲ್ಲ ಮಕ್ಕಳಿಗೂ ಸಮಾನವಾದ ಹಕ್ಕು ಇದೆ. ಆದರೆ ಸೌಲಭ್ಯಗಳು ಮಾತ್ರ

ವರಣದ ಒಂದು ಪರಿಸರದ ಸೃಷ್ಟಿ. ಒಂದು ಮಗು ಹುಟ್ಟಿ ಬೆಳೆಯುತಕ್ಕ ಸಂದರ್ಭದಲ್ಲಿ ಅದನ್ನು ಗಮನಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಏಕೆಂದರೆ ಕೊಠಾರಿ ಆಯೋಗದವರು ತಮ್ಮ ವರದಿಯಲ್ಲಿ ಸ್ಪಷ್ಟವಾದ ವಿಶ್ಲೇಷಣೆಯನ್ನು ಮಾಡಿದ್ದಾರೆ. ಈಗ ನಾನು ಆ ವಿವರಕ್ಕೆ ಹೋಗುವುದಿಲ್ಲ. ಗ್ರಾಮೀಣ ಪ್ರದೇಶದ ಮಕ್ಕಳು ನೂರಕ್ಕೆ ೮೦-೯೦ ಅಂಕಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವೇ ಇಲ್ಲ ನೀವು ಮೆರಿಟ್‌ಮೇಲೆ ೧೫-೨೦ ಸೀಟುಗಳನ್ನು ಏನು ಕೊಡುತ್ತೀರಿ ಅವು ಗ್ರಾಮೀಣ ಪ್ರದೇಶದ ಮಕ್ಕಳಿಗೆ ತಲುಪುವುದಿಲ್ಲ. ನಮ್ಮ ರಾಜ್ಯದಲ್ಲಿ ಎಷ್ಟು ಭಾಗ ಪಟ್ಟಣ ಪ್ರದೇಶ ಇದೆ, ಎಷ್ಟು ಭಾಗ ಗ್ರಾಮೀಣ ಪ್ರದೇಶ ಇದೆ ಎಂಬುದು ತಮಗೇ ಗೊತ್ತಿದೆ, ಗ್ರಾಮೀಣ ಪ್ರದೇಶದ ಮಕ್ಕಳಿಗೆ ಯಾವ ರೀತಿ ಉತ್ತೇಜನ ಕೊಡಬೇಕು ಎನ್ನುವ ವಿಚಾರವನ್ನು ತಮ್ಮ ಈ ಬಿಲ್‌ನಲ್ಲಿ ತೋರಿಸಬೇಕಾಗಿತ್ತು. ಆದರೆ ಅದರ ಪ್ರಸ್ತಾಪವನ್ನೇ ತಾವು ಮಾಡಿಲ್ಲ. ನೀವು ಇಲ್ಲಿ ಕೇವಲ ಒಂದು ಕಾರ್ಯಕ್ರಮವನ್ನು ಮಾತ್ರ ತೋರಿಸಿದ್ದೀರಿ. ಈಗ ಜೂನ್ ಮತ್ತು ಜುಲೈ ತಿಂಗಳಲ್ಲಿ ಹೊರಡಿಸಿರತಕ್ಕ ಆಜ್ಞೆಗಳು ಇವೆ. ಅವುಗಳನ್ನು ನೀವು ಇಲ್ಲಿ ದೃಢೀಕರಿಸಬೇಕು, ಅದಕ್ಕೆ ನಾವು ಒಪ್ಪಿಗೆ ಕೊಡಬೇಕು. ಇದಕ್ಕೆ ಒಂದು ಕಾನೂನು ಚೌಕಟ್ಟು ಬರಬೇಕು. ಇವತ್ತು ಈ ಶಾಸನ ಸಭೆಯಲ್ಲಿ ಪಾಸ್ ಮಾಡಿಸುವುದಕ್ಕೆ ಬೆಂಬಲ ಇದೆಯೆಂದು ಬಿಲ್ಲನ್ನು ಪಾಸ್ ಮಾಡಿಸಬಹುದು. ಆದರೆ ನಾನು ಈ ಮಸೂದೆಯನ್ನು ವಿರೋಧ ಮಾಡುತ್ತೇನೆ, ನಮ್ಮ ಬಿ.ಜೆ.ಪಿ.ಯ ಮುಖಂಡರಾದ ಡಾ. ಆಚಾರ್‌ರವರು ಮಾತನಾಡುವಾಗ ನಾವು ಈ ಬಿಲ್ಲನ್ನು ವಿರೋಧಮಾಡುತ್ತೇವೆ ಎನ್ನುವ ಮಾತನ್ನು ಹೇಳಿದ್ದಾರೆ. ಅವರು ಹೇಳಿರುವುದರಲ್ಲಿ ಹುರುಳಿದೆ ಈ ಸರ್ಕಾರಕ್ಕೆ ಬೆಂಬಲವನ್ನು ಕೊಟ್ಟಿರುವವರೂ ಕೂಡ ವಿರೋಧ ಮಾಡುತ್ತೇವೆ ಎನ್ನುವ ಮಟ್ಟಕ್ಕೆ ಹೋಗಿರಬೇಕಾದರೆ ಇನ್ನು ನಾವು ಎಷ್ಟು ದೂರ ಯೋಚನೆ ಮಾಡಬೇಕು ಎಂಬುದನ್ನು ತಾವು ಯೋಚಿಸಬೇಕು, ಆದ್ದರಿಂದ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಈ ಕ್ಯಾಪಿಟೇಷನ್ ಶುಲ್ಕವನ್ನು ರದ್ದು ಮಾಡುತ್ತೇವೆಂದು ಹೇಳಿದ ತಾವುಗಳು ಇಲ್ಲಿ ಮಂಡಿಸಿರತಕ್ಕ ಕಲಂಗಳನ್ನು ನೋಡಿದರೆ ಕ್ಯಾಪಿಟೇಷನ್ ಶುಲ್ಕವನ್ನು ಮುಂದುವರಿಸುವ ಸ್ಪಷ್ಟವಾದ ನಿಮ್ಮ ವಿಚಾರಧಾರೆ ಇದರಲ್ಲಿ ಕಂಡುಬರುತ್ತದೆ. ಮಾನ್ಯ ಆರೋಗ್ಯ ಮಂತ್ರಿಗಳಾದ ಸಿಂಧ್ಯರವರು ಇಲ್ಲಿ ಇಲ್ಲ. ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧಪಕ್ಷದ ನಾಯಕರು ಮತ್ತಿತರ ಮಾನ್ಯ ಸದಸ್ಯರುಗಳು ಒಂದು ಮಾತನ್ನು ಪ್ರಸ್ತಾಪ ಮಾಡಿದ್ದಾರೆ. ಆ ವರದಿ ಕ್ಯಾಬಿನೆಟ್ ಸಬ್ ಕಮಿಟಿಯದು ಎಂದು ಕೂಡ ನಮಗೆ ತಿಳಿದುಬಂದಿದೆ. ಸಾಮಾನ್ಯವಾಗಿ ಕೆಲವು ಸದಸ್ಯರಿಗೆ ಕೆಲವು ವಿಚಾರ ಗೊತ್ತಾಗುವುದಿಲ್ಲ. ಕ್ಯಾಬಿನೆಟ್ ಸಬ್ ಕಮಿಟಿಯ ವರದಿಯಾಗಲಿ ಎಕ್ಸ್‌ಪರ್ಟ್ ಕಮಿಟಿಯ ವರದಿಯಾಗಲಿ ಅದು ಸರ್ಕಾರದ ಹತ್ತಿರ ಇರುತ್ತದೆ. ಪತ್ರಿಕಾ ವರದಿಯ ಪ್ರಕಾರ ಮಾನ್ಯ ಸಚಿವ ಸಿಂಧ್ಯಾರವರ ಅಧ್ಯಕ್ಷತೆಯಲ್ಲಿ ಸಲ್ಲಿಸರತಕ್ಕ ವರದಿಯಲ್ಲಿ ಈ ಕ್ಯಾಪಿಟೇಷನ್ ಶುಲ್ಕವನ್ನು ಸಂಪೂರ್ಣವಾಗಿ ರದ್ದು ಮಾಡಬೇಕೆಂದು ತಿಳಿಸಿದ್ದಾರೆಂದು ನಾವು ಕೇಳಿದ್ದೇವೆ. ಇಲ್ಲಿ ಏನು ಬರುತ್ತದೆ ಎಂದರೆ, ನೀವು ಇದನ್ನು ರದ್ದುಮಾಡಬೇಕೆಂದು ಇದ್ದಿದ್ದರೆ...

SRI A. LAKSHMISAGAR.—We have stated everything clearly in the statement of objects and reasons.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಿಂಧ್ಯರವರ ಸಮಿತಿಯ ವರದಿಯಲ್ಲಿ ಈ ಶುಲ್ಕವನ್ನು ರದ್ದು ಮಾಡಬೇಕೆಂದು ಸರ್ಕಾರಕ್ಕೆ ಕೊಟ್ಟಿದ್ದರೆ ಅದರ ಪ್ರಸ್ತಾಪವನ್ನು ನೀವು ಮಾಡಬೇಕಾಗಿತ್ತು. ನಿಮ್ಮ ಈ ಬಿಲ್‌ನ ಸ್ಟೇಟ್‌ಮೆಂಟ್ ಆಫ್ ಅಬ್ಜೆಕ್ಟ್ಸ್ ಅಂಡ್ ರೀಸನ್ಸ್‌ನಲ್ಲಿ ಅದನ್ನು ತಿಳಿಸಬೇಕಾಗಿತ್ತು, ಆದರೆ ಇದನ್ನು ನೀವು ಏತಕ್ಕೆ ಪ್ರಸ್ತಾಪ ಮಾಡಲಿಲ್ಲ ಎಂದರೆ ಅದು ಸಿಂಧ್ಯರವರ ಅಧ್ಯಕ್ಷತೆಯ ಸಮಿತಿ ಇರಬಹುದು, ಮಂತ್ರಿಮಂಡಲದ ಉಪಸಮಿತಿ ಇರಬಹುದು, ಅಥವಾ ಎಕ್ಸ್‌ಪರ್ಟ್ ಕಮಿಟಿ ಇರಬಹುದು ನನಗೆ ಆ ವರದಿ ಸಿಕ್ಕಿಲ್ಲ. ಆದರೂ ನಿಮ್ಮ ಈ ಬಿಲ್‌ನ ಮೂಲ ಉದ್ದೇಶ ಕ್ಯಾಪಿಟೇಷನ್ ಶುಲ್ಕವನ್ನು ರದ್ದುಮಾಡುವುದು ಅಲ್ಲ. ನಿಮ್ಮ ಮಂತ್ರಿ ಮಂಡಲದ ಸದಸ್ಯರ ಒಂದು ಸಮಿತಿಯವರು ಕೊಟ್ಟಿರತಕ್ಕ ವರದಿಯನ್ನೇ ಕಡೆಗಣಿಸತಕ್ಕ ಮಟ್ಟಕ್ಕೆ ತಾವು ಹೋಗಿದ್ದೀರಿ. ನಾನು ಹೇಳುತ್ತೇನೆ, ಅವರು ಆ ರೀತಿ ವರದಿಯನ್ನು ಕೊಟ್ಟಿದ್ದರೆ ಕ್ಯಾಪಿಟೇಷನ್ ಶುಲ್ಕವನ್ನು ಸಂಪೂರ್ಣವಾಗಿ ರದ್ದುಮಾಡಬೇಕು. ಇದರಲ್ಲಿ ೫ ಪೈಸೆಯಷ್ಟು ವ್ಯವಹಾರ ಕೂಡ ನಡೆಯಕೂಡದು. ಇವತ್ತು ಏನಾಗಿದೆ ಎಂದರೆ ತಮ್ಮ ಹತ್ತಿರ ಇದ್ದಂಥ ಅಧಿಕಾರವನ್ನು ಸಂಪೂರ್ಣವಾಗಿ ಕಳೆದುಕೊಂಡಿದ್ದೀರಿ. ಅದನ್ನು ಪ್ರೈವೇಟ್ ಮ್ಯಾನೇಜ್‌ಮೆಂಟ್‌ನವರಿಗೆ ಮಾರಿಕೊಂಡಿದ್ದೀರಿ, ನನಗೆ ಗೊತ್ತಿರುವಂತೆ ಹಿಂದಿನ ಸರ್ಕಾರದವರು ೫ ಸೀಟು, ೧೦ ಸೀಟು ೧೫ ಸೀಟುಗಳನ್ನು ಕೊಡಬಹುದಿತ್ತು. ಪ್ರತಿಯೊಂದು ಜಿಲ್ಲೆಗೂ ಒಬ್ಬೊಬ್ಬ

ಮಂತ್ರಿ ಇರುತ್ತಾರೆ. ಅವರ ಕ್ಷೇತ್ರದ ಬಡವರು ಯಾರಾದರೂ ಬಂದು ನನ್ನ ಮಗ ಅಥವಾ ಮಗಳಿಗೆ ಒಂದು ಸೀಟನ್ನು ಕೊಡಿಸಿ ಎಂದು ಕೇಳಿದರೆ ಕೊಡಿಸಬಹುದಿತ್ತು, ಅಥವಾ ಬೇರೆ ಯಾರೋ ಒಬ್ಬರು ಬಂದು ನಮ್ಮ ಹುಡುಗ ಅಥವಾ ಹುಡಿಗಿ ಚೆನ್ನಾಗಿ ಅಂಕಗಳನ್ನು ತೆಗೆದುಕೊಂಡಿದ್ದಾರೆ ಆದರೆ ಮೆರಿಟ್‌ಗೆ ರೀಚ್ ಆಗಿಲ್ಲ ಆದ್ದರಿಂದ ಒಂದು ಸೀಟನ್ನು ಕೊಡಿ ಎಂದು ಕೇಳಿದ್ದರೆ ಕೊಡುವುದಕ್ಕೆ ಅವಕಾಶ ಇತ್ತು. ಈ ಒಂದು ಅಧಿಕಾರ ಹಿಂದೆ ಮಾನ್ಯ ದೇವರಾಜ ಅರಸರ ಕಾಲದಿಂದಲೂ ಇತ್ತು, ಆದರೆ ಅತಿ ಕಡಿಮೆ ಅಂಕಗಳನ್ನು ತೆಗೆದುಕೊಂಡವರಿಗೂ ಕೊಡಿ ಎಂದು ನಾನು ಹೇಳುವುದಿಲ್ಲ. ಬಡವರ ಮಕ್ಕಳಿಗಾಗಿ ಹಿಂದಿನ ಸರ್ಕಾರದವರು ಕೆಲವು ಸೀಟುಗಳನ್ನು ತಮ್ಮ ಕೈಯಲ್ಲಿ ಇಟ್ಟುಕೊಂಡಿದ್ದರು ನಾನೇ ಸುಮಾರು ೨-೩ ಹೆಣ್ಣುಮಕ್ಕಳಿಗೆ, ೩-೪ ಗಂಡು ಮಕ್ಕಳಿಗೆ ಮೆಡಿಕಲ್ ಮತ್ತು ಇಂಜನಿಯರಿಂಗ್ ಕಾಲೇಜುಗಳಲ್ಲಿ ಸೀಟುಗಳನ್ನು ಕೊಡಿಸಿದ್ದೇನೆ. ಇವತ್ತು ಅವರು ಗುಲ್ಬರ್ಗಾ, ದಾವಣಗೆರೆ ಮತ್ತು ಬೆಂಗಳೂರು ಕಾಲೇಜುಗಳಲ್ಲಿದ್ದಾರೆ. ಹಿಂದಿನ ಆರೋಗ್ಯ ಸಚಿವರಾದ ಮಾನ್ಯ ಸಮದ್‌ರವರಿಗೆ ಹೇಳಿ ಆ ವಿದ್ಯಾರ್ಥಿಗಳಿಗೆ ಫ್ರೀಷಿಪ್ ಕೂಡ ಕೊಡಿಸಿದ್ದೇನೆ. ಅವರಿಗೆ ಐದು ಪೈಸೆ ಕೂಡ ಖರ್ಚಿಲ್ಲ. ಅವರು ಪಕ್ಕಾ ಬಡವರ ಮಕ್ಕಳು, ಶ್ರೀಮಂತರನ್ನು ನಾವು ಹಚ್ಚಿಕೊಳ್ಳುವುದಿಲ್ಲ, ಅಲ್ಲದೆ ಅವರು ಬರುವುದೂ ಬೇಡ ಒಂದು ವೇಳೆ ಅವರು ಬಂದರೂ ಅವರನ್ನು ದೂರ ಇಡುತ್ತೇವೆ.

ಒಬ್ಬ ಮಾನ್ಯ ಸದಸ್ಯರು.—ಮಾನ್ಯ ಅಧ್ಯಕ್ಷರೆ, ಮಾನ್ಯ ಬಂಗಾರಪ್ಪನವರು ಸುಮಾರು ೧ ಗಂಟೆಯಿಂದ ಮಾತನಾಡುತ್ತಿದ್ದಾರೆ. ಆದರೆ ಏನು ಮಾಡಬೇಕೆಂದು ಹೇಳಲಿಲ್ಲ ಸುತ್ತೀ ಬಳಸಿ, ಸಂತ್ರೀ ಬಳಸಿ, ನಾನು ಅದು ಮಾಡಿದೆ, ನಾನು ಇದು ಮಾಡಿದೆ ಎಂದು ಹೇಳಿಕೊಂಡು ಚುನಾವಣಾ ಭಾಷಣವನ್ನೇ ಮಾಡುತ್ತಿದ್ದಾರೆ. ಚುನಾವಣೆ ಈಗಾಗಲೇ ಆಗಿಹೋಗಿದೆ. ನಾವು ಗೆದ್ದು ಬಂದಿದ್ದೇವೆ.

ಶ್ರೀ ಜಿ. ಡಿ. ಸೋಮಪ್ಪ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಇನ್ನೂ ಹೊಸಬರು, ಅವರಿಗೆ ತಾಳ್ಮೆ ಕಡಿಮೆ, ಆತುರ ಜಾಸ್ತಿ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ, ಹಿಂದಿನ ಸರ್ಕಾರದಲ್ಲಿ ಬಡವರ ಮಕ್ಕಳಿಗೆ ಸೀಟುಗಳನ್ನು ಕೊಡಿಸುವ ಅಧಿಕಾರ, ಅವಕಾಶ ಇತ್ತು. ಅದನ್ನೇ ಈಗಲೂ ಮುಂದುವರಿಸಿಕೊಂಡ ಹೋಗಿದ್ದರೆ ಬಡವರಿಗೆ ಅನುಕೂಲವಾಗುತ್ತಿತ್ತು.

ಶ್ರೀ ವೈ. ಕೆ. ರಾಮಯ್ಯ.—ಮಾನ್ಯ ಅಧ್ಯಕ್ಷರೆ, ಮಾನ್ಯ ಬಂಗಾರಪ್ಪನವರು ಹಿಂದಿನ ಸರ್ಕಾರದ ವಕಾಲತ್ತನ್ನು ಯಾವಾಗ ತೆಗೆದುಕೊಂಡರೋ ಗೊತ್ತಾಗಲಿಲ್ಲ.

ಶ್ರೀ ಎಸ್. ಬಂಗಾರಪ್ಪ.—ನೀವು ಛೇರ್ಮನ್ ಆದಮೇಲೆ.

ಶ್ರೀ ವೈ. ಕೆ. ರಾಮಯ್ಯ.—ಚುನಾವಣೆ ಆದ ಮೇಲೆ ತಾವು ಹಿಂದಿನ ಸರ್ಕಾರದ ವಕಾಲತ್ತನ್ನು ತೆಗೆದುಕೊಂಡಿದ್ದೀರೆಂದು ಕಾಣುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಅದು ತಮಗೆ ಅರ್ಥವಾಗುವುದಿಲ್ಲ ಬಿಡಿ.

ಶ್ರೀ ವೈ. ಕೆ. ರಾಮಯ್ಯ.—ನಾನು ಪಕ್ಷವನ್ನು ಬದಲಾವಣೆ ಮಾಡಲಿಲ್ಲ. ಆದ್ದರಿಂದ ನನಗೆ ಅರ್ಥವಾಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ನೀವು ಯಾರಿಗೆ ಈ ಭಾಷಣವನ್ನು ಮಾಡುತ್ತಿದ್ದೀರಿ? ಯಾರು ಪಕ್ಷವನ್ನು ಬದಲಾವಣೆ ಮಾಡಿದ್ದಾರೆ ಎಂಬುದನ್ನು ತಿಳಿದುಕೊಂಡು ಮಾತನಾಡಬೇಕು. ಮಾನ್ಯ ಅಧ್ಯಕ್ಷರೆ ಈಗಿರತಕ್ಕ ಈ ಮಸೂದೆಯಲ್ಲಿ ಸರ್ಕಾರದವರು ಪುಕ್ಕಟೆಯಾಗಿ ಕೊಡತಕ್ಕ ಸೀಟುಗಳು ಏನಿದ್ದವು ಅವುಗಳನ್ನೆಲ್ಲಾ ಖಾಸಗಿ ಮ್ಯಾನೇಜ್‌ಮೆಂಟಿನವರಿಗೆ ದಾನವಾಗಿ ಕೊಟ್ಟಿದ್ದಾರೆ.

ಶ್ರೀ ಬಿ. ರಾಚಯ್ಯ.—ಅದನ್ನು ಮೆರಿಟ್ ಪೂಲ್‌ಗೆ ಕೊಟ್ಟಿದ್ದೇವೆ.

ಶ್ರೀ ಎಸ್. ಬಂಗಾರಪ್ಪ.—ಮೆರಿಟ್ ಪೂಲ್‌ಗೆ ನೀವು ಪ್ರತ್ಯೇಕವಾಗಿ ಇಡಿ. ನಾನು ಕೇಳುತ್ತಿರುವುದು ಮೆರಿಟ್ ಪೂಲ್‌ಗೆ ನೀವು ಎಷ್ಟು ಇಟ್ಟಿದ್ದೀರಿ? ಅದರ ಪರ್ಸೆಂಟೇಜ್‌ನ್ನು ಕೂಡ ನೀವು ಜಾಸ್ತಿ ಮಾಡಿಲ್ಲ. ನಿಮ್ಮ ಸೀಟುಗಳನ್ನೂ ಸೇರಿಸಿ ಮೆರಿಟ್ ಪೂಲ್‌ನ ಸೀಟುಗಳನ್ನು ಜಾಸ್ತಿ ಮಾಡಿದ್ದಿದ್ದರೆ ನಾನು ಸಂತೋಷಪಡುತ್ತಿದ್ದೆ.

ಶ್ರೀ ಬಿ. ರಾಚಯ್ಯ.—ಸರ್ಕಾರದ ಸೀಟುಗಳು ಮೆರಿಟ್ ಪೂಲ್‌ನಲ್ಲಿ ಇರಬೇಕೆಂದು ನಾವು ಮಾಡಿದ್ದೇವೆ.

ಶ್ರೀ ಎಸ್. ಬಂಗಾರಪ್ಪ.—ಅದೇ ನೀವು ಮಾಡಿರುವ ತಪ್ಪು. ಮೆರಿಟ್ ಸೀಟುಗಳನ್ನು ನೀವು ಪ್ರತ್ಯೇಕವಾಗಿ ಇಡಿ. ಮೆರಿಟ್ ತಲುಪಲು ಸಾಧ್ಯವಿಲ್ಲದಿದ್ದ ಮಕ್ಕಳಿಗೆ ಈ ಸೀಟುಗಳನ್ನು ಕೊಡುವ ಅಧಿಕಾರ ನಿಮ್ಮ ಹತ್ತಿರ ಇರಬೇಕು. ಇವತ್ತು ಒಂದು ಕಾಲೇಜಿಗೆ ೩ ಸೀಟುಗಳನ್ನು ಇಟ್ಟಿದ್ದೀರಿ. ಈ ನೋಟಿಫಿಕೇಷನ್‌ನ್ನು ನೋಡಿದರೇ ಗೊತ್ತಾಗುತ್ತದೆ. ಪ್ರೈವೇಟ್ ಕಾಲೇಜ್‌ನವರು ಸೀಟುಗಳನ್ನು ಮಾರಾಟ ಮಾಡಿಕೊಳ್ಳುವುದಕ್ಕೆ ನೀವು ಎಷ್ಟು ಸೀಟುಗಳನ್ನು ಕೊಟ್ಟಿದ್ದೀರಿ ಗೊತ್ತೇ? ನೂರಕ್ಕೆ ಎಪ್ಪತ್ತೈದು ಸೀಟುಗಳನ್ನು ಕೊಟ್ಟಿದ್ದೀರಿ. ಬಡವರಿಗೆ ಸಹಾಯ ಮಾಡಬೇಕೆಂದು ನಿಮಗೆ ಮನಸ್ಸು ಇದ್ದಿದ್ದರೆ ..

ಶ್ರೀ ಬಿ. ರಾಚಯ್ಯ.—ಏಡೆಡ್ ಕಾಲೇಜಿನಲ್ಲಿ ೮೦ ಪರ್ಸೆಂಟ್ ಮೆರಿಟ್‌ಗೆ ಮತ್ತು ೨೦ ಪರ್ಸೆಂಟ್ ಮ್ಯಾನೇಜ್‌ಮೆಂಟ್‌ನವರಿಗೆ ಸೀಟು ಕೊಡುವ ಅಧಿಕಾರ ಇದೆ. ಪ್ರೈವೇಟ್ ಕಾಲೇಜುಗಳಲ್ಲಿ ೨೦ ಪರ್ಸೆಂಟ್ ಮೆರಿಟ್ ಪೂಲ್‌ಗೆ ಮತ್ತು ಉಳಿದ ೮೦ ಪರ್ಸೆಂಟ್ ಮ್ಯಾನೇಜ್‌ಮೆಂಟ್‌ಗೆ ಇದೆ. ಇಲ್ಲಿ ೮೦ ಪರ್‌ಸೆಂಟ್ ಮೆರಿಟ್ ಪೂಲ್‌ಗೆ ಇದೆ. ಈ ೮೦ ಪರ್‌ಸೆಂಟ್ ಮ್ಯಾನೇಜ್‌ಮೆಂಟ್‌ನವರಿಗೆ ಏನು ಬಿಟ್ಟಿದ್ದೀರಿ ಅದರ ಬಗ್ಗೆ ತಮ್ಮ ಉತ್ತರದಲ್ಲಿ ಏನು ಹೇಳುತ್ತೀರಿ ಅದನ್ನು ಹೇಳಿ. ೮೦ ಪರ್‌ಸೆಂಟ್ ಕೊಟ್ಟಿರ ತಕ್ಕದ್ದು ನೋಡಿದರೆ ನಿಮ್ಮ ರಾಜಕೀಯದ ಚಿಂತನೆಯಲ್ಲಿ ಬಡವರ್ಗದ ಬಗ್ಗೆ ವಿಮಾಳಿಕೋರತನ ತೋರಿಸುತ್ತಿದ್ದೀರಿ.

ಶ್ರೀ ಬಿ. ರಾಚಯ್ಯ.—ವಸ್ತು ಪರಿಸ್ಥಿತಿ.

ಶ್ರೀ ಎಸ್. ಬಂಗಾರಪ್ಪ.—ಇರತಕ್ಕಂಥ ಪರಿಸ್ಥಿತಿ ಬಡವರ ದೃಷ್ಟಿಯಿಂದ ಪರಿಸ್ಥಿತಿ ಅಲ್ಲ. ಇದು ಮಂತ್ರೊಂದು ಪರಿಸ್ಥಿತಿಯಾಗಿದೆ, ಇದರಲ್ಲಿ ಅನುಮಾನ ಬೇಕಾಗಿಲ್ಲ. ಈ ಕಡೆ ಕುಳಿತು ಮಾತನಾಡತಕ್ಕ ಸಂದರ್ಭದಲ್ಲಿ ಏನು ಹೇಳಿದ್ದೀರಿ.

ಶ್ರೀ ಎ. ಲಕ್ಷ್ಮೀಸಾಗರ್.—ಹಿಂದೆ ಸರ್ಕಾರ ಎಕ್ಸಿಕ್ಯುಟೀವ್ ಆರ್ಡರ್ ಮಾಡುವಾಗ ಅದಕ್ಕೆ ನಮ್ಮ ಅಭಿಪ್ರಾಯವನ್ನು ಕೇಳಿದ್ದರು. ನಮ್ಮ ವಿಚಾರವನ್ನು ಹೇಳಿದ್ದೇವೆ ಹಂತ ಹಂತವಾಗಿ ೫ ವರ್ಷದಲ್ಲಿ ಕ್ಯಾಪಿಟೇಷನ್ ಶುಲ್ಕ ರದ್ದು ಮಾಡುವ ಬಗ್ಗೆ ಹೇಳಿದ್ದೇವೆ.

ಶ್ರೀ ಎಂ ರಘುಪತಿ.—ಹೋದ ಸಾರಿ ಇದೇ ಬಿಲ್ಲನ್ನು ತಂದಿದ್ದರೆ ಇದು ಅರ್ಥ ಕಡಿತೆಯಾಗುತ್ತಿತ್ತು. ಹಿಂದೆ

(ಗೊಂದಲ)

ಈ ಬಿಲ್ಲನ್ನು ತಂದಿದ್ದರೆ ಕೋರ್ಟಿನಲ್ಲಿ ಜಾರಿ ಮಾಡುತ್ತಾ ಇರಲಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಹಿಂದೆ ಅಪೋಸಿಷನ್ ಪಾರ್ಟಿಯವರನ್ನು ಕನ್‌ಸಲ್ಟ್ ಮಾಡಿಯೇ ಮಾಡಿದ್ದು ಎಂದು ಮಾನ್ಯ ಸಾಗರ್ ಅವರೇ ಒಪ್ಪಿಕೊಳ್ಳುತ್ತಿದ್ದಾರೆ. ಮತ್ತೆ ಮಾನ್ಯ ರಘುಪತಿಯವರು ಏತಕ್ಕೆ ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ಎಂ. ರಘುಪತಿ.—ಅವರು ಏನು ಹೇಳಿದರು ಎನ್ನುವುದನ್ನು ನಾವು ಅರ್ಥ ಮಾಡಿಕೊಳ್ಳಬೇಕು.

ಶ್ರೀ ಗೋವಿಂದ ಪಿ. ಒಡೆಯರಾಜ್.—ಸರ್ಕಾರದವರು ಕೆಲಸ ಮಾಡುವಾಗ ಪ್ರತಿಯೊಂದು ಕೆಲಸಕ್ಕೂ ಬಿಲ್ ತಂದೇ ಕೆಲಸ ಮಾಡಲಿಕ್ಕೆ ಆಗುತ್ತದೆ ಏನು ?

ಶ್ರೀ ಎಂ. ರಘುಪತಿ.—ಇದು ಬಹಳ ಪ್ರಮುಖವಾದ ವಿಷಯ, ಬಿಲ್ ತರದೇ ಇನ್ನು ಏನು ತರಲಿಕ್ಕೆ ಆಗುತ್ತದೆ. !

ಶ್ರೀ ಎಸ್ ಬಂಗಾರಪ್ಪ.—ಅಧ್ಯಕ್ಷರೆ, ಇದರಲ್ಲಿ ಒಂದು ದೊಡ್ಡ ಸಂಪೂರ್ಣವಾದ ಯೋಜನೆ ಇದೆ. ಕಳೆದ ಶಾಸನ ಸಭೆ ಸೇರಿದ್ದಾಗಲೇ ನಾನು ಹೇಳಿದ್ದೆ. ಈ ನೋಟಿಫಿಕೇಷನ್ ಇಷ್ಯೂ ಮಾಡುವುದಕ್ಕೆ

ಮೊದಲೇ ನಾನು ಈ ಸಭೆಯಲ್ಲಿ ಹೇಳಿದ್ದೇನೆ. ಪ್ರೈವೇಟ್ ಮ್ಯಾನೇಜ್‌ಮೆಂಟಿನವರು ಯಾರು ಇದ್ದಾರೆ ಅವರ ಜೊತೆ ಶಾಮೀಲಾಗಿದ್ದಾರೆಂದು ಹೇಳಿದ್ದೇನೆ. ಮಾನ್ಯ ಮುಖ್ಯ ಮಂತ್ರಿಗಳು ಈಗ ಇಲ್ಲ, ಏತಕ್ಕೆ ಬಂದಿಲ್ಲವೋ ಗೊತ್ತಾಗಲಿಲ್ಲ. ಹಿಂದೆ ಮಾನ್ಯ ಮುಖ್ಯ ಮಂತ್ರಿಗಳು ಮಸೂದೆ ತರುತ್ತೇವೆಂದು ಹೇಳಿದ್ದಕ್ಕೆ ತಪ್ಪು ಎಂದು ಹೇಳಿದ್ದ. ಇದನ್ನು ಅಬಾಲಿಷ್ ಮಾಡಿ ಮಸೂದೆ ತರಬೇಕೆಂದು ಹೇಳಿದ್ದಕ್ಕೆ ಅವರು ತರುತ್ತೇವೆಂದು ಹೇಳಿದ್ದು ನೆನಪಿಗೆ ಬರುತ್ತಿದೆ. ಇವೊತ್ತು ಖಾಸಗಿಯಾಗಿ ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳನ್ನು ಏನು ನಡೆಸುತ್ತಿದ್ದಾರೆ ಅವರ ಜೊತೆಯಲ್ಲಿ ಇವರು ಶಾಮೀಲಾಗಿದ್ದಾರೆಂದು ಆರೋಪ ಮಾಡುತ್ತೇನೆ. ಇದು ಆಗದೇ ಹೋಗಿದ್ದರೆ ಇಂಥ ಕೆಟ್ಟ ಮಸೂದೆಯನ್ನು ಸಭೆಯ ಮುಂದೆ ತಂದಿಡಲಿಕ್ಕೆ ಹೋಗುತ್ತಾ ಇರಲಿಲ್ಲ. ಜನರ ಕಣ್ಣಿಗೆ ಮಣ್ಣು ಎರಚುವ ರೀತಿಯಲ್ಲಿ ಕ್ಯಾಪಿಟೇಷನ್ ಫೀ ರದ್ದು ಮಾಡುತ್ತೇವೆಂದು ಹೇಳಿ ಹೊಸದಾಗಿ ನಿರ್ಮಾಣ ಮಾಡಿರತಕ್ಕ ಸಂದರ್ಭ ಇದು. ಮಾನ್ಯ ರಾಮಕೃಷ್ಣ ಹೆಗಡೆ ಮುಖ್ಯಮಂತ್ರಿಗಳವರ ನಾಯಕತ್ವ ಏನಿದೆ ಅದು ಖಾಸಗಿಯಾಗಿ ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕಾಲೇಜು ನಡೆಸತಕ್ಕವರ ಜೊತೆ ಇವರು ಶಾಮೀಲಾಗಿದ್ದಾರೆ, ದುರ್ವ್ಯವಹಾರಗಳು ನಡೆದಿವೆ. ಅದು ನಡೆಯದೇ ಇದ್ದರೆ, ಈ ತರಹ ಕೆಟ್ಟ ಮಸೂದೆ ತರಲಿಕ್ಕೆ ಸಾಧ್ಯವಿರುತ್ತಾ ಇರಲಿಲ್ಲ. ಇದರ ಬಗ್ಗೆ ಇಡೀ ಕರ್ನಾಟಕ ರಾಜ್ಯದ ಬಗ್ಗೆ ಸರ್ಕಾರ ಉತ್ತರ ಕೊಡಬೇಕಾಗುತ್ತದೆ......

ಶ್ರೀ ಎಂ. ರಘುಪತಿ.—ಈಗಲೇ ನಮ್ಮ ಸಾಗರ್ ಅವರು ಸದನದ ಮೂಲಕ ಉತ್ತರವನ್ನು ಕೊಡುತ್ತಾರೆ. ಜನತೆ ಈಗಾಗಲೇ ಮುನಿಸಿಪಲ್ ಮತ್ತು ಕಾರ್ಪೊರೇಷನ್ ಎಲೆಕ್ಷನ್‌ನಲ್ಲಿ ಉತ್ತರವನ್ನು ಕೊಟ್ಟಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಇದು ಮುನಿಸಿಪಲ್ ಮತ್ತು ಕಾರ್ಪೊರೇಷನ್ ಎಲೆಕ್ಷನ್‌ಗೆ ಮುಗಿದು ಹೋಗುತ್ತದೆ ಏನು ? ಇಡೀ ಕರ್ನಾಟಕ ರಾಜ್ಯದ ಜನತೆಗೆ ಉತ್ತರ ಕೊಡಬೇಕಾಗಿದೆ.

(ಗೊಂದಲ)

ಶ್ರೀ ಎಂ. ರಾಮಪ್ಪ.—ಮುನಿಸಿಪಲ್ ಮತ್ತು ಕಾರ್ಪೊರೇಷನ್ ಎಲೆಕ್ಷನ್ ಏತಕ್ಕೆ ಹೇಳುತ್ತೀರಾ, ಬೇರೆ ಕಡೆಯದನ್ನು ಹೇಳಿ.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೆ, ನಾನು ಈ ಮಸೂದೆಯ ಬಗ್ಗೆ ಮಾತನಾಡುತ್ತಿದ್ದೇನೆ. ಜನ ಅಂದರೆ ಮುನಿಸಿಪಲ್ ಎಲೆಕ್ಷನ್ ಮತ್ತು ಕಾರ್ಪೊರೇಷನ್ ಎಲೆಕ್ಷನ್ ಜನರೇ ಅಲ್ಲ. ಬೇರೆ ಬೇರೆ ಎಲೆಕ್ಷನ್ ರಾಶಿ ಇವೆ. ಜನವರಿ ತಿಂಗಳಲ್ಲಿ ಎಷ್ಟು ಸೀಟುಗಳು ಬಂದಿವೆ ಅದು ನಮ್ಮ ಕಣ್ಣು ಮುಂದೆ ಇದೆ.

ಉಪಾಧ್ಯಕ್ಷರು.—ಈಗ ಎಲೆಕ್ಷನ್ ವಿಚಾರ ಬೇಡ, ವಿಷಯಕ್ಕೆ ಬನ್ನಿ.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೆ, ಒಂದು ವಿಷಯವನ್ನು ಈ ಸದನದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಇದೊಂದು ದುರ್ವ್ಯವಹಾರದ ಒಳಸಂಚಿಗೆ ಸಂಬಂಧಪಟ್ಟಿರತಕ್ಕ ಮಸೂದೆ ಇದರಲ್ಲಿ ಸರ್ಕಾರ......

ಶ್ರೀ ಹೆಚ್. ಡಿ. ದೇವೇಗೌಡ.—ಅಧ್ಯಕ್ಷರೇ, ಸರ್ಕಾರದ ಮೇಲೆ ಗುರುತರವಾದ ಆಪಾದನೆ ಮಾಡುತ್ತಿದ್ದಾರೆ ಅದು ಯಾವರೀತಿ ಎನ್‌ಕ್ವಯಿರಿ ಮಾಡಬೇಕೋ ಮಾಡೋಣ. ಅವರಿಗೆ ಜ್ಯುಡಿಷಿಯಲ್ ಎನ್‌ಕ್ವಯಿರಿಬೇಕೊ, ಸಿ. ಒ. ಡಿ. ಎನ್‌ಕ್ವಯಿರಿ ಬೇಕೋ, ಸಿ. ಬಿ. ಐ. ಎನ್‌ಕ್ವಯಿರಿ ಬೇಕೋ ಅವರಿಗೆ ಯಾವುದು ಬೇಕೋ ಅದನ್ನು ಮಾಡಿಸೋಣ. ಮಾನ್ಯ ಸದಸ್ಯರು ಒಳಸಂಚು, ದುರ್ವ್ಯವಹಾರ ಎಂದು ಹೇಳಿದ್ದಾರೆ. ಯಾವ ಯಾವ ರೀತಿ ಒಳಸಂಚು ಮಾಡಿ, ದುರ್ವ್ಯವಹಾರ ನಡೆಸಿ ಎಷ್ಟು ಖಾಸಗಿ ಸಂಸ್ಥೆಗಳಿಂದ ದುಡ್ಡು ತೆಗೆದುಕೊಂಡಿದ್ದೇವೆ, ಅದನ್ನು ಅವರು ಸಾಬೀತು ಮಾಡುವುದಾದರೆ ಒಂದು ನಿಮಿಷ ಈ ಜಾಗದಲ್ಲಿ ಕುಳಿತುಕೊಳ್ಳುವುದಕ್ಕೆ ಯಾರೂ ತಯಾರಿಲ್ಲ. ಅವರು ಯಾವ ಎನ್‌ಕ್ವಯಿರಿ ಬೇಕಾದರೂ ಹೇಳಲಿ. We are prepared for any type of enquiry.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೆ, ಗುರುತರವಾದ ಆಪಾದನೆಯನ್ನು ಸರ್ಕಾರದ ಮೇಲೆ ಮಾಡಿದ್ದೇನೆ. ಮುಂದೆಯೂ ಮಾಡುತ್ತೇನೆ. ಅದರಲ್ಲಿ ಅನುಮಾನ ಬೇಕಾಗಿಲ್ಲ. ಎನ್‌ಕ್ವಯಿರಿ ಅಂದಾಕ್ಷಣ ಬರೀ ಜುಡಿಷಿಯಲ್ ಎನ್‌ಕ್ವಯಿರಿ ಏನು ಅದು ದೇವೇಗೌಡರಿಗೆ ಗೊತ್ತಿದೆ.

Sri H. D. Deve Gowda.—If the House wants, we are prepared for even C. B. I. enquiry.

(ಗೊಂದಲ)

ಶ್ರೀ ಎಂ. ರಾಮಪ್ಪ,—ಸೆಂಟ್ರಲ್ ಗವರ್ನ್‌ಮೆಂಟ್‌ನಲ್ಲಿ ಕಮಿಷನ್ ಮಾಡಿ ಮಾಡಿ ಬಿತ್ತು.

Sri H. D. Deve Gowda.—We will not hesitate. I am telling it again that we are prepared for any type of enquiry, whether judicial enquiry, C. B I. enquiry or C. O. D. enquiry

ಶ್ರೀ ಗೋವಿಂದ ಪಿ. ಒಡೆಯರಾಜ್.—ಒಪ್ಪಿಗೆ ಕೊಡಬೇಕಾದ್ದು ನಿಮ್ಮ ಕೈಯಲ್ಲಿ ಇದೆ.

Sri H. D. Deve Gowda —We are ready to give our consent. Whether it is the Ministry headed by Sri Ramakrishna Hegde, or H. D. Devegowda or any Minister, if they have indulged in malpractice, if they are collecting money from the private managements, we are prepared to be subjected for C. B. I. enquiry. Come on frame the charges.

ಶ್ರೀ ಎಂ. ರಘುಪತಿ.—ಹಿಂದೆ ಇತಿಹಾಸದಲ್ಲಿಯೇ ಯಾವ ಸರ್ಕಾರ ಈ ರೀತಿ ಮುಂದೆ ಬಂದ ಸವಾಲು ಹಾಕಿರಲಿಲ್ಲ. ಮಾನ್ಯ ಬಂಗಾರಪ್ಪನವರು ಇದಕ್ಕೆ ಒಪ್ಪಿಕೊಳ್ಳಬೇಕು.

ಮಾನ್ಯ ದೇವೇಗೌಡರು ಹೇಳಿದ್ದನ್ನು ಒಪ್ಪಿಕೊಳ್ಳಲಿ.

ಶ್ರೀ ಎಸ್. ಬಂಗಾರಪ್ಪ.—ನಾನು ದೇವೇಗೌಡರ ಬಗ್ಗೆ ವೈಯಕ್ತಿಕವಾಗಿ ಮಾತನಾಡುತ್ತಿಲ್ಲ.

೪–೩೦ ಪಿ.ಎಂ

Sri H. D. Deve Gowda.—Whether it is Deve Gowda or some body else, if the Ministry headed by Ramakrishna Hegde has indulged in malpractice and collecting money from private medical colleges, we are prepared to subject ourselves to C. B. I. enquiry. Come on frame charges.

ಶ್ರೀ ಎಸ್. ಬಂಗಾರಪ್ಪ.—ಬಹಳ ಸಂತೋಷ ನಾವು ಕೂಡ ಒಪ್ಪಿಕೊಳ್ಳುತ್ತೇವೆ.

ಶ್ರೀ ಎಂ. ವೀರಪ್ಪಮೊಯ್ಲಿ.—ಈಗ ಮಾನ್ಯ ಸಚಿವರಾದ ದೇವೇಗೌಡರು ಎದ್ದುನಿಂತು ಸಿ.ಬಿ.ಐ. ಎನ್‌ಕ್ವಯರಿ ಮಾಡಿ ಎಂದು ಹೇಳಿದರು. ನಾವು ಎನ್‌ಕ್ವಯರಿ ಮಾಡಲು ಅದು ನಮ್ಮ ಕೈಯಲ್ಲಿ ಇದಿಯೇ?

Sri H. D. Deve Gowda.—State Government is only to give con sent You were a Minister, You know the limitations of the State Government. We are for that.

ಶ್ರೀ ಎಂ. ರಘುಪತಿ.—ಯಾರು ಯಾರು ಕಲೆಕ್ಟ್ ಮಾಡಿರುತ್ತಾರೆ, ಯಾರು ಯಾರು ಕೊಟ್ಟಿರುತ್ತಾರೆ ಎನ್ನುವುದು ಗೊತ್ತಾಗುತ್ತದೆ. ಸಿ.ಬಿ.ಐ. ಎನ್‌ಕ್ವಯರಿ ಮಾಡಿಸಿ.

ಶ್ರೀ ಎಚ್.ಡಿ. ದೇವೇಗೌಡ.—ಸರ್ಕಾರ ಯಾವುದರಮೇಲೆ ಎನ್‌ಕ್ವಯರಿ ಮಾಡಿಸಬೇಕು ಎನ್ನುವ ಬಗ್ಗೆ ಅವರು ಖಾಸಗಿ ಮ್ಯಾನೇಜ್‌ಮೆಂಟ್ ಆಗಲಿ ಅಥವಾ ಯಾರಿಂದಲೇ ಆಗಲಿ ಸರ್ಕಾರವಾಗಲಿ ಅಥವಾ ಮಂತ್ರಿಗಳು ಯಾರೇ ಇರಲಿ, ಮಾನ್ಯ ಮುಖ್ಯಮಂತ್ರಿಗಳಿಂದ ಹಿಡಿದು ಯಾರೇ ಮಂತ್ರಿಗಳು ಇರಲಿ ಖಾಸಗಿ ಮ್ಯಾನೇಜ್‌ಮೆಂಟ್‌ನಿಂದ ಹಣವನ್ನು ತೆಗೆದುಕೊಂಡಿರುವ ಬಗ್ಗೆ ಆರೋಪಣೆ ಮಾಡಿ ವಿವರಗಳನ್ನು ಕೊಟ್ಟು ನಿರ್ದಿಷ್ಟವಾದ ಆರೋಪಣೆ ಮಾಡುವುದಾದರೆ ಕೇಂದ್ರ ಸರ್ಕಾರದವರು ಮಾಡಲಿ,

ಸಿ.ಬಿ.ಐ. ಎನ್‌ಕ್ವಯರಿ ಮಾಡುವುದಾದರೆ ನಮ್ಮ ರಾಜ್ಯ ಸರ್ಕಾರದವರು ಕನ್‌ಸೆಂಟ್ ಕೊಡಲು ಸಿದ್ಧರಾಗಿದ್ದೇವೆ. ಯಾವುದರಮೇಲೆ ವಿಚಾರಮಾಡಬೇಕು ಎನ್ನುವ ಬಗ್ಗೆ ಕನ್‌ಸೆಂಟ್‌ಕೊಡುತ್ತೇವೆ. ಹಿಂದಿನ ಸರ್ಕಾರದವರನ್ನು ವಿಚಾರಮಾಡಬೇಕು ಎನ್ನುವುದನ್ನು ಹೇಳುವುದು ಬೇಕಾಗಿಲ್ಲ. ಹಿಂದಿನ ಸರ್ಕಾರದವರು ಏನು ಮಾಡಿದ್ದಾರೆ, ಬಿಟ್ಟಿದ್ದಾರೆ ಎನ್ನುವುದನ್ನು ಜನತೆಯೇ ತೀರ್ಮಾನ ಮಾಡಿದ್ದಾರೆ ಈ ಸರ್ಕಾರದವರು ಯಾವುದೇ ಖಾಸಗಿ ಮ್ಯಾನೇಜ್‌ಮೆಂಟ್‌ನಿಂದ ಪ್ರತ್ಯಕ್ಷವಾಗಿಯಾಗಲಿ, ಪರೋಕ್ಷವಾಗಿಯಾಗಲಿ ಹಣವನ್ನು ವಸೂಲು ಮಾಡಿದ್ದರೆ ಎನ್ನತಕ್ಕ ಆಪಾದನೆ ಮಾಡುವುದಾದರೆ ನೇರವಾಗಿ ಮಾಡಲಿ. ಈ ವಿಷಯದ ಬಗ್ಗೆ ಕನ್‌ಸೆಂಟ್ ಕೊಡುತ್ತೇವೆ. ಸಿ. ಬಿ. ಐ. ಎನ್‌ಕ್ವಯರಿ ಮಾಡಲಿ ಎಂದು ಹೇಳುತ್ತೇನೆ.

ಶ್ರೀ ಎಂ. ವೀರಪ್ಪಮೊಯ್ಲಿ.—ಮಾನ್ಯ ಬಂಗಾರಪ್ಪನವರು ಕೆಲವು ವಿಚಾರಗಳನ್ನು ಹೇಳಿದರು.

ಶ್ರೀ ಎಂ. ರಘುಪತಿ.—ಒಂದು ವಿಚಾರವನ್ನು ಹೇಳಿಲ್ಲ, ಎಲ್ಲ ವಿಚಾರಗಳನ್ನು ಹೇಳಿದ್ದಾರೆ.

ಶ್ರೀ ಎಂ. ವೀರಪ್ಪಮೊಯ್ಲಿ.—ಮಾನ್ಯ ಅಧ್ಯಕ್ಷರೇ ವಿರೋಧಪಕ್ಷದ ನಾಯಕರು ಮಾತನಾಡುವಾಗ ಗೌರವದಿಂದ ಕುಳಿತು ಕೇಳಬೇಕು. ಮಾನ್ಯ ಸದಸ್ಯರು ಕುಳಿತುಕೊಂಡು ಮಾತನಾಡಿಬಿಟ್ಟರೆ ಹೇಗೆ ? ಹಾಗಾದರೆ ಅವರೇ ಮಾತನಾಡಲಿ, ವಿರೋಧಪಕ್ಷದ ನಾಯಕರು ಮಾತನಾಡುವಾಗ ಯಾರೂ ಮಾತನಾಡಬಾರದು. ಸನ್ಮಾನ್ಯ ಅಧ್ಯಕ್ಷರೇ ಈಗ ಸದಸ್ಯರಾದಂಥ ಮಾನ್ಯ ಬಂಗಾರಪ್ಪನವರು ಕೆಲವು ವಿಚಾರಗಳನ್ನು ಮಾತನಾಡಿದರು. ಅದಕ್ಕೆ ಮಾನ್ಯ ಸಚಿವರಾದ ಶ್ರೀ ದೇವೇಗೌಡರು ಸಿ. ಬಿ. ಐ. ಎನ್‌ಕ್ವಯರಿ ಮಾಡಿ ಎಂಬ ಸವಾಲನ್ನು ಎಸಗಿದರು. ಮಾನ್ಯ ಸದಸ್ಯರು ಮಾತನಾಡುತ್ತಾ ನೀವು ತಂದಿರತಕ್ಕಂಥ ಬಿಲ್‌ನಲ್ಲಿ ಇರತಕ್ಕಂಥ ಕಲಮುಗಳನ್ನು ನೋಡಿದರೆ ಕೆಲವು ಅನುಮಾನಗಳು ಬರುತ್ತದೆ ಎನ್ನುವ ವಿಚಾರವನ್ನು ಹೇಳಿದ್ದಾರೆ. ಅದರಲ್ಲಿ ಏನು ಇದೆ ಅದನ್ನು ಮುಂದೆ ನೋಡೋಣ. ಈಗ ಸನ್ಮಾನ್ಯ ದೇವೇಗೌಡರು......

ಶ್ರೀ ಎಂ. ಮಹದೇವ್.—ನಮ್ಮ ನಾಯಕರು ಎದ್ದುನಿಂತು ಮಾತನಾಡುವಾಗ ಏತಕ್ಕೆ ತಾವು ಎದ್ದು ಎದ್ದು ಮಾತನಾಡುವುದು.

(ಗೊಂದಲ)

ಶ್ರೀ ಎಂ. ವೀರಪ್ಪಮೊಯ್ಲಿ.—ಒಂದು ಆಪಾದನೆ ಮಾಡುವಾಗ ಬಹಳ ಜವಾಬ್ದಾರಿಯಿಂದ ಮಾಡುತ್ತೇವೆ. ಸಿ.ಬಿ.ಐ. ಎನ್‌ಕ್ವಯರಿ ಮಾಡುವುದು ನಮ್ಮ ಕೈಯಲ್ಲಿ ಇಲ್ಲ. ಅದು ನಿಮ್ಮ ಕಕ್ಷೆಯಲ್ಲಿ ಎನ್‌ಕ್ವಯರಿ ಮಾಡಬೇಕು. ಅದನ್ನು ನೀವು ಮಾಡಬೇಕೆ ಹೊರತು ನಾವು ಮಾಡುವುದಲ್ಲ. ಎನ್‌ಕ್ವಯರಿ ಮಾಡಲೇಬೇಕು ಎನ್ನುವ ಹಠ ಇದ್ದರೆ ಸಾಬೀತು ಆಗಬೇಕು ಎನ್ನುವುದಿದ್ದರೆ ಜುಡಿಷಿಯಲ್ ಎನ್‌ಕ್ವಯರಿ ಮಾಡಿ. ಸಿ. ಬಿ. ಐ. ಎನ್‌ಕ್ವಯರಿ ಮಾಡಿಸಿ ಎಂದು ಸವಾಲ್ ನಮಗೆ ಏತಕ್ಕೆ ಮಾಡಬೇಕು. ಅವಶ್ಯಕವಾಗಿ ಸಿ.ಬಿ.ಐ. ಎನ್‌ಕ್ವಯರಿ ಮಾಡಬೇಕಿದ್ದರೆ ಕೇಂದ್ರ ಸರ್ಕಾರಕ್ಕೆ ಬರೆಯಿರಿ. ಮಾನ್ಯ ಆರೋಗ್ಯ ಸಚಿವರು ಒಮ್ಮೆಲೆ ಎದ್ದು ನಿಂತು ಆಪಾದನೆ ಮಾಡುವುದು ಸರಿಯೇ ? ಅವರಿಗೆ ಧೈರ್ಯ ಇದ್ದರೆ ಮಾಡಲಿ. ೧೯೮೦ನೇ ಇಸವಿಯಿಂದ ಅಲ್ಲ. ೧೯೭೨ನೇ ಇಸವಿಯಿಂದಲೇ ಯಾವ ಯಾವ ಮೆಡಿಕಲ್ ಕಾಲೇಜುಗಳು ಆಗಿವೆ ಅದೆಲ್ಲ ಎನ್‌ಕ್ವಯರಿ ಆಗಲಿ. ಧೈರ್ಯವಿದ್ದರೆ ಮಾಡಲಿ. ಇಲ್ಲಿ ಮದುವೆ ಮನೆಯಲ್ಲಿ ಕರಡಿ ಬಿಟ್ಟಹಾಗೆ ಮಾತನಾಡುವುದು ಬೇಡ. ಎನ್‌ಕ್ವಯರಿ ಮಾಡಲಿ, ಜನತೆಯ ಮುಂದೆ ಏನೇನು ಯಾವ ಯಾವ ಸಂದರ್ಭದಲ್ಲಿ ಯಾರು ಯಾರು ಮಾಡಿದ್ದಾರೆ ಎಂಬುದರ ಬಗ್ಗೆ ಎಲ್ಲ ವಿಚಾರಣೆ ಮಾಡಲಿ. ನಾವು ಎದುರಿಸುವುದಕ್ಕೆ ತಯಾರಾಗಿದ್ದೇವೆ. ಸರ್ಕಾರ ಎಂದರೆ ಮನೆಯ ಆಸ್ತಿ ಎಂದು ತಿಳಿದುಕೊಂಡರೆ. ಬ್ಯಾಗ್‌ನಲ್ಲಿ ಇಟ್ಟುಕೊಳ್ಳಲು ಅದೇನು ಆಸ್ತಿಯೋ ? ಸರ್ಕಾರವನ್ನು ನಡೆಸತಕ್ಕಂಥ ಜನರು ಜವಾಬ್ದಾರಿಯಿಂದ ಮಾತನಾಡಬೇಕು. ವಿಚಾರಣೆ ಮಾಡುವುದಕ್ಕೆ ಧೈರ್ಯ ಇರಬೇಕು, ಚಾಕ್ತಿ ಇರಬೇಕು. ನಿಮಗೆ ಅಧಿಕಾರವಿದೆ, ಎಲ್ಲ ಇದೆ. ಸಿ.ಬಿ.ಐ. ಎನ್‌ಕ್ವಯರಿ ಮಾಡಿ. ನಮ್ಮ ಬ್ಯಾಗ್‌ನಲ್ಲಿ ಹಾವು ಇದೆ, ಹಾವು ಇದೆ ಬಿಡುತ್ತೇವೆ ಬಿಡುತ್ತೇವೆ ಒಳಗೆ ಇದೆ ಎಂದು ಹೇಳುವುದು ಜವಾಬ್ದಾರಿಯಲ್ಲ. ಒಳಗೆ ಏನು ಇದೆ ಬಿಡಿ, ಅದು ಜನಕ್ಕೆ ಗೊತ್ತಾಗಲಿ.

(ಗೊಂದಲ)

ಫೈಲು ಏನು ಇದೆ ಎಲ್ಲಿ ಇದೆ ಎಲ್ಲ ನಮಗೂ ಗೊತ್ತು

ಶ್ರೀ ಎಂ. ರಘುಪತಿ —ಎಲ್ಲಿದೆ ತೋರಿಸಿ ?

ಶ್ರೀ ಎಚ್. ಡಿ. ದೇವೇಗೌಡ.—ಶ್ರೀಮಾನ್ ಬಂಗಾರಪ್ಪನವರು ಮಾಡಿದ ಆರೋಪಕ್ಕೆ ಅಥವಾ ಅಭಿಪ್ರಾಯಕ್ಕೆ ಅದಕ್ಕೆ ಸಂಬಂಧಪಟ್ಟ ಮಂತ್ರಿಗಳು ಉತ್ತರವನ್ನು ಕೊಡುತ್ತಾರೆ. ಆದರೆ ಒಂದು ವಿಚಾರ ಈವತ್ತು ಖಾಸಗಿ ಸಂಸ್ಥೆಗಳ ಬಗ್ಗೆ ನೇರವಾಗಿ ಆಪಾದನೆ ಮಾಡಿದ್ದಾರೆ. ಅದರಲ್ಲಿ ಹುರುಳು, ಇರಬಹುದು ಮತ್ತು ಸಂಚುಮಾಡಿ ಸರ್ಕಾರ ವ್ಯವಹಾರ ಮಾಡಿದೆ ಎಂದು ಏನು ಆಪಾದನೆ ಮಾಡುತ್ತಾರೆ ಅದರ ಬಗ್ಗೆ ಎನ್‌ಕ್ವಯರಿ ಮಾಡತಕ್ಕಂಥದ್ದು ಅಂದರೆ ಜುಡಿಷಿಯಲ್ ಎನ್‌ಕ್ವಯರಿ ಮಾಡಲು ನಮಗೆ ಅಧಿಕಾರವಿದೆ. ಆದರೆ ಸಿ.ಬಿ.ಐ. ಎನ್‌ಕ್ವಯರಿ ಮಾಡಲು ನಮಗೆ ಅಧಿಕಾರವಿಲ್ಲ. ತಾವು ಯಾವ ಆಪಾದನೆ ಕುರಿತು ಈ ಸದನದಲ್ಲಿ ಹೇಳಿರುತ್ತೀರಿ ಅದರ ಮೆರಿಟ್ ಬಗ್ಗೆ ಯೋಚನೆ ಮಾಡುವುದಿಲ್ಲ. ತಾವು ಮಾಡಿರತಕ್ಕಂಥ ಆಪಾದನೆಯನ್ನು ಕೇಂದ್ರ ಸರ್ಕಾರಕ್ಕೆ ರವಾನೆ ಮಾಡಿದರೆ ನಮ್ಮದು ಒಪ್ಪಿಗೆ ಇದೆ. ತನಿಖೆ ಮಾಡಲಿ. ಒಂದು ವೇಳೆ ಖಾಸಗಿ ಸಂಸ್ಥೆಯಲ್ಲಿ ಹಣವನ್ನು ವಸೂಲು ಮಾಡಿರತಕ್ಕಂಥ ಪ್ರಶ್ನೆ ಇದ್ದರೆ ಇಡೀ ಸಚಿವ ಸಂಪುಟ ರಾಜಿನಾಮೆಯನ್ನು ಕೊಟ್ಟು ಹೊರಗೆ ಹೋಗುತ್ತೇವೆ. ಇಲ್ಲದಿದ್ದರೆ ನೀವು ರಾಜೀನಾಮೆಯನ್ನು ಕೊಟ್ಟು ಹೋಗಲು ಒಪ್ಪಿಕೊಳ್ಳುತ್ತೀರಾ ?

(ಗೊಂದಲ)

ಶ್ರೀ ಎಂ. ರಘುಪತಿ.—ಈಗ ಈ ಖಾಸಗಿ ಮೆಡಿಕಲ್ ಕಾಲೇಜುಗಳು ಯಾರ ಯಾರ ವಶದಲ್ಲಿವೆ ಎಂಬುದು ಎಲ್ಲರಿಗೂ ಗೊತ್ತಿದೆ. ಬೇಕಾದರೆ ನಾನು ಹೆಸರುಗಳನ್ನು ಹೇಳುತ್ತೇನೆ. ಇವರುಗಳೆಲ್ಲಾ ಈ ಕಾಲೇಜುಗಳನ್ನು ಸರ್ಕಾರದ ವಶಕ್ಕೆ ಒಪ್ಪಿಸಲಿ

ಶ್ರೀ ಗೋವಿಂದ ಪಿ. ಒಡೆಯರಾಜ್.—ಎಲ್ಲವನ್ನೂ ಸರ್ಕಾರದ ವಶಕ್ಕೆ ತೆಗೆದುಕೊಳ್ಳಿ.

ಶ್ರೀ ಎಂ. ರಘುಪತಿ.—ಈ ಮೊದಲು ತಮಗೆ ಬೇಕಾದವರಿಗೆಲ್ಲಾ ಕಾಲೇಜುಗಳನ್ನು ನಡೆಸಲು ಅನುಮತಿ ಕೊಟ್ಟು ಈಗ ಸರ್ಕಾರದ ವಶಕ್ಕೆ ತೆಗೆದುಕೊಳ್ಳಿ ಎಂದು ಹೇಳಿದರೆ ನೂರು ಕೋಟಿ ರೂಪಾಯಿಗಳು ಬೇಕು. ಅಷ್ಟು ಹಣ ಎಲ್ಲಿದೆ?

SRI GOVIND P. VODEYARAJ.—If the Government has got guts let them take over the medical colleges run by private managements. It is a challenge.

(Interruptions)

MR. DEPUTY SPEAKER.—Order, Order

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ. ಕ್ಯಾಪಿಟೇಷನ್ ಫೀ ಅಥವಾ ಶುಲ್ಕವನ್ನು ರದ್ದು ಪಡಿಸುತ್ತೇವೆಂಬು ಹೇಳಿದವರೇ ಇವೊತ್ತು ಅದನ್ನು ರದ್ದುಪಡಿಸಿದೆ ಅದನ್ನು ವಸೂಲಿ ಮಾಡುವಂತಹ ಅಧಿಕಾರವನ್ನು ಈ ಖಾಸಗಿ ಮೆಡಿಕಲ್ ಕಾಲೇಜ್‌ನವರಿಗೆ ಕೊಟ್ಟಿರುವುದನ್ನು ನೋಡಿದರೆ ನಮಗೆ ಅನುಮಾನಗಳು ಸ್ಪಷ್ಟವಾಗಿ ಬರುತ್ತವೆಂಬ ಮಾತನ್ನು ನಾನು ಪದೇಪದೇ ಹೇಳಿದ್ದೇನೆ. ಆಮೇಲೆ ಖಚಿತವಾಗಿ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಏನೆಂದರೆ, ಇವೊತ್ತು ನಮಗೆ ಗೊತ್ತಿರುವಂತಹ ಕೆಲವು ವಿಷಯಗಳು ಇವೆ ಮಾನ್ಯ ದೇವೇಗೌಡರು ಇಲ್ಲಿದ್ದಾರೆ. ಅವರಿಗೆ ಅನೇಕ ವರ್ಷಗಳ ಅನುಭವವಿದೆ. ನಾನು ಅವರ ಬಗ್ಗೆಯಾಗಲೀ ಅಥವಾ ಇನ್ನೊಬ್ಬರ ಬಗ್ಗೆಯಾಗಲೀ ಮಾತನಾಡುತ್ತಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ನನ್ನ ಬಗ್ಗೆಯಾಗಲೀ, ಇನ್ನೊಬ್ಬರ ಬಗ್ಗೆಯಾಗಲೀ ಬೇಡ. ಈಗಿನ ಸಚಿವ ಸಂಪುಟದ ಸದಸ್ಯರು ಯಾರೇ ಇರಲಿ, ಮುಖ್ಯ ಮಂತ್ರಿಗಳಿಂದ ಹಿಡಿದು ಕಿರಿಯ ಮಂತ್ರಿಯವರಿಗೆ. ಯಾರೇ ಆಗಿರಲಿ. ಈ ಪ್ರೈವೇಟ್ ಮ್ಯಾನೇಜ್‌ಮೆಂಟ್‌ನವರ ಹತ್ತಿರ ಯಾವುದೇ ರೀತಿಯಿಂದ ಅಂದರೆ ಪ್ರತ್ಯಕ್ಷವಾಗಿಯಾಗಲೀ, ಪರೋಕ್ಷವಾಗಿಯಾಗಲೀ ಹಣವನ್ನು ಸಂಗ್ರಹ ಮಾಡಿದ್ದರೆ ನೇರವಾಗಿ ಹೇಳಿ. State Government is prepared to give its consent for a

C.B.I. Inquiry. ಈಗ ನಾನು ಮೆರಿಟ್ ಬಗ್ಗೆ ಹೋಗುವುದಿಲ್ಲ ಆದರೆ ತಾವು ಕ್ಯಾಪಿಟೇಷನ್ ಫೀ ಬಗ್ಗೆ ಏನು ಸಂಶಯ ವ್ಯಕ್ತಪಡಿಸಿದ್ದೀರಿ, ಆ ಬಗ್ಗೆ ಸಂಬಂಧಪಟ್ಟ ಮಂತ್ರಿಗಳು ಉತ್ತರ ಕೊಡುತ್ತಾರೆ.

ಶ್ರೀ ಎಸ್. ಬಂಗಾರಪ್ಪ.—ಈ ಬಿಲ್‌ನಲ್ಲಿರುವಂತಹ ಕೆಲವು ಕಲಂಗಳನ್ನು ನೋಡಿದಾಗ ತಾವು ಈ ಮೊದಲು ಹೇಳಿದ್ದಕ್ಕೂ ಇಲ್ಲಿರುವುದಕ್ಕೂ ಅಜಗಜಾಂತರ ವ್ಯತ್ಯಾಸಗಳ ಕಂಡು ಬಂದಿರುವುದರಿಂದ ಅನುಮಾನಗಳು ಬರುತ್ತಿವೆ. ಇದರ ಜೊತೆಗೆ ಇನ್ನೂ ಕೆಲವು ವಿಚಾರಗಳು ತನಿಖೆಯಾಗಬೇಕು ಎನ್ನುವುದಾದರೆ ಅದಕ್ಕೆ ಎರಡು ದಾರಿಗಳಿವೆ. ಒಂದು...

MR. DEPUTY SPEAKER.—Now there is no question of appointing any commission of inquiry and such other things. Therefore, I request the hon'ble Member to continue his speech.

ಶ್ರೀ ಎಸ್ ಬಂಗಾರಪ್ಪ.—ಇವರೇ ಒಪ್ಪಿಗೆ ಕೊಟ್ಟರೆ ತನಿಖೆ ಏತಕ್ಕೆ ಆಗಬಾರದು? ಇದರಲ್ಲಿರುವ ಪ್ರಶ್ನೆಯೇನಾದರೂ ಇಷ್ಟೆ, ಕೆಲವು ವಿಚಾರಗಳು ನಮ್ಮ ಗಮನಕ್ಕೆ ಬಂದಿವೆ. ಅದೇನೆಂದರೆ, ಈ ಖಾಸಗಿ ಮೆಡಿಕಲ್ ಕಾಲೇಜುಗಳವರು ಕಾನೂನಿನ ವ್ಯಾಪ್ತಿಯಲ್ಲಿ ಹಣ ವಸೂಲಿ ಮಾಡುವುದರ ಜೊತೆಗೆ ಬೇರೆ ರೀತಿಯಿಂದಲೂ ವ್ಯವಹಾರ ನಡೆಸುವುದು ನಡೆದಿದೆ. ಈ ಮೊದಲು ಸರ್ಕಾರ ಕೆಲವು ಸೀಟ್‌ಗಳನ್ನು ತನ್ನ ಒಂದು ವಿವೇಚನೆಯಂತೆ ಹಂಚಲು ಅಧಿಕಾರ ಇಟ್ಟುಕೊಂಡಿತ್ತು. ಆದರೆ ಈಗಿನ ಸರ್ಕಾರ ಈ ಅಧಿಕಾರವನ್ನು ಸಹ ಬಿಟ್ಟುಕೊಟ್ಟಿದೆ. ಈ ಅಧಿಕಾರವನ್ನು ಸರ್ಕಾರವೇ ಇಟ್ಟುಕೊಳ್ಳಬೇಕಾಗಿತ್ತು ಎಂಬುದೇ ನನ್ನ ಅಭಿಪ್ರಾಯ.

ಶ್ರೀ ಎಚ್.ಡಿ. ದೇವೇಗೌಡ.—ಈ ಸಭೆ ಒಪ್ಪಿದರೆ ಆ ಒಂದು ಅಧಿಕಾರವನ್ನು ಇಟ್ಟುಕೊಳ್ಳೋಣ ಈ ಹಿಂದಿನ ಸರ್ಕಾರ ೫ ವರ್ಷಗಳ ಅವಧಿಯಲ್ಲಿ ಹಂತಹಂತವಾಗಿ ಕ್ಯಾಪಿಟೇಷನ್ ಫೀಯನ್ನು ರದ್ದು ಮಾಡುವ ಬಗ್ಗೆ ಒಂದು ಎಕ್ಸಿಕ್ಯುಟಿವ್ ಆರ್ಡರ್‌ನ್ನು ಹೊರಡಿಸಿತು. ಅದರ ಒಂದು ಮೆರಿಟ್ಸ್ ಮತ್ತು ಡೀ-ಮೆರಿಟ್ಸ್ ಬಗ್ಗೆ ನಾನು ಈಗ ಹೋಗುವುದಿಲ್ಲ. ಈ ಆರ್ಡರ್ ವಿರುದ್ಧ ಕೆಲವರು ಕೋರ್ಟಿಗೆ ಹೋಗಿ ಸ್ಟೇ ತಂದರು. ಈಗ ನಾವು ಏನು ಒಂದು ಆರ್ಡಿನೆನ್ಸ್ ಹೊರಡಿಸಿದ್ದೇವೆ; ಇದರ ಪ್ರಕಾರ ಸರ್ಕಾರದಿಂದ ಯಾವುದೇ ಆರ್ಥಿಕ ನೆರವು ಪಡೆಯದಂಥ ಕಾಲೇಜುಗಳಲ್ಲಿಯೂ ಸಹ ೨೦ ಪರ್ಸೆಂಟ್ ಸೀಟ್‌ಗಳನ್ನು ಸರ್ಕಾರ ತೆಗೆದುಕೊಂಡಿರುವುದಕ್ಕೆ ತಾವು ಮೆಚ್ಚುಗೆಯನ್ನು ವ್ಯಕ್ತಪಡಿಸಬೇಕಾಗಿತ್ತು.

ಶ್ರೀ ಎಂ. ವೀರಪ್ಪಮೊಯ್ಲಿ.—ತಾವು ೨೦ ಪರ್ಸೆಂಟ್ ಸೀಟ್‌ಗಳನ್ನು ತೆಗೆದುಕೊಂಡಿದ್ದು ಏನೂ ಮಹಾ ದೊಡ್ಡ ಸಾಧನೆ ಅಲ್ಲ. ಇದಕ್ಕೂ ಮೊದಲು ೫೦ ಪರ್ಸೆಂಟ್ ಸೀಟ್‌ಗಳನ್ನು ಮೆರಿಟ್ ಮೇಲೆ ಕೊಟ್ಟಿದ್ದು ಇದೆ.

ಶ್ರೀ ಕೆ.ಎಚ್. ರಂಗನಾಥ್.—ಈ ಖಾಸಗಿ ಮೆಡಿಕಲ್ ಕಾಲೇಜುಗಳಲ್ಲಿ ೫೦ ಪರ್ಸೆಂಟ್ ಸೀಟ್‌ಗಳನ್ನು ಪಡೆದು ಮೆರಿಟ್ ಮೇಲೆ ಹಂಚುವ ಕೆಲಸ ಶ್ರೀ ದೇವರಾಜ ಅರಸ್ ಅವರ ಕಾಲದಲ್ಲಿಯೇ ಪ್ರಾರಂಭವಾಯಿತು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ದೇವೇಗೌಡರು ಈ ಕಡೆ ಇದ್ದಾಗ ಈ ವಿಚಾರದಲ್ಲಿ ಬಡವರಿಗೆ ಅನ್ಯಾಯವಾಗುತ್ತಿದೆ ಅದರಲ್ಲಿಯೂ ಹಿಂದುಳಿದಿರತಕ್ಕಂಥ ಹಳ್ಳಿಯ ಬಡವರಿಗೆ ಅನ್ಯಾಯವಾಗುತ್ತಿದೆ ಎಂದು ಹೇಳುತ್ತಿದ್ದರು. ಆದರೆ ಈಗಿನ ಸರ್ಕಾರದವರು ಹೊರಡಿಸಿರತಕ್ಕಂಥ ಹೊಸ ಆರ್ಡಿನೆನ್ಸ್ ಪ್ರಕಾರ ಮೆರಿಟ್ ಮೇಲೆ ಕೇವಲ ೧೫ ಪರ್ಸೆಂಟ್ ಸೀಟ್‌ಗಳನ್ನು ಹಂಚಲಾಗುತ್ತದೆ. ಇದರ ಜೊತೆಗೆ ಹತ್ತು ಪರ್ಸೆಂಟ್ ಸೀಟ್‌ಗಳನ್ನು ಮೆರಿಟ್ ಮತ್ತು ಯಾರು ೫೦ ಸಾವಿರ ರೂಪಾಯಿಗಳ ಡಿಪಾಜಿಟ್ ಮಾಡುತ್ತಾರೋ ಅಂತಹವರಿಗೆ ಕೊಡಲಾಗುತ್ತದೆ. ಆದರೆ ಇದಕ್ಕೂ ಮೊದಲು ಸರ್ಕಾರದಿಂದ ಯಾವುದೇ ಸಹಾಯ ಪಡೆಯದ ಖಾಸಗಿ ಮೆಡಿಕಲ್ ಕಾಲೇಜ್‌ಗಳಲ್ಲಿ ಹತ್ತು ಪರ್ಸೆಂಟ್ ಸೀಟ್‌ಗಳನ್ನು ಸರ್ಕಾರದ ವಿವೇಚನೆಗೆ ಒಳಪಟ್ಟು ಹಂಚುವ ವ್ಯವಸ್ಥೆ ಇತ್ತು. ಈ ಸೀಟ್‌ಗಳನ್ನು ಪಡೆದವರಿಂದ ಒಂದು ಪೈಸೆ ಸಹ ತೆಗೆದುಕೊಳ್ಳುತ್ತಿರಲಿಲ್ಲ. ಯಾರೇ ಮಂತ್ರಿಗಳು ಒಂದು ಕಾಗದ ಬರೆದರೂ ಸಹ ಈ ಸರ್ಕಾರದ ಕೋಟಾದಲ್ಲಿ ಸೀಟ್‌ಗಳು ದೊರೆಯುತ್ತಿದ್ದವು. ಈ ರೀತಿಯಿಂದ ಸೀಟ್‌ಗಳು ಈ ಮೊದಲು ಸಿಗುತ್ತಿತ್ತು ಎಂದರೆ ಸೀಟ್ ಪಡೆದವರು ದುಡ್ಡು ಕೊಟ್ಟಿದ್ದಾರೆಂದು ಅರ್ಥವೇ?

(ಗಲಾಟೆ)

Mr. Deputy Speaker.—Please be seated. One request to the House. When one member is Speaking, whether ಟ್ರೆಜರಿ ಬೆಂಚ್‌ನ ಕಡೆಯಾಗಲೀ ಅಥವಾ ವಿರೋಧಪಕ್ಷದ ಕಡೆಯಾಗಲಿ, ದಯವಿಟ್ಟು ಅವಕಾಶ ಮಾಡಿಕೊಡಿ. ನೀವು ಮಾತನಾಡಬೇಕಾದರೆ ನಿಮಗೆ ಕಾಲಾವಕಾಶ ಮಾಡಿಕೊಡುತ್ತೇನೆ. ಸಣ್ಣ ರಾಗ ದೊಡ್ಡ ರಾಗ ದಯವಿಟ್ಟು ತೆಗೆಯಬೇಡಿ. That is the request. Let Mr. Bangarappa speak now.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—೧೦ ಸೀಟುಗಳನ್ನು ಅವರ ಮಕ್ಕಳಿಗೆ ಕೊಡಬೇಕಾಗಿತ್ತು. ಈಗ ಆ ಚಾನ್ಸ್ ಇಲ್ಲ. ಮಂತ್ರಿಗಳು ಲೆಟರ್ ಬರೆಯುತ್ತೀರಿ. ಅಂದರೆ ದುಡ್ಡು ತೆಗೆದುಕೊಂಡು ಬರೆಯುತ್ತೀರಿ ಎಂದು ಹೇಳುತ್ತಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.—ನಮ್ಮ ಪಕ್ಷದ ನಾಯಕರು ಮಾತನಾಡಬೇಕೆಂದು ಎದ್ದು ನಿಂತಾಗ ತಾವು ಅವಕಾಶ ಮಾಡಿಕೊಡಬೇಕು.

Mr. Deputy Speaker.—Mr. Yediyurappa, your leader has already expressed his views.

ಡಾ. ವಿ. ಎಸ್. ಆಚಾರ್ಯ.—ಮಾನ್ಯ ಉಪಸಭಾಪತಿಯವರೆ, ಈಗ ದೇವೇಗೌಡರು ....

Mr. Deputy Speaker.—Mr. Acharya, you have said every thing The Minister is going to reply to all your questions. Why are you interrupting unnecessarily ?

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಖರ್ಗೆಯವರು ಒಂದು ಮಾತು ಹೇಳಿದರು, ಈ ಕಡೆಯ ಸದಸ್ಯರು ಕೂಡ ಹೇಳಿದ್ದಾರೆ. ನಾವು ಬದಲಾವಣೆ ಮಾಡಿಲ್ಲ.

ಉಪಾಧ್ಯಕ್ಷರು.—ಮಧ್ಯೆ ಯಾರೂ ಮಾತನಾಡಬೇಡಿ.

ಶ್ರೀ ಎಚ್. ಡಿ. ದೇವೇಗೌಡ.—೧೦ ಸೀಟುಗಳನ್ನು ಗೌರ್ನಮೆಂಟ್‌ನವರು ಮಾರಾಟ ಮಾಡಿದ್ದಾರೆಂದು ಹೇಳುವುದಕ್ಕೆ ಹೋಗುವುದಿಲ್ಲ. ಆಗಲೂ ದಾಕ್ಷಿಣ್ಯದ ಮೇಲೆ ಕೊಟ್ಟಿರಬಹುದು. ರಾಜಕೀಯ ಒತ್ತಡದಿಂದ, ಕೇಂದ್ರ ಸರ್ಕಾರದ ಸ್ನೇಹಿತರಿಂದ ಒತ್ತಡ ಬಂದಿರಬಹುದು ಅದರ ಬಗ್ಗೆ ಲಘುವಾಗಿ ಮಾತನಾಡುವುದಕ್ಕೆ ಹೋಗುವುದಿಲ್ಲ. ಶೇಕಡ ೧೦ ಸೀಟುಗಳನ್ನು ಒತ್ತಡಕ್ಕೆ ಮಣಿದು ಕೊಟ್ಟರೆ ಆಕ್ಷೇಪಣೆ ಬರುತ್ತದೆಂದು ಕೈಬಿಟ್ಟು, ಜನರಲ್ ಪೂಲ್‌ಗೆ ಸೇರಿಸಿಕೊಂಡರೆ ಏನಾಗುತ್ತದೆ, ಜನರಲ್ ಸೀಟು ೭೦ ಹೋಗಿದ್ದು ೧೦ ಸೀಟು ಡಿಸ್ಕ್ರಿಷನರಿ ಕೋಟಾ ಸರ್ಕಾರದ್ದು ಇದ್ದು ಷೆಡ್ಯೂಲ್ಡ್ ಕಾಸ್ಟ್ ಪ್ರೊಪೋರ್ಷನೇಟ್ ಬ್ಯಾಕ್‌ವರ್ಡ್ ಕ್ಲಾಸ್ ಪ್ರೊಪೋರ್ಷನೇಟ್ ಬರುತ್ತದೆ, ನಿಮ್ಮ ಮೆರಿಟ್ ಮೇಲೂ ಬರುತ್ತದೆ. ಬಹುಶಃ ಇದರಲ್ಲಿ ಆತಂಕವೇನೂ ಇಲ್ಲಾ. ಡಿಸ್ಕ್ರಿಷನರಿ ಕೋಟಾ ಒಂದೇ ಜಾತಿಗೆ ಹೋಗುತ್ತಿದೆ, ಅದಕ್ಕೆ ಬದಲಾಗಿ ಒತ್ತಡದ ಮೇಲೆ ಹೋಗುತ್ತದೆ, ಆ ಸೀಟುಗಳನ್ನು ಯಾರು ಹೆಚ್ಚಾಗಿ ದುಡ್ಡು ಕೊಡುತ್ತಾರೆ ರಾಜಕೀಯ ಮಾಡುತ್ತಾರೆ ಕೊಡುವುದು ಅಲ್ಲ. ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಅನ್‌ಏಡೆಡ್ ಕಾಲೇಜುಗಳಿಗೆ ಈ ಸಾರಿಯಿಂದ ೨೦ ಪರ್ಸೆಂಟ್ ಕಡಿತ ಮಾಡಿದ್ದೇವೆ. ಹಿಂದಿನ ಸರ್ಕಾರ ಆಯಾಯ ಕಾಲೇಜುಗಳಿಗೆ ಕೊಡತಕ್ಕ ಸ್ಯಾಂಕ್ಷನ್ ಸ್ಟ್ರೆಂತ್ ಯೂನಿವರ್ಸಿಟಿ ಇನ್‌ಟೇಕ್ ಮೇಲೆ ಸರ್ಕಾರ ಇಷ್ಟು ಮಾಡಿವೆ. ೧೨೦೦ ಸೀಟು ಇನ್‌ಟೇಕ್ ಮಾಡಿದ್ದೇವೆ. ದಿನೇ ದಿನೇ ಕಡಿಮೆ ಆಗಬೇಕೆಂದು ಮಾಡಿದ್ದೇವೆ. ೨೦ ಪರ್ಸೆಂಟ್ ಪ್ರಕಾರ ೧೨೦೦ ಸೀಟುಗಳು ಜನರಲ್ ಮೆರಿಟ್‌ಗೆ ಬಂದಿದೆ. ಶೇಕಡ ೧೮ರಷ್ಟು ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ ಇದೆ. ಅದೇ ರೀತಿ ಬ್ಯಾಕ್‌ವರ್ಡ್ ಕ್ಲಾಸ್ಸ್‌ನವರಿಗೆ ಹೋಗುತ್ತದೆ. ಹಿಂದೆ ಈ ಸೌಲಭ್ಯವಿರಲಿಲ್ಲ. ಯಾವುದೇ ಮುಂಚಿನ್ನು ದೂರೆ. ಇಲ್ಲದೇ ಟ್ಯೂಷನ್ ಫೀ ತೆಗೆದುಕೊಂಡು ಕೊಡುವುದರ ಬಗ್ಗೆ ಬಗ್ಗೆ ಒಂದು ಸಮಿತಿ ಮಾಡಿ, ಮೆಡಿಕಲ್ ಕಾಲೇಜು ಮತ್ತು ಇಂಜಿನಿಯರಿಂಗ್ ಕಾಲೇಜುಗಳಿಗೆ ಆಗತಕ್ಕಂತಹ ಖರ್ಚನ್ನು ಲೆಕ್ಕಾಚಾರ ಮಾಡಿ ರಿಕರಿಂಗ್ ಎಕ್ಸ್‌ಪೆಂಡಿಚರ್ ಎಷ್ಟು ಎಂಬುದರ ಬಗ್ಗೆ ಅವರು ಒಂದು ವರದಿ ಕೊಡಲಿ, ಅದರ ಮೇಲೆ ಮಾಡೋಣ. We are not going to hide anything.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾನು ಕೇಳುವುದು ಇಷ್ಟು, ಇವತ್ತು ಶೇಕಡ ೧೦ರಷ್ಟು ಸೀಟುಗಳನ್ನು ಕೊಡುವುದನ್ನು ಯಾವ ಮೆರಿಟ್ ಮೇಲೆ ಮಾಡಿದ್ದೀರಿ, ೫೦ ಸಾವಿರ ರೂಪಾಯಿ ಡಿಪಾಸಿಟ್ ತೆಗೆದುಕೊಂಡು ಕೊಟ್ಟರೆ, ಆ ಯಾವ ರಿಸರ್ವೇಶನ್ ಇದೆ ? ರೈತರ ಮಕ್ಕಳಿಗೆ ಸೀಟು ಸಿಗುತ್ತದೆಯೇ ? ನೀವು ಈಗ ಮಾಡಿರುವುದರಿಂದ ಯಾವ ಬಡವರಿಗೂ ಅನುಕೂಲವಾಗುವುದಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಷೆಡ್ಯೂಲ್ಡ್ ಕ್ಯಾಸ್ಟ್ ಬ್ಯಾಕ್‌ವರ್ಡ್ ಕಾಸ್ಟ್‌ನವರ ಕೋಟಾ ಅವರವರಿಗೆ ಹೋಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—೧೦ ಸೀಟುಗಳನ್ನು ನೀವೇ ಇಟ್ಟುಕೊಂಡಿದ್ದರೆ ಬಡವರ ಮಕ್ಕಳಿಗೆ ಅದರಲ್ಲಿ ೫ ಸೀಟುಗಳನ್ನು ಕೊಡಬಹುದಾಗಿತ್ತು.

ಶ್ರೀ ಎಚ್. ಡಿ. ದೇವೇಗೌಡ.—೫೦ ಸಾವಿರ ಡಿಪಾಸಿಟ್ ಸ್ಕೀಮ್‌ನಲ್ಲಿ ಕೊಡತಕ್ಕದ್ದು ಮೆರಿಟ್ ಸ್ಕೀಮ್‌ನಲ್ಲಿ ಕೊಡತಕ್ಕದು ಏನಿದೆ ಅದು ತಪ್ಪು ಎಂದು ಸಭೆಯ ಅಭಿಪ್ರಾಯವಾದರೆ, ಅದರಲ್ಲಿ ನನ್ನದೇನೂ ಭಿನ್ನಾಭಿಪ್ರಾಯವಿಲ್ಲ.

ಶ್ರೀ ಕೆ. ಎಚ್. ರಂಗನಾಥ್.—ಈ ವರ್ಷ ಮೆಡಿಕಲ್ ಸೀಟು ೯೩ ಪರ್ಸೆಂಟ್‌ಗೆ ಬಂದು ನಿಂತಿದೆ. ಷೆಡ್ಯೂಲ್ಡ್ ಕ್ಯಾಸ್ಟ್ ಅಂಡ್ ಷೆಡ್ಯೂಲ್ಡ್ ಟ್ರೈಬ್ ೭೪ ಪರ್ಸೆಂಟ್‌ಗೆ ಬಂದು ನಿಂತಿದೆ. ಅಂದರೆ ೧೦೦ರಿಂದ ೯೩ರವರೆಗೆ ಮಾತ್ರ ಸೀಟು ಸಿಕ್ಕಿದೆ ಎನ್ನುವ ಒಂದು ಅಭಿಪ್ರಾಯ ಬರುತ್ತದೆ. ಷೆಡ್ಯೂಲ್‌ಕ್ಯಾಸ್ಟ್‌ನ ವಿದ್ಯಾರ್ಥಿಗಳು ೮೦ ಪರ್ಸೆಂಟ್ ತೆಗೆದುಕೊಳ್ಳದಿದ್ದರೆ ಅವರು ೫೦ ಸಾವಿರ ರೂಪಾಯಿ ಕೊಡಲಿಕ್ಕೆ ಸಾಧ್ಯವೆ ಅದನ್ನು ತಾವು ವಿಚಾರ ಮಾಡಿ. ೧೦ ಸೀಟುಗಳನ್ನು ತಮ್ಮಲ್ಲಿ ಇಟ್ಟುಕೊಂಡಿದ್ದರೆ ಆಪಾದನೆಗಳು ಬರುತ್ತವೆ, ಆದರೆ ನ್ಯಾಯವಾಗಿ ಕೊಡಬಹುದಾಗಿತ್ತು, ಇನ್ನೂ ಅರ್ಥ ಉಳಿಯುತ್ತಿತ್ತು ಎನ್ನುವ ಅಭಿಪ್ರಾಯ ಹೇಳುತ್ತಿದ್ದೇನೆ. ಈಗ ಯಾರಿಗೆ ಕೊಡುವುದಕ್ಕೆ ಸಾಧ್ಯವಿದೆ.

ಶ್ರೀ ಎಚ್. ಡಿ. ದೇವೇಗೌಡ.—ನಾನು ಆ ಜಾಗದಲ್ಲಿ ಕುಳಿತಿದ್ದಾಗ, ಸರ್ಕಾರಿ ನೌಕರಿಗೆ ಆಯ್ಕೆ ಮಾಡುವಾಗ ಮೆರಿಟ್ ಮೇಲೆ ಆಯ್ಕೆ ಮಾಡಬೇಕೆನ್ನುವುದನ್ನು ನಾನು ಪ್ರತಿಭಟನೆ ಮಾಡಿದ್ದೇನೆ. ಮೆರಿಟ್‌ನ ಸೌಲಭ್ಯ ನ್ಯಾಯಯುತವಾಗಿದೆ ಎನ್ನುವ ಖಚಿತ ಅಭಿಪ್ರಾಯವಿದೆ. ಇದರಲ್ಲಿ ಯಾವುದೇ ಸಂಶಯ ಬೇಡ. ಆದರೆ ೧೦ ಸೀಟುಗಳನ್ನು ಕೊಡುವಾಗ ಯಾರು ೫೦ ಸಾವಿರ ರೂಪಾಯಿಗಳನ್ನು ಡಿಪಾಸಿಟ್ ಇಡುತ್ತಾರೆ. ಅಂತಹವರಿಗೆ ಕೊಡಬೇಕು ಎನ್ನುವ ನಿರ್ಣಯ ಮಾಡಿದ್ದೇವೆ. ಮೆರಿಟ್ ಮೇಲೆ ಕೊಡದೆ ಹೋದರೆ ದೊಡ್ಡ ಆಕ್ಷೇಪಣೆ ಬರುತ್ತದೆ ಅದರ ಬಗ್ಗೆ ಚರ್ಚೆಯಾಯಿತು. ಇವತ್ತು ಸದನದ ಅಭಿಪ್ರಾಯದಂತೆ ಒಟ್ಟು ೭೦ ಸೀಟುಗಳನ್ನು ಗ್ರಾಮಾಂತರ ಪ್ರದೇಶದವರಿಗೆ ಅನುಕೂಲ ವಾಗುವ ದೃಷ್ಟಿಯಿಂದ ಮೆರಿಟ್ ಆಧಾರದ ಮೇಲೆ ಕೊಡುವುದು ಬೇಡ ಎನ್ನುವುದಾದರೆ.........

ಶ್ರೀ ಕೆ. ಎಚ್. ರಂಗನಾಥ್.—ಗ್ರಾಮಾಂತರ ಪ್ರದೇಶದವರಿಗೆ ಒಂದು ಸೀಟೂ ಸಿಗುವುದಿಲ್ಲ. ಗ್ರಾಮಾಂತರ ಪ್ರದೇಶದ ಕಾಲೇಜುಗಳಲ್ಲಿ ಯಾವ ಲೈಬ್ರರಿಯೂ ಇಲ್ಲಾ, ಬೀರೂ ಇಲ್ಲಾ, ಲೆಕ್ಚರರ್ ಇಲ್ಲಾ, ಅಲ್ಲಿ ಯಾವನೂ ಇಲ್ಲಾ, ಲ್ಯಾಬರೇಟರಿಯೂ ಇಲ್ಲಾ.

ಉಪಾಧ್ಯಕ್ಷರು.—ಮಂತ್ರಿಗಳು ವಿವರಣೆ ಕೊಡುತ್ತಿದ್ದಾರೆ ಕೊಡಲಿ.

ಶ್ರೀ ಎಚ್. ಡಿ. ದೇವೇಗೌಡ.—ಇವತ್ತು ಇಡೀ ಸದನ ಆ ರೀತಿಯ ಅಭಿಪ್ರಾಯಕ್ಕೆ ಬರುವು ದಾದರೆ ತಮ್ಮ ಮುಂದೆ ಬಿಲ್ ಇದೆ ತಿದ್ದುಪಡಿ ಮಾಡೋಣ.

ಶ್ರೀ ಕೆ. ಎಚ್. ರಂಗನಾಥ್.—ಎಕ್ಸಿಕ್ಯುಟಿವ್ ಆರ್ಡರ್ ಆದಮೇಲೆ ಯಾವುದಾದರೂ ಬದಲಾವಣೆ ಮಾಡಬೇಕಾಗಿತ್ತು, ಸದನದ ಮೂಲಕ ಈಗ ಕೈ ಕಟ್ಟಿಸುತ್ತಿದ್ದಾರೆ, ಇದು ಆಕ್ಟ್ ಆಗಿ ಬರುತ್ತದೆ. It becomes the statute.

ಶ್ರೀ ಎಚ್. ಡಿ. ದೇವೇಗೌಡ.—ಈ ಒಂದು ಆರೋಪಣೆಗೆ ಅವಕಾಶ ಇರಬಾರದೆಂದು ಮಾಡಿದ್ದೇವೆ. ಜಿನೂನ್ ಇರಬಾರದು ; ಗ್ರಾಮಾಂತರ ಪ್ರದೇಶದಲ್ಲಿರುವವರ ಮಕ್ಕಳಿಗೆ ಇದು ಉಪಯೋಗವಿಲ್ಲ ಎನ್ನುವುದಾದರೆ, ಸಭೆಯ ಒಂದು ಅಪೇಕ್ಷೆಯಂತೆ, ಬದಲಾವಣೆ ಮಾಡುವುದಕ್ಕೆ ಸಾಧ್ಯವಿದೆ. ಇದರಲ್ಲಿ ರಾಜಕೀಯ ಬೆರೆಸುವುದಿಲ್ಲ.

೫-೦೦ ಪಿ. ಎಂ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ತಾವು ಮಾಡುತ್ತಿರುವ ಕೆಲಸ ತಮ್ಮ ಆತ್ಮಸಾಕ್ಷಿಗೆ ಒಪ್ಪುತ್ತದೆಯೇ? ತಾವೇ ಹೇಳಿದ್ದೀರಿ ಇದರಲ್ಲಿ ರಾಜಕೀಯವನ್ನು ಬೆರೆಸುವುದಿಲ್ಲವೆಂದು. ಆದರೆ ತಮ್ಮ ಆತ್ಮಸಾಕ್ಷಿಯಾಗಿ ಇದರಲ್ಲಿ ರಾಜಕೀಯವನ್ನು ಬೆರೆಸುವುದಿಲ್ಲವೇ ?

ಶ್ರೀ ಹೆಚ್. ಡಿ. ದೇವೇಗೌಡ —ನಾನು ಖಂಡಿತ ಇದರಲ್ಲಿ ಯಾವ ರಾಜಕೀಯವನ್ನು ಬೆರೆಸುತ್ತಿಲ್ಲ. ಅಂಥದರಲ್ಲಿ ಆತ್ಮಸಾಕ್ಷಿಯ ಪ್ರಶ್ನೆ ಎಲ್ಲಿ ಬರುತ್ತದೆ ? ಮೆಡಿಕಲ್ ಕಾಲೇಜ್‌ಗಳಲ್ಲಿ ಮತ್ತು ಇಂಜಿನೀಯರಿಂಗ್ ಕಾಲೇಜ್‌ಗಳಲ್ಲಿ ಹಾಗೂ ಡಿಪ್ಲೋಮಾ ತರಗತಿಗಳಲ್ಲಿ ಗೌರ್ನಮೆಂಟ್ ಸೀಟ್ಸ್ ಎಂದು ೫ ಹಾಗೂ ಐ. ಟಿ. ಐ. ಯಲ್ಲಿ ೫ ಸೀಟುಗಳನ್ನು ಮತ್ತು ಇತರೇ ಬೇರೆ ಬೇರೆ ಸಂಸ್ಥೆಗಳಲ್ಲಿ ಗೌರ್ನಮೆಂಟ್ ಸೀಟುಗಳನ್ನು ಇಟ್ಟಿದ್ದಾರೆ. ಇದರಲ್ಲಿ ಯಾರದಾದರೂ ಒತ್ತಡ ಬಂದಾಗ ಅವರಿಗೆ ಕೊಡುತ್ತಿದ್ದರು. ಆದರೆ ನಾವು ಏನು ಮಾಡಿದ್ದೇವೆ ಎಂದರೆ ಆ ರೀತಿಯ ಒತ್ತಡಗಳು ಬರುವುದಕ್ಕೆ ಅವಕಾಶ ಇರಬಾರದೆಂದು ಅದನ್ನು ನಿಲ್ಲಿಸಲು ನಿರ್ಣಯವನ್ನು ಕೈಗೊಂಡಿದ್ದೇವೆ. ಬೇಕಾದರೆ ಅದನ್ನು ಮತ್ತೆ ಸರ್ಕಾರ ಪರಿಶೀಲನೆ ಮಾಡಬಹುದು.

ಶ್ರೀ ಎಂ. ಎಸ್. ಕೃಷ್ಣನ್.—ಆ ರೀತಿಯಾಗಿ ತಾವು ಏನಾದರೂ ಸರ್ಕಾರಿ ಕೋಟಾ ಇಟ್ಟುಕೊಂಡಿದ್ದರೆ ತಮ್ಮ ಮೇಲೂ ಕೂಡ ಹಿಂದಿನ ಸರ್ಕಾರದಂತೆ ಆಪಾದನೆಗಳನ್ನು ಮಾಡುತ್ತಿದ್ದರು. ಆ ರೀತಿಯ ಆಪಾದನೆಗಳು ಬಾರದಂತೆ ತಡೆಗಟ್ಟಲು ಆ ಕ್ರಮ ಒಳ್ಳೆಯದೆಂದು ನನ್ನ ಭಾವನೆ.

ಶ್ರೀ ಹೆಚ್. ಡಿ. ದೇವೇಗೌಡ.—ಆ ಉದ್ದೇಶದಿಂದ ನಾವು ಆ ರೀತಿ ಮಾಡಿದ್ದೇವೆ.

ಶ್ರೀ ಪಿ. ಗೋವಿಂದ ಒಡೆಯ ರಾಜ್.—ಈಗ ಇಲ್ಲಿ ಮುಖ್ಯವಾಗಿ ಮೂರು ಪ್ರಶ್ನೆಗಳು ಇವೆ ಸರ್ಕಾರಿ ಸೀಟುಗಳಲ್ಲಿ ರಿಜರ್‌ವೇಷನ್ ಪಾಲಿಸಿ ಇದೆ. ಆದರೆ ಕ್ಯಾಪಿಟೇಷನ್ ಫೀ ತೆಗೆದುಕೊಂಡು ಸೀಟು ಕೊಡುವುದರಲ್ಲಿ ಸರ್ಕಾರಿ ಸೀಟುಗಳ ರಿಜರ್‌ವೇಷನ್ ಏತಕ್ಕೆ ಇಟ್ಟಿಲ್ಲ ? ಆದುದರಿಂದ ನಾನು ಹೇಳುವುದೇನೆಂದರೆ ಈ ೫೦ ಸಾವಿರ ರೂಪಾಯಿಗಳ ಕ್ಯಾಪಿಟೇಷನ್ ಫೀ ನಲ್ಲಿ ಕೂಡ ತಾವು ರಿಜರ್‌ವೇಷನ್ ಇಡಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಸದಸ್ಯರ ಸಲಹೆ ಪರಿಶೀಲಿಸಲಾಗುವುದು.

ಉಪಾಧ್ಯಕ್ಷರು.—ಮಾನ್ಯ ಬಂಗಾರಪ್ಪನವರು ಮಾತನಾಡಲಿ.

ಶ್ರೀ ಎಸ್. ಬಂಗಾರಪ್ಪ.—ಸ್ವಾಮಿ ನಾನು ಆಗಲೇ ಮುಗಿಸುವುದಕ್ಕೆ ರೆಡಿಯಾಗಿದ್ದೆ.

(ಗೊಂದಲ)

ನಾನು ಆ ವಿಷಯವನ್ನು ಅಲ್ಲಿಗೆ ಬಿಡುತ್ತೇನೆ.

ಶ್ರೀ ಎಂ. ವೀರಪ್ಪಮೊಯ್ಲಿ.—ಸ್ವಾಮಿ ಮಾನ್ಯ ಸದಸ್ಯರಾದಂಥ ಶ್ರೀಮಾನ್ ಬಂಗಾರಪ್ಪನವರ ಮುಗಿಸಬೇಕಾದರೆ ೫—೩೦ ನಿಮಿಷಗಳಾಗುತ್ತದೆ.

ಉಪಾಧ್ಯಕ್ಷರು.—ಇಲ್ಲಾ ಮಾನ್ಯ ಸದಸ್ಯರಿಗೆ ಇನ್ನು ಕೇವಲ ೫ ನಿಮಿಷಗಳು ಮಾತ್ರ ಇದೆ. ಅಷ್ಟರಲ್ಲಿ ಅವರು ಮಾತನಾಡಿ ಮುಗಿಸುತ್ತಾರೆ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರಾದಂಥ ಶ್ರೀಮಾನ್ ಒಡೆಯ ರಾಜ್‌ರವರು ಹೇಳಿದಂತೆ ೫೦ ಸಾವಿರ ರೂಪಾಯಿಗಳ ಕ್ಯಾಪಿಟೇಷನ್ ಫೀ ತೆಗೆದುಕೊಂಡು ಏನು ಸೀಟುಗಳು ಕೊಡುತ್ತಾರೆ, ಅದರಲ್ಲಿ ಕೂಡ ರಿಜರ್‌ವೇಷನ್ ಇಡಲಿ. ಆ ರೀತಿಯ ರಿಜರ್‌ವೇಷನ್ ಇವರು ಏತಕ್ಕೆ ಇಟ್ಟುಕೊಂಡಿಲ್ಲ ? ಅವರ ಪ್ರಶ್ನೆಗೆ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕಾಗುತ್ತದೆ. ಈ ೫೦ ಸಾವಿರ ರೂಪಾಯಿಗಳಿಗೆ ನಾವು ಬಡ್ಡಿ ಲೆಕ್ಕ ಹಾಕಿದರೆ ಸುಮಾರು ೫ ವರ್ಷಗಳಿಗೆ ಒಂದೂವರೆ ಲಕ್ಷ ರೂಪಾಯಿಗಳಾಗುತ್ತದೆ. ಈ ಎಲ್ಲಾ ದೃಷ್ಟಿಯಿಂದ ಈ ತಿದ್ದುಪಡಿಯಲ್ಲಿ ಕೆಲವು ಕಾಲಂಗಳಲ್ಲಿ ತಿದ್ದುಪಡಿ ತರದಿದ್ದರೆ ನಾವು ಸಾಮಾಜಿಕ ನ್ಯಾಯವನ್ನು ಕಲ್ಪಿಸಿಕೊಡುವುದಕ್ಕೆ ಆಗುವುದಿಲ್ಲ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಇದು ಬಹಳ ಪ್ರಮುಖವಾದಂಥ ವಿಷಯವಾಗುತ್ತದೆ ವಿರೋಧಪಕ್ಷದ ನಾಯಕರು ಮತ್ತು ಸದಸ್ಯರಿಂದ ಕೆಲವು ಒಳ್ಳೆಯ ಸಲಹೆಗಳು ಬರುತ್ತವೆ ಎಂದು ನಾನು ತಿಳಿದುಕೊಂಡಿದ್ದೇನೆ. ಮತ್ತು ಈ ಬಗ್ಗೆ ಬೇಕಾದರೆ ತಾವು ಒಂದು ಹೌಸ್ ಕಮಿಟಿಯನ್ನು ಮಾಡಿ ಆ ಕಮಿಟಿಯವರು ಕೂಲಂಕಷವಾಗಿ ವಿಷಯವನ್ನು ಪರಿಶೀಲನೆ ಮಾಡಲಿ. ಡೆವಲಪ್‌ಮೆಂಟ್ ಕೆಲಸಕಾರ್ಯಗಳಿಗೆ ಎಷ್ಟು ಗ್ರ್ಯಾಂಟ್ ಬೇಕಾಗುತ್ತದೆ ಎನ್ನುವುದನ್ನು ಅವರು ಪರಿಶೀಲನೆ ಮಾಡಲಿ. ಆ ನಂತರ ಸರ್ಕಾರ ಪರಿಶೀಲನೆ ಮಾಡುವುದಕ್ಕೆ ಆಗುತ್ತದೆ.

ಶ್ರೀ ಬೈರಪ್ಪಾಜಿ.—ಹೌಸ್ ಕಮಿಟಿ ಮಾಡುವುದಕ್ಕೆ ಬದಲು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ರೆಫರ್ ಮಾಡಲಿ.

SRI A. LAKSHMISAGAR.—What is contained in the Bill, before the House is not more than Rs. 5 000 This is the language that is used, i. e., the Government gets the discretion to fix the tuition fees. Now, the present tuititon fee was long long back fixed. In private collges government has not fixed any tutition fees. Then there are varying degrees of fixation and collection of tuition fees. Now government wants to take a decision in this behalf and come up with a rationale and also the other factors that should be taken into consideratoin are the running expenditure of the college and various other related factors. The running expe nditure of the college has gone up and the money that has been spent on so many other items of expendtiure connected with the administration of the college has also gone up So, we will take all these factors into consideration. It is not the intention of the government to unnecessarily burden the students in this behalf. That position has already been made clear. The provision is not more than Rs. 5,000/—.

ಶ್ರೀ ಬಿ. ಭೈರಪ್ಪಾಜಿ.—ಶ್ರೀ ದೇವೇಗೌಡರು ಹೇಳಿದರು ಏನೆಂದರೆ ಹೌಸ್ ಕಮಿಟಿ ಬೇಕಾದರೆ ವಿರೋಧ ಪಕ್ಷದವರು ಏನು ಅಭಿಪ್ರಾಯ ಪಟ್ಟಿದ್ದಾರೆ ಅದನ್ನು ಕೂಡ ಗಮನದಲ್ಲಿಟ್ಟುಕೊಂಡು ಮಾಡೋಣ, ಆದರೆ ಶ್ರೀ ಲಕ್ಷ್ಮೀಸಾಗರ್ ಅವರು ಹೌಸ್ ಕಮಿಟಿ ಮಾಡುವುದು ಬೇಡವೆಂದು ಹೇಳುತ್ತಿದ್ದಾರೆ, ಹೌಸ್ ಕಮಿಟಿ ಬೇಕಾಗಿಲ್ಲ ಎನ್ನುವ ಭಾವನೆಯನ್ನು ಅವರು ವ್ಯಕ್ತಪಡಿಸುತ್ತಿದ್ದಾರೆ. ಇಬ್ಬರು ಮಂತ್ರಿಗಳು ಕೂಡ...

MR. DEPUTY SPEAKER.—He has said, we will take into consideration the wishes of all the members.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧಕ್ಷರೇ, In Clause-4 Sub-Clause (1) (b) says: "The maximum number of students that could be admitted to a course of study in any education institution shall be such as may be fixed by the Government time to time." ಮಾನ್ಯ ಅಧ್ಯಕ್ಷರೇ. ೧೦ ಸೀಟು ಇರತಕ್ಕಂಥಾದನ್ನು ನಾಳೆ ಕೆಟ್ಟ ಹೆಸರು ಬಂದಿತು ಎಂಬ ದೃಷ್ಟಿಯಿಂದ ತಾವು ಜನರಲ್ ಫೂಲ್‌ಗೆ ಹಾಕಿದ್ದೀರಿ ಎಂಬ ಅಭಿಪ್ರಾಯವನ್ನು ಕೊಟ್ಟಿರಿ. ಇಲ್ಲಿ ಒಂದೊಂದು ಕಾಲೇಜಿಗೆ ಎಷ್ಟೆಷ್ಟು ಜನರನ್ನು ಅಡ್ಮಿಟ್ ಮಾಡಬೇಕೆಂದು ಕಾನೂನಿನ ಮಾತು ಕೂಡ ಇದೆ. ಒಂದೆ ಇದು ಇದೇ ಸದನದಲ್ಲಿ ಚರ್ಚೆಗೆ ಬಂದಿತ್ತು. ಒಂದು ಕಾಲೇಜಿಗೆ ನೂರು, ಇನ್ನೊಂದು ಕಾಲೇಜಿಗೆ ೧೨೦. ನೋಟಿಫಿಕೇಶನ್ ಇದೆ. ೧೦೦, ೧೨೦, ೧೩೦...

MR. DEPUTY SPEAKER.—You please give your suggestion to the Chair and the House as the what has to be done.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ನನ್ನ ಸಲಹೆ ಏನೆಂದರೆ, ಎಲ್ಲಾ ಅಧಿಕಾರಗಳನ್ನು ಸರ್ಕಾರ ಇಟ್ಟುಕೊಂಡಿರುವುದರಿಂದ ಯಾವ್ಯಾವ ಕಾಲೇಜುಗಳಲ್ಲಿ ಎಷ್ಟೆಷ್ಟು ಕೊಡುವುದರ ಬಗ್ಗೆ, ಮುಂಚೆ ಒಂದು ಕಾಲೇಜಿಗೆ ಇಷ್ಟು ಕೊಟ್ಟು, ಮತ್ತೊಂದು ಕಾಲೇಜಿಗೆ ಅಷ್ಟು ಕೊಡುವುದರಲ್ಲಿ ದೊಡ್ಡ ರಾಜಕೀಯವೇ ಇದೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಸರ್ಕಾರಿ ಮೆಡಿಕಲ್ ಕಾಲೇಜುಗಳ ಬಗ್ಗೆ ಇನ್‌ಟೇಕ್ ಫಿಕ್ಸ್ ಮಾಡುವುದಕ್ಕೆ ಸರ್ಕಾರಕ್ಕೆ ಅಧಿಕಾರ ಇಲ್ಲ. ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾ ಅವರು ಕೊಡುವ ಸೂಚನೆ ಪ್ರಕಾರ ಮಾಡಬೇಕಾಗುತ್ತದೆ. ೧೯೮೯ನೇ ಇಸವಿಯಲ್ಲಿ ಮೂರು ಮೆಡಿಕಲ್ ಕಾಲೇಜುಗಳನ್ನು ಸರ್ಕಾರ ಹೊಸದಾಗಿ ಪ್ರಾರಂಭ ಮಾಡಿತು. ಅದನ್ನು ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾದವರು ಮಾನ್ಯತೆ ಮಾಡಿಲ್ಲ, ತಮಗೆ ಗೊತ್ತಿದೆ, ಬೇರೆ ಉಳಿದ ಕಾಲೇಜುಗಳಲ್ಲಿ ಏನು ಇನ್‌ಟೇಕ್ ಇದೆ. ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾ ಎಷ್ಟು ಸೀಟು ಇರಬೇಕು ಅಂತ ಹೇಳಿದ್ದಾರೆ, ಅದರ ಮೇಲೆ ಒಂದು ಸೀಟು ಕೂಡ ನಾವು ಮಾಡಿಲ್ಲ. ಇನ್ನೊಂದು ಅಂಶ ಹೇಳಿದ್ದೀರಿ, ಅದೇನೆಂದರೆ ೬೫ರಿಂದ ೫೦ ಇಳಿಸಿದ್ದೇವೆ ಎಂದು, ೧೦೦ ಸೀಟು ಇದ್ದಂತಹ ಕಡೆ, ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾ ಇನ್‌ಟೇಕ್ ಎಷ್ಟು ಅಂತ ಫಿಕ್ಸ್ ಮಾಡಿದ್ದಾರೆ. ಕಳೆದ ಸಾರಿ ಏನು ಆಗಿತ್ತು ಎಂದರೆ ೧೨೫ ಇನ್‌ಟೇಕ್ ಇದ್ದದ್ದು ೧೩೦ ಆಗಿದೆ. ಇದರಲ್ಲಿ ೬೦ ಸೀಟುಗಳನ್ನು ಕೊಡುತ್ತಿದ್ದೇವೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ತಾವೇನು ನೂರಕ್ಕೆ ಅಂತ ಹೇಳುತ್ತಿದ್ದೀರಿ. ಹಿಂದಿನ ಸರ್ಕಾರದ ಆರ್ಡರ್‌ನಲ್ಲಿ ಜನರಲ್ ಪೂಲ್‌ನಲ್ಲಿ ೬೫ ಸೀಟುಗಳನ್ನು ಖಾಸಗಿಯವರಿಗೆ ಕೊಟ್ಟಿದ್ದಾರೆ, ಈಗ ನೀವು ೫೦ಕ್ಕೆ ಇಳಿಸಿದ್ದೀರಿ. ಅಂದರೆ ೧೫ರಷ್ಟು ಜನರಲ್ ಪೂಲ್‌ನಲ್ಲಿ ಕಡಿಮೆ ಮಾಡಿದ್ದೀರೇ ಹೊರತು ಜನರಲ್ ಪೂಲ್‌ನಲ್ಲಿ ಜಾಸ್ತಿ ಮಾಡಿಲ್ಲ.

SRI S. BANGARAPPA.—n Sub Clause (b) of Clause 4 it is said: "The maximum number of students that could be admitted to a course of study in an educational institution shall be such as may be fixed by the Government from Medical Council...ಇದರಲ್ಲಿ ಇಷ್ಟೇ ಇದೆ. ನೀವು ಇದರಲ್ಲಿ ಇಂಡಿಯನ್ ಮೆಡಿಕಲ್ ಕೌನ್ಸಿಲ್ ಎಂದು ಪ್ರಸ್ತಾಪ ಮಾಡಿದ್ದರೆ ನಮ್ಮ ಅಭ್ಯಂತರ ಇರಲಿಲ್ಲ. ಮಾನ್ಯ ಸಚಿವರು ಈ ವಿಚಾರದಲ್ಲಿ ತೋರಿಸಿರುವ ಕಳಕಳಿಯನ್ನು ನಾನು ಮೆಚ್ಚುತ್ತೇನೆ. ಇದರಲ್ಲಿ ಕ್ಲಾಸ್ - ಸಬ್‌ಕ್ಲಾಸ್ ಬಿ.ಆಫ್‌ಕ್ಲಾಸ್ ೪–ಇದರಪ್ರಸ್ತಾಪ ಇಲ್ಲ. ನಾಳೆ ಯಾವುದೇ ಸರ್ಕಾರ ಬರಬಹುದು. ಇದರಿಂದ ಏನಾಗುತ್ತದೆ ಎಂದರೆ ಮನಸ್ಸಿಗೆ ಬಂದ ಹಾಗೆ ಫಿಕ್ಸ್ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಮಾನ್ಯ ಅಧ್ಯಕ್ಷರೇ ಈ ಸಂದರ್ಭದಲ್ಲಿ ನಾನು ಸಲಹೆ ಮಾಡುವುದೇನೆಂದರೆ, ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾ ವಿಚಾರವನ್ನು ಇದರಲ್ಲಿ ಸೇರಿಸಿಕೊಳ್ಳಬೇಕಾಗಿತ್ತು. ಹಾಗೆಯೇ ಅನೇಕ ನ್ಯೂನತೆಗಳನ್ನು ಈ ಕ್ಲಾಸ್ ಬಗ್ಗೆ ಹೇಳಬೇಕು. ನನ್ನ ಸಲಹೆ ಏನೆಂದರೆ ಇದನ್ನು ಒಂದು ಸಾರಿ ಜಂಟಿ ಸಲಹಾ ಸಮಿತಿಗೆ ಕಳಿಸಿದರೆ ಅನುಕೂಲವಾಗುತ್ತದೆ. ಇದನ್ನು ಕೊಡಬೇಕು ಅಂತಿದ್ದರೆ ಜಂಟಿ ಸಲಹಾ ಸಮಿತಿಗೆ ಕಳಿಸಿ. ಸಂಪೂರ್ಣವಾಗಿ ವಿಚಾರ ಮಾಡಿ ಕ್ಯಾಪಿಟೇಷನ್ ಫೀಸ್‌ನ್ನು ಇಟ್ಟು ಅದನ್ನು ಮುಂದುವರಿಸುವ ಹಾಗಿದ್ದರೆ ಮಾತ್ರ ಇದನ್ನು ಮಾಡಬೇಕಾಗಿಲ್ಲ. ಇದನ್ನು ಅವರು ಸಂಪೂರ್ಣವಾಗಿ ತೆಗೆದುಹಾಕುವುದಕ್ಕೆ ಏನಾದರೂ ಮಾತು ಕೊಟ್ಟು ಜಂಟಿ ಸಲಹಾ ಸಮಿತಿಗೆ ಕಳಿಸಿದರೆ ಮಾತ್ರ ನಮ್ಮ ಅಭ್ಯಂತರ ಇಲ್ಲ. ಇಲ್ಲದಿದ್ದರೆ ಈಗ ಇರುವ ಹಾಗೆಯೇ ಪಾಸ್ ಮಾಡುವವರಿದ್ದರೆ ಅನ್ಯಾಯವಾಗುತ್ತದೆ. ಇದನ್ನು ನಾಳೆ ರಿಪೇರಿ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಕೆಟ್ಟ ಹೆಸರು ಬರುತ್ತದೆ ಮತ್ತು ಜನತೆಗೆ ಉತ್ತರ ಕೊಡಬೇಕಾಗುತ್ತದೆ. ಆದ್ದರಿಂದ ಇದನ್ನು ಮತ್ತೊಮ್ಮೆ ವಿಚಾರ ಮಾಡಬೇಕು. ನಾನು ಇದನ್ನು ಸಂಪೂರ್ಣವಾಗಿ ವಿರೋಧ ಮಾಡುತ್ತೇನೆ. ಇದನ್ನು ತಾವು ಪಾಸ್ ಮಾಡುವುದು ಬೇಡ. ಇದರಿಂದ ಜನತೆಗೆ ಕೂಡ ಅನ್ಯಾಯ ಮಾಡಿದಂತೆ ಆಗುತ್ತದೆ. ಅಲ್ಲಿರತಕ್ಕಂಥ ಕೆಟ್ಟ ಪರಿಣಾಮದಿಂದ ತಪ್ಪಿಸಿ ಹಾಕುವುದಕ್ಕೆ ಯಾರಿಗೂ ಸಾಧ್ಯವಿಲ್ಲ ಎನ್ನುವ ಮಾತನ್ನು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.